ಶ್ರೀ ನಿಡುಮಾಮಿಡಿ ಜಗದ್ಗುರು ಮಠದ ಸಂಕ್ಷಿಪ್ತ ಚರಿತ್ರೆ



ಲೇಖಕರು

ಎಂ.ಜಿ.ನಾಗರಾಜ್

ಶ್ರೀ ನಿಡುಮಾಮಿಡಿ ಜಗದ್ಗುರು ಮಠದ ಸಂಕ್ಷಿಪ್ತ ಚರಿತ್ರೆ

ಲೇಖಕರು
ಎಂ.ಜಿ.ನಾಗರಾಜ್

ಪ್ರಕಾಶಕರು:
ಶ್ರೀ ನಿಡುಮಾಮಿಡಿ ಜಗದ್ಗುರು ಮಠ
ಗೂಳೂರು ಮಹಾಸಂಸ್ಥಾನ
ಕಛೇರಿ : ೪೯/೧, ಹ.ಭ. ಸಮಾಜ ಬೀದಿ,
ಬಸವನಗುಡಿ, ಬೆಂಗಳೂರು -೫೬೦೦೦೪
ಸ್ಥಿರ ದೂರವಾಣಿ ಸಂಖ್ಯೆ : ೦೮೦-೨೬೫೭೯೫೩

SRI NIDUMAMIDI JAGADGURU MATHADA SANKSHIPTA CHARITRE

A brief historical and cultural study of the Sri Nidumamidi Jagadguru Matha in Gulur, Bagepalli Taluk, Chikkaballapur District, Written by M.G. Nagaraj, Principal (Retd.)

Published by : Sri Nidumamidi Jagadguru Matha, Guluru Mahasamsthana, # 49/1, H.B. Samaja Road, Basavanagudi, Bangalore-560004


First Impression : 2004
Second Impression : 2011
Third Impression : 2015
Pages: VIII + 88

ಮೊದಲ ಮುದ್ರಣ : ೨೦೦೪
ಎರಡನೇ ಮುದ್ರಣ : ೨೦೧೧
ಮೂರನೇ ಮುದ್ರಣ : ೨೦೧೫

ಪುಟಗಳು : VIII + ೮೮
ಬೆಲೆ: ರೂ. ೫೦-೦೦

ಮುದ್ರಣ:
ಕ್ರಿಯಾ ಪ್ರಕಾಶನ
ಸಂಪಂಗಿರಾಮ ನಗರ,
ಬೆಂಗಳೂರು-೨೭ ಮೊ: ೯೪೪೮೫೭೮೦೨೧
ದೂ: ೦೮೦-೨೨೨೩೪೩೭೯

ಅರ್ಪಣೆ



ಶ್ರೀ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಮಹಾ ಸ್ವಾಮಿಗಳು

ಪೀಠಾಧ್ಯಕ್ಷರು,
ಶ್ರೀ ನಿಡುಮಾಮಿಡಿ ಜಗದ್ಗುರು ಮಠ,
ಗೂಳೂರು ಮಹಾಸಂಸ್ಥಾನ
ಬಾಗೇಪಲ್ಲಿ (ತಾ) ಚಿಕ್ಕಬಳ್ಳಾಪುರ ಜಿಲ್ಲೆ

ಪರಿವಿಡಿ

ಮೊದಲ ಮುದ್ರಣಕ್ಕೆ ಬರೆದ
ಲೇಖಕರ ಮಾತು

ಚರಿತ್ರೆ : ನಡೆದು ಹೋದದ್ದು ಎನ್ನುತ್ತೇವೆ. ಚರಿತ್ರೆ ಎನ್ನುವ ಶಬ್ದದಲ್ಲಿ ಗತಿ, ನಡೆ ಎಂಬ ಅರ್ಥವೂ ಇದೆ. ಚರತ್ವವು ಅದಕ್ಕೆ ಇದೆ ಎಂದಾಗುತ್ತದೆ. ಅದು ಆಗಿ ಹೋದದ್ದಾದರೂ, ನಡೆದು ಬರುತ್ತಲೇ ಇರುತ್ತದೆ. ಬದುಕಿನ ಘಟನೆಗಳ ವಾಸ್ತವವನ್ನು ತಿಳಿಸುತ್ತಲೇ ಬರುತ್ತದೆ. ಜನ ಜೀವನದ ಮೇಲೆ ಆ ಘಟನೆಗಳು ಪರಿಣಾಮವನ್ನು ಉಂಟುಮಾಡಿದವು ಎಂದಾಗ ನಿಜವಾದ ಇತಿಹಾಸ, ಚರಿತ್ರೆ ಎನ್ನುವುದಾಗುತ್ತದೆ. ಹೀಗಾಗಿ ಅದು ಸ್ಥಗಿತವಲ್ಲ. ಜಂಗಮದ ನೆಲೆಯನ್ನು ಅಂತರ್ಗಾಮಿಯಾಗಿ ಅಪ್ಪಿಕೊಂಡೇ ಚಲಿಸುತ್ತ ಬರುತ್ತದೆ. ಇದು ಗೋಚರವಿದ್ದರೂ ಅಗೋಚರವೆಂಬ ಭಾವನೆ ನಮ್ಮಲ್ಲಿದ್ದರೆ ನಾವೇ ಅಚಾರಿತ್ರಿಕವಾಗುತ್ತೇವೆ. ಹಿಂದಿನ ಬಾಳು ಇಂದಿನ ಇತಿಹಾಸ. ಇಂದಿನ ಬಾಳು ಮಂದಿಗೆ ಇತಿಹಾಸ. ನೆನಪಿನ ಮೌಲ್ಯವನ್ನು ಚರಿತ್ರೆ ಗಳಿಸಿಕೊಂಡಷ್ಟೂ ಅದು ಜೀವಂತ. ಅಂಥ ಬಾಳು ಬಾಳಿದ ವ್ಯಕ್ತಿ, ಸಂಸ್ಥೆ, ಬದುಕಿನ ಯಾವುದೇ ಘಟಕವಾಗಲಿ ಅದಕ್ಕೆ ನಿರಂತರತೆ ಸಾವಯವವಾಗಿ ಬರುತ್ತದೆ. ನಡುವೆ ತಮಸ್ಸಿಗೆ ಅಧೀನವಾದರೆ ಮುಂದೆ ಬೆಳಕಿಗೆ ಬರುವುದಿಲ್ಲ. ಸ್ಮರಣೆಯ ಬಿಂದುವೂ ಆಗುವುದಿಲ್ಲ. ರಾಜ್ಯ, ರಾಜ ಅಳಿದಿರಬಹುದು; ಜನರು ಮರೆತು ಹೋಗಿರಬಹುದು – ಹೀಗೆನ್ನುವುದು ಅವರುಗಳ ಬಾಹ್ಯ ಭೌತಿಕ ಸ್ವರೂಪಕ್ಕೆ ಅಂಟಿದ ವಿಷಯ. ಸತ್ತ ವ್ಯಕ್ತಿಯ ಶರೀರವನ್ನು ಏಸುಕಾಲ ರಕ್ಷಿಸಿಟ್ಟಿದ್ದರೂ (ಪಿರಮಿಡ್ಡುಗಳಲ್ಲಿನ ಪಿಗ್ಮಿಗಳಂತೆ), ಆತ್ಮವಿಲ್ಲದಿದ್ದಾಗ ನಿಜಚರಿತ್ರೆ ಹೇಳಲು ಶಕ್ಯವಾಗುವುದಿಲ್ಲ. ಆದರೆ ಅವಶೇಷಗಳಿಂದ, ಆಗಿಹೋದದ್ದನ್ನು ಹೆಕ್ಕಲ ವಕಾಶವಾದರೆ ಚರಿತ್ರೆಯ ಘಟಕಗಳು ಪೂರ್ಣವಲ್ಲದಿದ್ದರೂ, ಸಾಕಷ್ಟು ಮಾಹಿತಿಯನ್ನೊದಗಿಸಬಲ್ಲವು. ಅದು ಬೌದ್ಧಿಕ ಹಾಗೂ ಭಾವನಾಶಕ್ತಿಯ ಹಂತಗಳಲ್ಲಿ ವ್ಯಕ್ತವಾಗುತ್ತದೆ ಎನ್ನಬೇಕು.

ಈ ಹಿನ್ನಲೆಯಲ್ಲಿ ಗಮನಿಸುವಾಗ ಇತಿಹಾಸ, ಚರಿತ್ರೆ ಎಂದರೆ ಕೇವಲ ರಾಜ, ರಾಜ್ಯಗಳ ನಡೆದುಹೋದ ಘಟನೆಗಳಷ್ಟಕ್ಕೆ ಸೀಮಿತಗೊಳ್ಳದೆ ಅಂದಂದಿನ ಬದುಕಿನ ಮೇಲೆ ಜನಜೀವನದ ಮೇಲೆ ಅವುಗಳು ಬೀರಿದ ಪರಿಣಾಮವೆಷ್ಟು ಎಂಬುದಕ್ಕೆ ಸಾಕ್ಷ್ಯಸಾಧನವಾಗಬೇಕು. ಇಂತಲ್ಲಿ ಒಂದು ಗುರುಪೀಠದ ಚರಿತ್ರೆ, ರಾಜನ ಚರಿತ್ರೆಗಿಂತ ಹೆಚ್ಚು ಸಮರ್ಥವಾಗಿರುತ್ತದೆ; ಗತಿಶೀಲವಾಗಿರುತ್ತದೆ. ಅದನ್ನು ಕೇವಲ ಸಾಂಪ್ರದಾಯಿಕ ಎನ್ನುವಂತಿಲ್ಲ, ಯಾವಾಗ ?

ರಾಜನ ಹೆಸರು, ಅವನು ಮಾಡಿದ ಕಾರ್ಯಗಳಿಂದಾಗಿ ಜನರ ನೆನಪಿನಲ್ಲಿ ಉಳಿಯಬಹುದು. ರಾಜನ ಕುರಿತಾದ ಭಾವನೆಗಳು ಹರಿದು ಬಂದ ಪರಂಪರೆ ಇರುವವರವಿಗೆ ಅದು ಸರಿ ರಾಜವಂಶ ಅಳಿದ ಮೇಲೆ, ಪರವಾಗಿ ವಕಾಲತ್ತು ಇರಿಸಿಕೊಂಡರಿವರು ಇರುವವರೆಗೂ ಪರವಾಗಿಲ್ಲ. ಆದರೂ ಆ ವಂಶದ ಪ್ರಸಿದ್ಧ ರಾಜರಷ್ಟೇ, ಸ್ಮರಣೆಗುಳಿಯುಬಹುದಷ್ಟೆ; ರಾಜವಂಶ ಇಡಿಯಾಗಿ ಅಲ್ಲ. ಗುರುಪೀಠಗಳು ಹಾಗಲ್ಲ. ಭಕ್ತರ ಶ್ರದ್ಧೆಯ ಮೇಲೆ ಅವಲಂಬನವಾಗಿರುತ್ತವೆ. ದಿಟ. ಅದನ್ನು ಸಾಂಪ್ರದಾಯಿಕ ಎಂದು ಭಾವಿಸುವುದುಂಟು.

ಗುರುಪೀಠ ಭಕ್ತರು, ಶಿಷ್ಯರು ಎಂಬ ಸಾಮಾನ್ಯ ಜನತೆಯೊಡನೆ ಸಾಮಾನ್ಯವಾಗಿ ಒಡನಾಡಿಕೊಂಡು ಬರುತ್ತದೆ. ರಾಜ ಹಾಗು ಶ್ರೀಮಂತರೊಡನೆಯೂ ಅದು ಸಂಪರ್ಕಗೊಂಡರೂ ಸಾಮಾನ್ಯ ಜನತೆಯ ನಿರಂತರ ಸಂಪರ್ಕ ಅದಕ್ಕಿರುತ್ತದೆ. ಶಿಷ್ಯ ಪರಂಪರೆ ಬೆಳೆದು ಬರುತ್ತಲೇ ಇರುತ್ತದೆ. ಕಾರಣ ಮನೆತನಗಳ ಭಕ್ತಿ, ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ನಂಬಿಕೆ, ಶ್ರದ್ಧೆಗಳ ಅವತರಣಗಳಲ್ಲಿ ಮುಂದುವರಿಯುತ್ತಲೇ ಹೋಗುತ್ತದೆ. ಹೀಗಾಗಿ ಗುರುಪೀಠಗಳಿಗೆ ಚರಿತ್ರೆ ಎಂಬುದು ಹಿಂದಿನ, ಇಂದಿನ, ಮುಂದಿನ ನಂಟು. ಅವಕ್ಕೂ ಏಳು ಬೀಳುಗಳಿರುತ್ತವೆ. ಆದರೆ ರಾಜವಂಶ ಮುಗಿದುಹೋದಂತೆ, ಅಳಿದುಹೋದಂತೆ , ಗುರುಪೀಠ ಮುಗಿದುಹೋಗುವುದಿಲ್ಲ. ಕಾರಣ ಪ್ರಮುಖವಾಗಿ ಜನರ ಅರ್ಥಾತ್ ಮನೆತನಗಳ ವಂಶಿಕರು ತಮ್ಮ ಸಾಂಸ್ಕೃತಿಕ ಒಟ್ಟಂದವನ್ನ ಜಾಗೃತಗೊಳಿಸಿಕೊಂಡೇ ಬರುತ್ತಿದ್ದಾರೆ. ಈ ಜನಸಂಪರ್ಕ ದಿಂದಾಗಿಯೇ ಗುರುಪೀಠಗಳ ಇತಿಹಾಸ ಜೀವಂತವಾಗಿರುತ್ತದೆ. ರಾಜವಂಶದಂತೆ ಕೇವಲ ಸ್ಮರಣೆಯ ಘಟಕವಾಗಿರದು. ಶ್ರೀ ನಿಡುಮಾಮಿಡಿ ಪೀಠವು ಹೀಗೆಯೆ ಒಂದು ಜಾಗೃತಸ್ಥಾನ ಪೀಠವಾಗಿದೆ.

ಶ್ರೀ ಪೀಠದ ಇತಿಹಾಸವು ಜ॥ ವಿರೂಪಾಕ್ಷ ದೇಶೀಕೇಂದ್ರ ಶಿವಾಚಾರ್ಯರ ಕರಕಮಲ ಸಂಜಾತರಾದ, ಗುಯಲೂರಿನಲ್ಲಿ ನಾರಿಕೇಳಪವಾಡ ತೋರಿ, 18 ಫಣಕಟ್ಟಿಗೆ ದೀಕ್ಷಾಗುರುಗಳಾಗಿ ಮಾನವೀಯ ಧರ್ಮಮೆರೆದು, ಧರ್ಮಗುರು ಪೀಠವಾಗಿಸಿದ 11ನೇ ಶತಮಾನದ ಆದಿಯ ಶ್ರೀ ಜ॥ ಚಂದ್ರಗುಂಡ ದೇಶಿಕೇಂದ್ರ ಶಿವಾಚಾರ್ಯರ ನಾರಿಕೇಳ, ಪವಾಡದ ನಿಜ ಸಂಕೇತದಿಂದ ಪ್ರತಿಷ್ಠಾಪನೆಯಿಂದ ಸ್ಥಾಯಿಗೊಳ್ಳುತ್ತದೆ. ಅವರ ನಂತರ ನಿಡುಮಾಮಿಡಿಯಲ್ಲಿ ಮಾಮಿಡಿಯ ಹಸಿರು ಹಾಗೂ ಫಲವಲಯ ನಿರ್ಮಿಸಿ ಬರವನ್ನು ಹಿಂಗಿಸಿದ ಮಾಮಿಡಿ ಪವಾಡದ ಜ॥ ಕರಿಬಸವ ದೇಶಿಕೇಂದ್ರ ಶಿವಾಚಾರ್ಯರು ಪೀಠದ ಹೆಸರಿಗೆ ಪರಿಸರವಾಚಿ ಫಲನಾಮವನ್ನು 12ನೇ ಶತಮಾನದಲ್ಲಿ ತಂದುಕೊಟ್ಟವರಾಗಿದ್ದಾರೆ. ವಿಜಯನಗರ

ಸಾಮ್ರಾಜ್ಯ ಸ್ಥಾಪನೆಯಲ್ಲಿ ಸಂಗಮ ಅರಸುವಂಶಕ್ಕೆ ತೀರ ಸ್ಮರಣೀಯ ಗುರುಗಳಾದ ಕಾಶಿವಿಲಾಸ ಕ್ರಿಯಾಶಕ್ತಿ ದೇವರಾಯ ಒಡೆಯರು 14-15ನೇ ಶತಮಾನದಲ್ಲಿ ಈ ಪೀಠದ ಚರಪಟ್ಟಾಧಿಕಾರಿಯಾಗಿ ಮೊದಲು ನಿಡುಮಾಮಿಡಿಯಲ್ಲಿ ವಾಸ್ತವ್ಯವಿದ್ದುದಕ್ಕೆ ಅಲ್ಲಿನ ಕ್ರಿ.ಶ. 1403ರ ಶಾಸನವೆ ಸಾಕ್ಷಿ ಆಗಿದೆ. ಅವರ ನಂತರ ಕ್ರಿ.ಶ. 1438ರ ಚಂದ್ರಭೂಷಣದೇವ ಒಡೆಯರೂ ಕ್ರಿಯಾಶಕ್ತಿ ದೇವರಾಯ ಒಡೆಯರಂತೆಯೇ ರಾಯರಾಜಗುರು ಮಹಾಮಂಡಲಾಚಾರ್ಯರಾಗಿ ಪೀಠದ ಚರಪಟ್ಟಾಧಿಕಾರಿಯಾಗಿದ್ದರು. ಅವರು ನಿಡುಮಾಮಿಡಿಯಲ್ಲಿದ್ದ ಬಗ್ಗೆ ಅಲ್ಲಿಯ ಬಸವ ಸ್ತಂಭಶಾಸನವೇ ಸಾಕ್ಷಿಯಾಗಿದೆ. ನಂತರ ಪೀಠವು ವೈದ್ಯಕೀಯ ಮೂಲಿಕಾವನದಿಂದ ಪ್ರಸಿದ್ಧಿಯಾಗಿ ವಿಜಯನಗರದರಸರು ಹಾಗು ಬಂಧುವರ್ಗಕ್ಕೆ ವೈದ್ಯಕೀಯ ಚಿಕಿತ್ಸೆಯನ್ನು ನೀಡಿದೆ. ತತ್ಪ್ರೇರಿತವಾಗಿ 'ಬಸವರಾಜೀಯ' ಎಂಬ ವೈದ್ಯಕೀಯ ಗ್ರಂಥವೂ ಪೀಠದ ಶಿಷ್ಯರಿಂದ ಬರೆದುಬಂದಿದೆ.

ಗುಮ್ಮನಾಯಕನ ಪಾಳೆಪಟ್ಟಿನ 'ವೇಕರ ಚುಂಚಲು'ಗಿರಿಜನ ನಾಯಕರಿಗೆ ಗುರುಗಳಾಗಿ ಮಾರ್ಗದರ್ಶನ ನೀಡಿ ರಾಜಗುರುಗಳಾಗಿ ಆ ರಾಜ್ಯಸ್ಥಾಪನೆಗೆ ಪ್ರೇರಕವಾಗಿ ಈ ಪೀಠದ ಜಗದ್ಗುರುಗಳು ಆಗಿ ಹೋಗಿದ್ದಾರೆ; ಹಾಗೆಯೇ ಜ॥ಚಂದ್ರಗುಂಡರ ಕಾಲದಿಂದಲೇ ಹೈಹಯ ರಾಜ ವಂಶದ 'ಸಜ್ಜನರಿಗೂ' ದೀಕ್ಷಾಗುರುಗಳಾಗಿ, ರೆಡ್ಡಿ ರಾಜವಂಶಿಕರಿಗೆ, ಹಂಡೆ ಕುರುಬವಂಶದ ದೊರೆಗಳಿಗೆ ನೆರವಾಗಿ ಕುಲೋದ್ಧಾರ ಮಾಡಿದ್ದಾರೆ. ದಲಿತ ವರ್ಗದ ಛಲವಾದಿಗಳಿಗೆ 18 ಫಣಕಟ್ಟಿನ ಉಭ-ಶುಭಗಳಲ್ಲಿ ಗಂಟೆ-ಬಟ್ಟಲಿನ ಶಿಖಾಮುದ್ರೆಯ ಚಾಲ್ತಿಯನ್ನು ಅನುಗ್ರಹಿಸಿ ರಥಸಪ್ತಮಿಯಲ್ಲಿ ಅವರನ್ನೆಲ್ಲ ಆದರವನ್ನು ತೋರಿದ್ದಾರೆ.

ಆಧುನಿಕ 20ನೇ ಶತಮಾನದಲ್ಲಿ ಡಾ॥ ಶ್ರೀ ಜಚನಿ ಮಹಾಸನ್ನಿಧಿಯವರು ಸುಮಾರು 300 ಕೃತಿಗಳನ್ನು ಬರೆದು ಪ್ರಕಟಿಸಿ ಪೀಠದ ಮಣಿಹವನ್ನು ಸಾಹಿತ್ಯಕವಾಗಿ ಬಹು ಘನತೆಗೇರಿಸಿ, ಸಾಮಾಜಿಕ ಮಣಿಹಗಳಲ್ಲಿಯೂ ತೊಡಗಿ, ದಲಿತರನ್ನು ತೆಕ್ಕೆಗೆ ತೆಗೆದುಕೊಂಡವರಾಗಿದ್ದಾರೆ; ಸಾಹಿತ್ಯಪೀಠ ಎಂಬ ಹೆಸರಾಗಲೂ ಕಾರಣರಾಗಿದ್ದಾರೆ. ಡಾ॥ ಶ್ರೀ ಜಚನಿ ಕರಕಮಲ ಸಂಜಾತರಾದ ಇಂದಿನ ಪೀಠಾಧ್ಯಕ್ಷರಾದ ಶ್ರೀ ವೀರಭದ್ರ ಚನ್ನಮಲ್ಲ ಮಹಾಸನ್ನಿಧಿಯವರು ಇಂದಿನ ಪೀಠಾಧ್ಯಕ್ಷರಾಗಿ ಮಾನವಧರ್ಮ ಪೀಠ ಎಂಬ ಪರ್ಯಾಯನಾಮ ಬರುವಷ್ಟು ಪೀಠವನ್ನು ಪ್ರಸಿದ್ಧಿಗೊಳಿಸಿದ್ದಾರೆ. ತಮ್ಮ ಪ್ರಖರ ವಿಚಾರಧಾರೆಯಿಂದ, ಶೋಷಿತವರ್ಗದ ದನಿಯಾಗಿ, ಪೀಠದ ಅಭಿವೃದ್ಧಿಗಾಗಿ, ಸಾಮಾಜಿಕ, ಸಾಂಸ್ಕೃತಿಕ ಮಣಿಹಗಳ ಮೂಲಕ ದುಡಿಯುತ್ತಿದ್ದಾರೆ.

ಪೀಠದ ಸಮಗ್ರ ಚರಿತ್ರೆಯನ್ನು ಬರೆಯಲು ನನಗೆ ಪೀಠಾಧ್ಯಕ್ಷರು ಅಪ್ಪಣೆ ಕೊಡಿಸಿದರು. ಸದ್ಯಕ್ಕೆ ಸಂಕ್ಷಿಪ್ತ ಚರಿತ್ರೆಯನ್ನು ಮಾತ್ರ ಸಮಯಾಭಾವದ ಕಾರಣ ಬರೆಯಲಾಗಿದೆ. ಪೀಠ ಎಂದರೆ ಕೇವಲ ಗುರುಗಳ ಪಾರಂಪರಿಕ ಚರಿತ್ರೆ ಆಗಬಾರದೆಂದು, ಪೀಠಕ್ಕಾಗಿ ದುಡಿದವರ, ಶಿಷ್ಯಪರಂಪರೆಯ ಚರಿತ್ರೆಯೂ ಮುಖ್ಯ ಅದರಿಂದ ಅವರಿಗೊಂದು ಧನ್ಯತಾಭಾವ ಎಂಬ ದೃಷ್ಟಿಯಿಂದ ಆ ಚರಿತ್ರೆಯನ್ನು ಇಲ್ಲಿ ಸಂಕ್ಷಿಪ್ತವಾಗಿ ಅಳವಡಿಸಿದೆ. ಮುಂದೆ ಪೀಠದ ಎಲ್ಲಾ ಶಿಷ್ಯ ಮನೆತನಗಳ ಚರಿತ್ರೆಯನ್ನು ಸೇರಿಸಿ ಬರೆಯಲಾಗುತ್ತದೆ.

ಈ ಮಣಿಹಕ್ಕೆ ನನ್ನನ್ನು ತೊಡಗಿಸಿದ ಪೂಜ್ಯ ಸನ್ನಿಧಿಯವರಿಗೆ ನನ್ನ ಶರಣು ಶರಣಾರ್ತಿಗಳು.

ಕೃತಿಯನ್ನು ಸಕಾಲಕ್ಕೆ ಮುದ್ರಿಸಿಕೊಟ್ಟ ಓರಿಯಂಟ್ ಪವರ್ ಪ್ರೆಸ್ ಮಾಲೀಕರಾದ ಜಿ.ಎಸ್. ಕುಮಾರಸ್ವಾಮಿ ಅವರಿಗೆ ಧನ್ಯವಾದಗಳು.

ಬೆಂಗಳೂರು
28–1–2001

ಎಂ.ಜಿ. ನಾಗರಾಜ್
ಸ್ವಭಾನುನಾಮ ಸಂವತ್ಸರ
ಮಾಘ ಶುದ್ಧ ಸಪ್ತಮಿ ಬುಧವಾರ.

ಮೂರನೇ ಮುದ್ರಣಕ್ಕೆ ಬರೆದ ಲೇಖಕರ ಮಾತು

ನಿಡುಮಾಮಿಡಿ ಜಗದ್ಗುರು ಮಠ, ಗೂಳೂರು ಮಹಾಸಂಸ್ಥಾನದ ಪೀಠಾಧ್ಯಕ್ಷರಾಗಿ ಶ್ರೀ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಮಹಾಸನ್ನಿಧಿಯವರು ಅಧಿಕಾರ ಸ್ವೀಕರಿಸಿ 25 ವರ್ಷಗಳಾಗಿರುವ ಸವಿನೆನಪಿಗೆ ಈ ಕೃತಿಯು ಮೂರನೇ ಮುದ್ರಣವನ್ನು ಕಾಣುತ್ತಿರುವುದು ನನಗೆ ಅತೀವ ಸಂತಸ ತಂದಿದೆ. ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಸಮಾಜದ ಗುಣಾತ್ಮಕ ಪರಿವರ್ತನೆಗೆ ಅಪೂರ್ವ ಹೋರಾಟವನ್ನು ಹುಟ್ಟುಹಾಕಿ, ಹೊಸ ಸಂಚಲನವನ್ನು ಉಂಟು ಮಾಡಿರುವ ಪೂಜ್ಯರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತಾ, ಈ ಮೂರನೇ ಮುದ್ರಣದ ಕೃತಿಯನ್ನು ಭಕ್ತಿಪೂರ್ವಕವಾಗಿ ಅರ್ಪಿಸಿದ್ದೇನೆ.

ಮೂರನೆಯ ಮುದ್ರಣವನ್ನು ಸುಂದರವಾಗಿ ಮುದ್ರಿಸಿರುವ ಕ್ರಿಯಾ ಪ್ರಕಾಶನದ ಮಾಲೀಕರಿಗೆ ಹಾಗು ಸಿಬ್ಬಂದಿ ವರ್ಗಕ್ಕೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಬೆಂಗಳೂರು
27.12.2015

ಡಾ. ಎಂ.ಜಿ. ನಾಗರಾಜ್

ಶ್ರೀ ನಿಡುಮಾಮಿಡಿ ಜಗದ್ಗುರು ಮಠ

ಅರಿವನ್ನು ಕೊಡುವ ನೆಲೆ ಗುರುಪೀಠ. ಅರಿವು ಬದುಕಿನ ಯಾವ ನೆಲೆಗೂ ಬಿತ್ತರಗೊಳ್ಳಬೇಕಾದ ಬೆಳಕು. ಮಾನವ ಬಾಳುವೆಗೆ ಬೇಕಾದ ಬಗೆ ಇದು. ಗುರು ಎಂದಾಗ ಭಕ್ತನ ಅಸ್ತಿತ್ವ ಜೊತೆಯಾಗಿಯೆ ಸಾಗಿ ಬರುತ್ತದೆ. ಭಕ್ತ ವಿನಮ್ರತೆಯ ಸಂಕೇತ. ಅಹಂಕಾರವನ್ನು ತವಿದ ಸಂಕೇತ. ಅವನು ಗುರುವಿನಿಂದ ಅರಿವು ಪಡೆಯುತ್ತಾನೆ. ಅಂತಾಗಿ ಭಕ್ತನ ಅಸ್ತಿತ್ವವನ್ನು ಗುರುತಿಸುವವನು ಗುರು. ಇಂಥ ಗುರುವಿರುವ ಪೀಠಗಳೇ ಮನುಷ್ಯ ಧರ್ಮವನ್ನು ಎತ್ತಿಹಿಡಿಯುವಂಥ ನೆಲೆಗಳೆಂದು ನಮ್ಮ ಸಾಂಸ್ಕೃತಿಕ ವಿಶ್ವಾಸ, ಶ್ರದ್ಧೆ. ವೀರಶೈವವು ಇಂಥ ಸಂಘಟನೆಯನ್ನು ನಿದರ್ಶಿಸಿದೆ.

ಪಾರಂಪರಿಕ ನೆಲೆಯಲ್ಲಿ ವೀರಶೈವಧರ್ಮ ಪ್ರತಿಷ್ಠಾ ಗುರುವರ್ಗದ ಪೀಠಗಳನ್ನು ಪಟ್ಟದ ಸಿಂಹಾಸನ ಎನ್ನುವುದು ರೂಢಿ. ಮಹಾಸಂಸ್ಥಾನ ಎಂದೂ ಅವುಗಳನ್ನು ಕರೆಯುವುದೂ ಸಂಪ್ರದಾಯವೆ. ಈ ಧರ್ಮದ ಇನ್ನೊಂದು ವಿಭಾಗವಾಗಿ ಶೂನ್ಯಸಿಂಹಾಸನವನ್ನು ವಿರಕ್ತವರ್ಗದ ಗುರುಪರಂಪರೆಯೆಂದು ಕರೆಯುತ್ತಾರೆ. ಇವನ್ನು ನಿರಂಜನಪೀಠ ಎನ್ನುವುದುಂಟು. ಉಭಯ ಗುರುಪೀಠಗಳ ಸಂಯುಕ್ತ ರೂಪವು ತಮಿಳುನಾಡಿನಲ್ಲಿ 'ವೀರಸಿಂಹಾಸನ ಮುರುಘಾಬ್ರಹ್ಮತರ್ಕ' ಎಂಬ ಹೆಸರಿನಲ್ಲಿ ಕಾಣಿಸಿಕೊಂಡಿದೆ. ಪಟ್ಟದ ಗುರುವರ್ಗದ ಸಿಂಹಾಸನದ ಆದಿಯನ್ನು ಸಾಂಪ್ರದಾಯಿಕವಾಗಿ ಶ್ರೀ ರೇಣುಕರಿಗೆ ಆರೋಪಿಸಲಾಗುತ್ತದೆ. ಶೂನ್ಯಸಿಂಹಾಸನದ ಆದಿಯನ್ನು ಅಲ್ಲಮಪ್ರಭುವಿಗೆ ಆರೋಪಿಸಲಾಗುತ್ತದೆ. ಇದು ಜಂಗಮದ ನೆಲೆ ಎಂದು ಪರಿಕಲ್ಪನೆ ಇದೆ.

ಈ ವೀರಶೈವ ಪೀಠಗಳಲ್ಲಿ ಸ್ಥಿರ, ಚರ ಎಂಬ ವಿಂಗಡನೆಯೂ ಇದೆ. ಸ್ಥಿರ ಪಟ್ಟಾಧಿಕಾರಿ, ಚರಪಟ್ಟಾಧಿಕಾರಿ ಎಂಬ ಅಧಿಕಾರ ವಿಭಾಗಗಳುಂಟು. ಸ್ಥಿರ ಪಟ್ಟಾಧಿಕಾರಿಗಳಿಗೆ ಮಾತ್ರ ತಮ್ಮ ಉತ್ತರಾಧಿಕಾರಿಯನ್ನು ನೇಮಿಸುವ ಪರಿಪಾಠ ಉಂಟು. ಕಾರಣ ಪೀಠದ ನೀತಿ ನಿಯಮಗಳನ್ನು ನಿಯೋಜಿಸುವವರಿವರು. ಮೇಲಾಳಿಕೆಯ ಅಧಿಕಾರವಿರುವ ಹಿರಿಯ ಗುರುಸ್ಥಾನಿಗಳಿವರು. ಈ ನೀತಿ ನಿಯಮಗಳನ್ನು (Policies) ಚಾಲೂಗೊಳಿಸುವ ಪ್ರತಿಬದ್ಧ ಅಧಿಕಾರದವರು ಚರಪಟ್ಟಾಧಿಕಾರಿಗಳು. ಇವರು ಸದಾ ಸಂಚಾರಿಗಳು, ಧರ್ಮಪ್ರಚಾರದ ಜಂಗಮಸ್ಥಾನಿಗಳು. ಸ್ಥಿರಪಟ್ಟಾಧಿಕಾರದವರು ಪೀಠದ ಮೂಲನೆಲೆಯಲ್ಲಿರುವಂಥವರು. ಚರಪಟ್ಟಾಧಿಕಾರಿಗಳು ಪೀಠದ ಪರವಾಗಿ ಬೇರೆಡೆ ಸಮಾನ ಅಧಿಕಾರವನ್ನು ಚಲಾಯಿಸಬಲ್ಲವರು. ಅಂತಿಮ ತೀರ್ಪು ಸ್ಥಿರಪಟ್ಟಾಧಿಕಾರಿಗಳದಾದರೂ, ಅವರು ಚರಪಟ್ಟಾಧಿಕಾರಿಗಳ ಚರ್ಯೆಯನ್ನು, ಮಾತನ್ನು ಮಾನಿಸಬೇಕಾದ ಹೊಣೆ ಇದೆ. ಒಂದು ರೀತಿಯಲ್ಲಿ, ನಿರ್ದೇಶಕರ ಜೊತೆ ಅಪರ ನಿರ್ದೇಶಕರಿರುವಂತೆ

(Additional Director) ಇದು. ಚರಪಟ್ಟಾಧಿಕಾರಿಗಳನ್ನು ಅಪರ ಸ್ಥಿರಪಟ್ಟಾಧಿಕಾರಿಗಳೆನ್ನಬಹುದು. ಕೆಲವೇಳೆ ಸ್ಥಿರಪಟ್ಟಾಧಿಕಾರಿಗಳು ಸಾಂದರ್ಭಿಕವಾಗಿ, ಅನುಕೂಲಗಳ ಕಾರಣ ಚರಪಟ್ಟಾಧಿಕಾರಿಗಳಿದ್ದ ನೆಲೆಗೆ ಹೋಗಿ ಉಭಯ ಹೊಣೆಯನ್ನು ನಿತ್ತರಿಸಬಹುದು. ಆ ನೆಲೆ ಸ್ಥಿರಪಟ್ಟದ ಶಾಖೆಯೆ. ಸ್ಥಿರಪಟ್ಟದವರು ಅಲ್ಲಿಯೆ ಉಳಿದುಕೊಂಡರೆ ಖಾಸಸನ್ನಿಧಿ ಎಂದು, ಮೂಲಪೀಠದಷ್ಟೇ ಪ್ರಭಾವಿಯಾಗಿ ಕರೆಸಿಕೊಳ್ಳುವುದುಂಟು. ಸಾಂದರ್ಭಿಕವಾಗಿ ಚರಪಟ್ಟಾಧಿಕಾರಿಗಳು ಸ್ಥಿರಪಟ್ಟಾಧಿಕಾರಿಗಳಾಗಿ ಭಡ್ತಿಯಾಗುವುದುಂಟು. ಹಾಗಾಗಿ ಸ್ಥಿರಪಟ್ಟಾಧಿಕಾರದ ಮೂಲ ನೆಲೆಯಲ್ಲಿರದೆ ಚರಪಟ್ಟಾಧಿಕಾರದ ನೆಲೆಯಲ್ಲಿಯೇ ಉಳಿದುಕೊಂಡು ಗುರುಗಳು ವ್ಯವಹಾರವನ್ನು ನಡೆಸಿರಬಹುದು. ಅಂದರೆ ಯಾವ ನೆಲೆಯಲ್ಲಿ ಎಲ್ಲಿಯವರೆಗೆ ಪೀಠದ ಪ್ರಭಾವವು ವೃದ್ಧಿಗುಣಿತವಾಗುತ್ತಿರುವುದೋ ಅಲ್ಲಿಯವರೆಗೆ ಇಂಥ ಪರ್ಯಾಯಗಳು ನಡೆಯುತ್ತಲೇ ಹೋಗುತ್ತದೆ. ಆದರೆ ಸಾಮಾನ್ಯವಾಗಿ ಪೀಠದ ಪ್ರಭಾವಿ ವರ್ಚಸ್ಸಿನ ಸ್ಥಿರ, ಚರ ಪಟ್ಟದ ಗುರುಗಳ ಗದ್ದುಗೆಗಳು ಸ್ಥಿರಪಟ್ಟಾಧಿಕಾರದ ಗುರುಪೀಠದ ನೆಲೆಯಲ್ಲಿಯೆ ಪ್ರಸ್ತುತಗೊಳ್ಳುತ್ತವೆ. ಇದೆಲ್ಲಾ ಗೂಳೂರು ಮಹಾಸಂಸ್ಥಾನದಲ್ಲಿರುವ ಮೂಲ ಧರ್ಮಗುರುಪೀಠ ಹಾಗು ನಿಡಿಮಾಮಿಡಿ (ಆಂಧ್ರ) ಯಲ್ಲಿರುವ ಅದರ ಶಾಖೆ ಶ್ರೀ ನಿಡುಮಾಮಿಡಿ ಪೀಠಕ್ಕೆ ನೇರ ಅನ್ವಯವಾಗುವಂಥ ವಿಷಯವಾಗಿದೆ. ಈ ವಿವರವನ್ನು ನಂತರ ಪರಿಶೀಲಿಸಬಹುದು.

ಇನ್ನು ಸ್ಥಿರ ಮತ್ತು ಚರಗಳು ಗುರುಸ್ಥಳಕ್ಕೆ, ಜಂಗಮಸ್ಥಳಕ್ಕೆ ಸಂಬಂಧಗೊಂಡಂಥವಾಗಿವೆ. ಸ್ಥಿರಪಟ್ಟದಲ್ಲಿ 'ಸಾಭಾರಿ'ತನವಿದ್ದು ಗುರುಪೀಠದ ಮಣಿಹವನ್ನು ಸಾಮಾಜಿಕ ಧಾರ್ಮಿಕ ಆಚಾರ ವಿಚಾರಗಳ ಮೂಲಕ ಮಾಡಬೇಕು ಅರ್ಥಾತ್ ಕರ್ಮದೀಕ್ಷೆ ಇವರಿಗಿದೆ. ಅಂತಾಗಿ ಗೋತ್ರ ಸೂತ್ರ ಶಾಖೆ ಇತ್ಯಾದಿಗಳು ಇವರಿಗುಂಟು.

ಸೃಷ್ಟಿಯು ಬ್ರಹ್ಮಸೃಷ್ಟಿ, ಶಿವಸೃಷ್ಟಿ ಎಂದು ಎರಡು ವಿಧ. ಬ್ರಹ್ಮಸೃಷ್ಟಿಯಲ್ಲಿ ವರ್ಣಾಶ್ರಮ ವ್ಯವಸ್ಥೆ ಬಂತು. ಅದಕ್ಕಿಂತ ಮುಂದಿನದಾದ ಶಿವಸೃಷ್ಟಿಯಲ್ಲಿ ವೀರ, ನಂದಿ, ಭೃಂಗಿ, ವೃಷಭ, ಸ್ಕಂದ ಇತ್ಯಾದಿ ಗೋತ್ರಪುರುಷರು ಇದ್ದು, ವರ್ಣವ್ಯವಸ್ಥೆಯ ಮುಂದಿನವರಾಗಿದ್ದಾರೆ. ಅಂತಾಗಿ ಅವರು ಅತಿವರ್ಣಾಶ್ರಮಿಗಳು. ಈ ಗೋತ್ರಜರೆಲ್ಲ ಅತಿವರ್ಣಾಶ್ರಮಿಗಳು ಎಂದು ಗುರುವರ್ಗದಲ್ಲಿ ವಿದ್ವತ್ ವಾಖ್ಯಾನವಿದೆ. ಇದಕ್ಕೆ ಇತಿಹಾಸದ ಸ್ಪರ್ಶವಿದೆ. ಈ ಸಂದರ್ಭದಲ್ಲಿ ಭದ್ರಗೋತ್ರ ಎಂಬುದು ಶಿವ ಸಂಬಂಧಿಯಾದ ಮಂಗಳಗೋತ್ರವಾಗಿದ್ದು ಶಿವಗೋತ್ರ ಎಂಬ ಸಂಯುಕ್ತ ರೂಪದಲ್ಲಿದೆ. ಇವರಲ್ಲಿ ಪುತ್ರಸಂತಾನ ಪರಂಪರೆ ಇರುವ ಕಾರಣ, ಗುರು ಬ್ರಹ್ಮಚಾರಿಯಾದರೂ, ಪೂರ್ವಾಶ್ರಮದ ಕುಟುಂಬಗಳೊಡನೆ ವಾಸ ನಿಷಿದ್ಧವಲ್ಲ.

ಚರಪಟ್ಟದ ಗುರುಪೀಠವು, ಸ್ಥಿರಪಟ್ಟದ ಶಾಖೆಯೆ, ಗುರುಪೀಠದ ಸ್ಥಿರಪಟ್ಟಾಧಿಕಾರ ಮೂಲದೇವರಿದ್ದಂತೆ, ಗುಡಿಯ ಮೂಲಮೂರ್ತಿ ಇದ್ದಂತೆ; ಅದೇ ಚರಪಟ್ಟಾಧಿಕಾರಕ್ಕೆ

ಸ್ಥಿರದ ಎಲ್ಲ ಮಣಿಹಗಳ ಅಧಿಕಾರ, ಸ್ವರೂಪವಿದ್ದರೂ ಅದು ಸ್ಥಿರದ ಶಾಖಾನುವರ್ತಿಯಾಗಿರುವಂಥದ್ದು. ಅದು ಉತ್ಸವಮೂರ್ತಿ ಇದ್ದಂತೆ; ಉತ್ಸವ ದೇವರಿದ್ದಂತೆ; ಮೆರೆವಿಗ್ರಹವಿದಂತೆ. ಸ್ಥಿರ ಒಳಗಿನ ಜಂಗಮನಾದರೆ ಚರ ಹೊರಗಿನ ಜಂಗಮ. ಆದರೆ ವಿರಕ್ತ ಪೀಠದಲ್ಲಿರುವಂತೆ ಈ ಚರಪಟ್ಟಾಧಿಕಾರಿ, ನಿರಾಭಾರಿ ಅಲ್ಲ. ನಿರಂಜನ ಅಲ್ಲ. ಲಯದೀಕ್ಷೆ ಇವರದಲ್ಲ. ಅದೇ ಶೂನ್ಯಸಿಂಹಾಸನದ ವಿರಕ್ತ ಜಂಗಮ: ನಿರಾಭಾರಿ, ನಿರಂಜನ, ಅನುಭಾವಿ. ಲಯದೀಕ್ಷೆ ಹೊಂದಿದಾತ. ಅಂತಾಗಿ ಗೋತ್ರ ಸೂತ್ರ ಶಾಖೆಯ ಉಸಾಬರಿ ಇಲ್ಲ. ವಿರಕ್ತನಾದ ಮೇಲೆ ಪೂರ್ವಾಶ್ರಮದ ಬಾಂಧವ್ಯದ ಸಹವಾಸ ಕಡಿದುಹೋಗುತ್ತದೆ. ಇಲ್ಲಿ ಶಿಷ್ಯಸಂತಾನ ಪರಂಪರೆ ಇದೆ. ಈ ವಿರಕ್ತ ಜಂಗಮನ ಬಳಿ ತರಬೇತಿ ಹೊಂದಿದ ಶಿಷ್ಯರೋ ಅಥವಾ ಸಮಾಜದ ಭಕ್ತರಿಂದ ಸಮ್ಮತಿ ಪಡೆದೋ ಪೀಠದ ಉತ್ತರಾಧಿಕಾರಿಗಳಾಗುವಂಥ ಸಂಪ್ರದಾಯವಿದೆ. ಇವರು ಸದಾ ಸಂಚಾರಿಗಳು. ಅಂತರಂಗದ ಜ್ಞಾನ ಮುಖ್ಯ; ಹಾಗು ವೈರಾಗ್ಯವೇ ಮುಖ್ಯ ಲಕ್ಷಣ. ಈ ಹಿನ್ನೆಲೆಯಲ್ಲಿ ಗಮನಿಸುವಾಗ, ಚರಪಟ್ಟಾಧಿಕಾರದಲ್ಲಿ ಮುಖ್ಯವಾಗಿ 'ಕರ್ಮದೀಕ್ಷೆ'ಯ ಎಲ್ಲ ಸಂಸ್ಕಾರಗಳ ಅಧಿಕಾರವಿದ್ದು, ಪಾರ್ಶ್ವಿಕವಾಗಿ ವಿರಕ್ತಸಂಪ್ರದಾಯದ ಕೆಲ ಲಕ್ಷಣಗಳೂ ಮಗ್ನವಾಗಿರುವುದು ಕಾಣುತ್ತದೆ. ಚರಪಟ್ಟಾಧಿಕಾರ ಒಂದು ರೀತಿ ಗುರು-ವಿರಕ್ತ ಸಮನ್ವಯಾಧಿಕಾರದ್ದು ಎನ್ನಬೇಕು.

ದೇವಾರಾಧನೆಯ ಆಗಮಿಕ ಆಚರಣೆಗಳಲ್ಲಿ, ಉತ್ಸವಮೂರ್ತಿ ಅಥವಾ ಮೆರೆವಿಗ್ರಹ ಗರ್ಭಗೃಹದಲ್ಲಿರದೆ, ಜಳಕಕ್ಕೆ ನದಿಗೆ ಹೋದರೆ ಮೂಲಮೂರ್ತಿಗೆ ಯಾವ ಅಭಿಷೇಕ ಅರ್ಚನೆ ಇತ್ಯಾದಿ ಭಕ್ತರ ಸಾಮಾಜಿಕ-ಧಾರ್ಮಿಕ ಆಶಯಗಳ ಆಚರಣೆ ಇರುವುದಿಲ್ಲ. ಚರಮೂರ್ತಿಯಾದ ಮೆರೆವಿಗ್ರಹ ಬಂದ ಮೇಲೆಯೆ ಮೂಲಮೂರ್ತಿಗೆ ಎಲ್ಲ ನಿಮಿತ್ತಗಳೂ ನಡೆಯುತ್ತದೆ. ಅಂದರೆ ಸ್ಥಿರಮೂರ್ತಿ, ಚರಮೂರ್ತಿಗಳ ಪರಸ್ಪರ ಆಲಂಬನೆ, ಅವಿಭಾಜ್ಯತೆಯ ಸಂಕೇತವಿಲ್ಲಿದೆ. ಹಾಗೆಯೆ ಸ್ಥಿರ ಪಟ್ಟಾಧಿಕಾರ, ಚರಪಟ್ಟಾಧಿಕಾರಗಳಲ್ಲಿ ಆಲಂಬನ, ಅವಿಭಾಜ್ಯತೆ.

ಜನತೆ ಹೊರಗೆ ಚರಮೂರ್ತಿ ಅಥವಾ ಮೆರೆವಿಗ್ರಹವನ್ನು ಒಯ್ದು ಪೂಜಿಸುವುದು ಸ್ಥಿರಮೂರ್ತಿ ಅಥವಾ ಮೂಲಮೂರ್ತಿಯ ಪ್ರತೀಕವಾಗಿಯೆ. ರಥದ ಮೇಲೆ ಕುಳಿತ ಉತ್ಸವಮೂರ್ತಿಗೆಸೆದ ಹಣ್ಣು, ದವನ, ಮೂಲಮೂರ್ತಿಗೆ ತಲುಪುತ್ತದೆ ಎಂಬ ಭಾವ ಅವರಿಗಿದೆ. ಮನೆಯ ಬಳಿ ಬಂದ ದೇವರಗುಡಿಯಾದ ಮಹಾದೇವರ ಚರಸಾನ್ನಿಧ್ಯವಾದ ರಥಕ್ಕೆ ನಮಿದು ಫಲ-ಪತ್ರೆಯನ್ನು ಅರ್ಪಿಸುವ ಜನತಾ ಸಂಪ್ರದಾಯವೇ ನಮ್ಮ ಜನರ ಒಳಗಿನ ಒಲವಿನ ಭಕ್ತಿ; ಸ್ಥಿರಭಕ್ತಿಯು ಅರ್ಪಿಸಿದ ಚರಭಕ್ತಿಯ ರೂಪ. ಹೀಗೆಯೇ ಸ್ಥಿರಪಟ್ಟಾಧಿಕಾರದ ಮಹತ್ವಕ್ಕೆ ಸ್ಪಂದಿಸುವುದು ಚರಪಟ್ಟಾಧಿಕಾರದ ಯೋಗ. ಇಂದು ಈ ವ್ಯತ್ಯಾಸಗಳು ಗೌಣವಾಗಿ, ಸಾಮಾಜಿಕ

ಸ್ಥಿತ್ಯಂತರಗಳಲ್ಲಿ ಗುರು-ವಿರಕ್ತರ ಮಣಿಹಗಳು ಪರಸ್ಪರ ವಿನಿಮಯುವಾಗಿರುವಲ್ಲಿ ಹೊಂದಾಣಿಕೆ, ಸಮನ್ವಯವೇ ಮುಖ್ಯವಾಗಿದೆ.

'ಗುರು-ಲಿಂಗ-ಜಂಗಮ' ಎನ್ನುವಲ್ಲಿ ಪಾರಿಭಾಷಿಕ ಅರ್ಥಗಳಿವೆ. ಶಿವನೇ ತಾನಾಗಿರುವ ಶಿವಯೋಗಿಗೆ 'ಜಂಗಮ' ಎನ್ನುವುದು ವೈದಿಕ ನಿಘಂಟಿನ ಮಾತು. ಜನಹಿತಕ್ಕಾಗಿ ಸಂಚರಿಸುವವ; ಜನರನ್ನು ಭಕ್ತಿ ಮಾರ್ಗದಲ್ಲಿ ಒಳಗೊಳಿಸಲು ಸಂಚರಿಸುವವ 'ಜಂಗಮ'. ತನ್ನನ್ನು ತಾನರಿತು ಎಲ್ಲೂ ಸುಳಿಯದೆ ಒಂದು ನೆಲೆಯಲ್ಲಿ ಇರುವಾತ ಸ್ವಯಜಂಗಮ. ಈ ಎರಡನ್ನೂ ಮೀರಿದವನೆ ಪರಜಂಗಮ. ಅಂದರೆ ಎರಡನ್ನೂ ಸಮಭಾವದಿಂದ ನೋಡುವವನು; ಕೇವಲವಾಗಿ ನೋಡುವ ಕೈವಲ್ಯನು.

ಒಂದು ಕಾಲಕ್ಕೆ ಆದಿ ಜನಾಂಗಗಳನ್ನು ಪುರಸ್ಕರಿಸಿ, ಸಂಸ್ಕರಿಸಿ, ತಮ್ಮಲ್ಲಿ ಒಳಗು ಮಾಡಿಕೊಂಡಿದ್ದ ಜಾತಿಭೇದ ಮಾಡದಿದ್ದ ವ್ರಾತ್ಯ ಪಾಶುಪತರು, ಕರಲಿಂಗಪೀಠಾರ್ಚಕರು ವೀರಶೈವ ಶಿರೋವೃತಿಗಳು, ಪಾಣಿಪೀಠಾರ್ಚಕರು, ಮುನಿಗಳು, ಜಂಗಮರೆಂದು ವರ್ಣಿತರಾಗಿದ್ದಾರೆ. ವ್ರಾತ್ಯರಾಜರಿಗೆ ವ್ರಾತ್ಯಪಾಶುಪತ ಜಂಗಮರೇ ರಾಜಗುರು ಸ್ಥಾನದಲ್ಲಿದ್ದರು. ಈ ವೇದಕಾಲೀನ ಚರಮೂರ್ತಿಗಳೇ ಸದ್ಯದ ಜಂಗಮರು ಎಂದು ಆ॥ವಿ॥ ಎಂ.ಜಿ. ನಂಜುಂಡಾರಾಧ್ಯರು ಅಭಿಪ್ರಾಯ ಪಡುತ್ತಾರೆ.

ಇವರು ಜನತೆಯ ಗುರುಗಳಾಗಲು ಇದ್ದ ಸಂವಿಧಾನ ಹೀಗಿದೆ:

> ವೀರ ಮಾಹೇಶ್ವರಾಚಾರ ಏಕೋತ್ತರ ಶತಾನ್ವಿತಾ: ಪ್ರಾಣಲಿಂಗಾಂಗ ಸಂಭೂತ ಭಸ್ಮಲೇಪನ ತತ್ತರಾ:।
>
> ತ್ರಿಷಷ್ಠಿ ಶೀಲ ಸಂಪನ್ನಾಃ ಧರ್ಮ ಜ್ಞಾನೈಕ ಸಾಧನಾಃ ಜಗತಾಂ ಗುರುವಃ ಸರ್ವೇಭವಂತೀತಿ ಸಂಶಯ:
>
> (-ವೀರಾಗಮ)

ಜನತೆಯ ಗುರುಗಳೆಂದರೆ ಜಂಗಮರೆ, ವೀರಮಾಹೇಶ್ವರಾಚಾರ್ಯರೆ. ಈ ವೀರ ಮಾಹೇಶ್ವರಾಚಾರ್ಯರು, ಏಕೋತ್ತರಶತಸ್ಥಲ ಸಂಪನ್ನರು; ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗಾಂಗ ಸಂಭೂತ ಭಸ್ಮಲೇಪನ ತತ್ಪರರು. ೬೩ ಶೀಲಸಂಪನ್ನರು. ಧರ್ಮಜ್ಞಾನ, ಅನುಭವಗಳ ಸಾಧನಗಳನ್ನು ಉಳ್ಳವರು. ಹೀಗಾಗಿ ಪುರಾತನರು, ಆದ್ಯರು ಎಂದೆನಿಸಿದರು. ಇವರು ಇರುವಡೆ ಮಠ ನಿರ್ಮಾಣ, ಮಹಾಸಂಸ್ಥಾನಗಳ ಕುರುಹಾದ ಮಠಶೈವ ಸ್ಥಾಪನೆ ಎಲ್ಲ ಉಂಟು. ಇದೆಲ್ಲ ಏಕಿ ! ಭಕ್ತನೊಡನೆ ಹದುಳ ಭಾವಕ್ಕೆ, ಶ್ರೇಯಭೋಗಕ್ಕೆ, ಇರುವುದು; ಗುರು, ಲಿಂಗ,

ಜಂಗಮ– ತ್ರಯಸಂಗಮವು ಭಕ್ತನೊಡನೆಯ ಅವಿಭಾಜ್ಯ ಸಂಬಂಧಕ್ಕೆ ಮೀಸಲಾಗಿರುವುದು, ಇದೇ ಆಗಿದೆ. ಜನತೆಯೊಡನೆ ಜತನವಾಗುವ ಜಂಗಮನ ನಡೆ ಇದು.

ಸ್ಥಿರಪಟ್ಟದ ಜಂಗಮನಾಗಲಿ, ಚರಪಟ್ಟದ ಜಂಗಮನಾಗಲಿ ಜಗದ ಹಿತವನ್ನು ಬಯಸುವ, ಜಗದ ಹಿತಕ್ಕೆ ದುಡಿಯುವ ಜಂಗಮನಾಗಬೇಕು. ಆಧ್ಯಾತ್ಮದ ತೇರನ್ನು, ಸಾಮಾಜಿಕ ಚಕ್ರದಲ್ಲಿ ಚಲಿಸುವ ಬಗೆಯಾಗಬೇಕು. ಹೀಗಾಗಿ ಜಗತ್ತಿಲ್ಲದೆ ಜಂಗಮನಿಲ್ಲ; ಜಂಗಮನಿಲ್ಲದೆ ಜಗತ್ತಿಲ್ಲ. ಅರ್ಥಾತ್ ಭಕ್ತನಿದ್ದಾಗ ಗುರು; ಗುರುವಿದ್ದಾಗ ಭಕ್ತ. ಅಂತೇ ಮಾನವರಿಗಾಗಿ ಮಹಾಸಂಸ್ಥಾನ; ಮಾನವರಿಗಾಗಿ ಮಹಾದೇವ; ಮಾನವರಿಂದ ಅವರಿಬ್ಬರೂ. ಅದಕ್ಕೆ ಅನುಗುಣವಾಗಿ ಸಾಧನೆ, ಅರ್ಹತೆಯೂ ಗುರುವಿಗೂ ಬೇಕು, ಭಕ್ತನಿಗೂ ಬೇಕು. ಪೀಠದ ಮೇಲೆ ಭಕ್ತಿ ಗೌರವಗಳು ಬೆಳೆಯುತ್ತಾ ಹೋಗಲು ಈ ಸಾಮರಸ್ಯ ಸಂಬಂಧ ಬೇಕು. ಈ ಹಿನ್ನೆಲೆಯಲ್ಲಿ ಗೂಳೂರಿನಲ್ಲಿರುವ ಮೂಲ ಧರ್ಮಗುರುಪೀಠ – ಆಂಧ್ರದಲ್ಲಿರುವ ಶ್ರೀ ನಿಡುಮಾಮಿಡಿ ಪೀಠದ ಮಣಿಹ ನಮ್ಮ ಮುಂದೆ ನಿಲ್ಲುತ್ತದೆ. ಸ್ಥೂಲವಾಗಿ ಅವುಗಳ ಇತಿಹಾಸವನ್ನು ಇಲ್ಲಿ ಸದ್ಯ ಮಂಡಿಸಲಾಗಿದೆ.

ಈ ಪೀಠದ ಇತಿಹಾಸಕ್ಕೆ ಕಾರಣರಾದವರು ಶ್ರೀ ಶೈಲದಿಂದ ಬಂದ ಜ॥ ಚಂದ್ರಗುಂಡ ದೇಶೀಕೇಂದ್ರರು ೧೮ ಪಣಕಟ್ಟಿನ ಜನರು ಇವರನ್ನು ಧರ್ಮಗುರುಗಳೆಂದು ಕರೆದು ಗೌರವಿಸುತ್ತಿದ್ದರು. ಅನ್ಯರೂ ಹಾಗೆಯೇ ಪರಿಭಾವಿಸಿದ್ದರು. ಸುಮಾರು ಸಾವಿರ ವರ್ಷದ ಹಿಂದೆ ಕೋಲಾರ ಜಿಲ್ಲೆ ಬಾಗೇಪಲ್ಲಿ ತಾಲ್ಲೂಕು ಗೂಳೂರಿಗೆ ಜ॥ ಚಂದ್ರಗುಂಡರು ಬಂದವರಾಗಿದ್ದರು. ಗುಯ್ಯಲೂರು, ಗೂಳಿಕುಳಿತ ಊರು ಎಂಬ ಸ್ಥಳನಾಮಗಳು ಪವಾಡಗಳ ಹಿನ್ನೆಲೆಯಲ್ಲಿ ಈ ಗ್ರಾಮಕ್ಕೆ ಅಂಟಿದೆ. ಈಗಿನ ಗೂಳೂರು ದಿಂದ ಸು. ೧ ಕಿ.ಮೀ. ದೂರದ ಹೊರವಲಯದಲ್ಲಿ ವಿಶಾಲಕೆರೆಯ ಬದಿಗೆ ಈ ಮಹಾಸಂಸ್ಥಾನ ಪೀಠವಿದೆ.

ಪುಲ್ಲಕವಿಯ 'ಪಂಡಿತಾರಾಧ್ಯ ಚರಿತ್ರಮು'ವಿನಲ್ಲಿ (ಪು.೭೮) ನಲ್ಲಿ ಹೀಗಿದೆ:

'ಅಂತಟನು ಧಾತ್ರಿ ಶ್ರೀ ವಿರೂಪಾಕ್ಷ ದೇಶಿಕೇಂದ್ರ ಕರಕಮಲೋದ್ಭವ ಚಂದ್ರಗುಂಡ ದೇಶಿಕೇಂದ್ರುಡು' (ಆ.೨, ಪು.೨, ಪು.೭೮)

ಅಂದರೆ ಜ॥ ಚಂದ್ರಗುಂಡ ದೇಶಿಕೇಂದ್ರರು, ಜ॥ ವಿರೂಪಾಕ್ಷದೇಶಿಕೇಂದ್ರರ ಕರಕಮಲ ಸಂಜಾತರೆಂಬುದು ಸ್ಪಷ್ಟ. ಗೋಳ ಮತ್ತು ಗುಂಡು ಎಂಬ ಸಾಮ್ಯಾರ್ಥ ಶಬ್ದಗಳ ಹಿನ್ನೆಲೆಯಲ್ಲಿ 'ಚಂದ್ರಗುಂಡ'ದವರಾದ ಪಂಡಿತಾರಾಧ್ಯ ಪರಂಪರೆಯ ಜ॥ ವಿರೂಪಾಕ್ಷದೇಶಿಕೇಂದ್ರರು ಶ್ರೀಶೈಲದ 'ಚಂದ್ರಗುಂಡ' ಎಂಬಲ್ಲಿ ಪ್ರತ್ಯೇಕ ಸಿಂಹಾಸನ ಪೀಠ ಹೊಂದಿದ್ದು. 'ಚಂದ್ರಗುಂಡ' ಎಂಬ ಮಠದ ನೆಲೆಯ ಹೆಸರಿನಲ್ಲಿಯೇ

ಕರಕಮಲಸಂಜಾತರನ್ನಾಗಿ ಮಾಡಿ ಪೀಠದ ಜಗದ್ಗುರುವಾಗಲು ಚಂದ್ರಗುಂಡ ದೇಶಿಕೇಂದ್ರರನ್ನು ಸಿದ್ಧಮಾಡಿದಂತಿದೆ. ಈ ಚಂದ್ರಗುಂಡ ದೇಶಿಕೇಂದ್ರರು ೧೧ನೇ ಶತಮಾನದ ದೇವರದಾಸಿಮಯ್ಯನಿಗೆ ದೀಕ್ಷಾಗುರು ಆಗಿದ್ದರು. ದೇವರದಾಸಿಮಯ್ಯನ ಮಗನ ಹೆಸರು 'ವಿರೂಪಾಕ್ಷ' ಎಂದಿದ್ದುದು, ಪೀಠದ ಗುರುಪರಂಪರೆಯ ಪ್ರಭಾವದ ದೃಷ್ಟಿಯಿಂದಲೂ ಗಮನಾರ್ಹ. ಸುಮಾರು ೧೦ನೇ ಶತಮಾನದ್ದು ಎನ್ನಲಾದ ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕು ಅಂಕನಾಥಪುರದ ಶಾಸನದಲ್ಲಿ

೧	ಕಗುಣ[ಗ]	೬	ವಣಸ	೧೧	ಳ್ವಯ್ಯಲ್ಚ
೨	ಶೀಲಾಚಾ	೭	ದೇವರ ದಾ	೧೨	ಮಾಳೊಡೆ
೩	ಮ್ವನ್ನರಪ್ಪ	೮	ಶ್ರೀ ಮ	೧೩	ತಲೆಯ
೪	ದಡಿಗ	೯	ಯ್ಯನತ	೧೪	ಸನಂ ಗೆಯ್ದು
೫	ಯ್ಯನ ಮ	೧೦	ಣ್ಣ ಗಡಜ್ಗ		

– ಎಂದು ಬರುವ ಸಾಲಿನಲ್ಲಿ ಶೀಲವಂತ ದೇವರದಾಸಿಮಯ್ಯನನ್ನು ೧೧ನೇ ಶತಮಾನದ್ದು ಎನ್ನಬೇಕಾದ ಶಾಸನದಲ್ಲಿ ಪ್ರಸ್ತಾಪಿಸಲಾಗಿದೆ. ಕಾಯಕ ಮಾಡುವಲ್ಲಿ ಶೀಲವಂತಿಕೆಯನ್ನು ತೋರಿದವ, ತನ್ನ ಗುಣಗಳಿಗೂ ನೆರವಾದವ ಎಂದು ಅರ್ಥೈಸಲಾಗಿದೆ. ಇಲ್ಲಿ 'ತಲೆಯಸನಂ ಗೆಯ್ದ' ಎನ್ನುವಲ್ಲಿ 'ತಲೆವಸನಂ ಗೆಯ್ದ' ಎಂದು ಓದಿಕೊಳ್ಳಬಹುದಾದರೆ ಗುರುವಿಗೆ ದೇವರದಾಸಿಮಯ್ಯನ ನೇಯ್ಗೆಯ ದಿವ್ಯವಸ್ತ್ರಾರ್ಪಣೆಯ ಸೂಚನೆ ಆಗುತ್ತದೆ. ಇದೇ ಜಿಲ್ಲೆಯ ಕ್ರಿ.ಶ. ೧೨೪೮೮ರ ಹೊಳೆನರಸೀಪುರ ತಾಲ್ಲೂಕು 'ತವನಂದಿ' ಶಾಸನದಲ್ಲಿ 'ತವನಿಧಿ' ಎಂಬ ಗ್ರಾಮನಾಮವೇ ಉಕ್ತವಾಗಿದೆ. ಇಂದಿನ 'ತವನಂದಿ'ಯ ಪ್ರಾಚೀನ ರೂಪ 'ತವನಿಧಿ'ಯೆ. ದೇವರ ದಾಸಿಮಯ್ಯನಿಗೆ 'ತವನಿಧಿ' ಶಬ್ದ ತೀರ ನಿಕಟವಾದದ್ದು. ಈ ದೇವರದಾಸಿಮಯ್ಯ ತಾನು ನೇಯ್ದ ದಿವ್ಯ ವಸ್ತ್ರವನ್ನಿತ್ತು 'ತವನಿಧಿ ಪ್ರಸಾದ' ಪಡೆದವನು. (ಇಲ್ಲಿ ಭೂಮಿ ಸಂಬಂಧದ 'ಪೆನ್ನೆಗುಡಜ್ಗ ' ಹಾಗು 'ಯಸನಂಗೈದು' ಎಂಬುದನ್ನು ಸಂನ್ಯಸನ ಎಂದು ಅರ್ಥೈಸುವುದಕ್ಕಿಂತ ದೇವರ ದಾಸಿಮಯ್ಯನ ಶಿವಗಣ, ಶೀಲಾಚಾರ, ವಸ್ತ್ರಾರ್ಪಣೆ ಸಂದರ್ಭವೇ, ತವನಿಧಿ ಗ್ರಾಮದ ಅಸ್ತಿತ್ವದ ಹಿನ್ನೆಲೆಯಲ್ಲಿ ಹೆಚ್ಚು ಸೂಕ್ತವಾಗುತ್ತದೆ. ಆದಾಗಿ ಕಾಲವನ್ನು ೧೧ನೇ ಶತಮಾನವೆಂದು ಗಣನೆ ಗೈಯುವುದೂ ಸೂಕ್ತವೆನಿಸುತ್ತದೆ. ಹೀಗಾಗಿ ದೇವರದಾಸಿಮಯ್ಯ ಹಾಗು 'ತವನಿಧಿ' ಶಬ್ದಗಳು ಈ ಪ್ರದೇಶದ ಪ್ರಾಚೀನ ಶಾಸನಗಳಲ್ಲಿ ಕಂಡುಬರುವಲ್ಲಿ ಜ॥ ಚಂದ್ರಗುಂಡರು ಹಾಗು ಶ್ರೀ ಧರ್ಮಗುರು ನಿಡುಮಾಮಿಡಿ ಪೀಠದ ಪ್ರಭಾವವು ಇಲ್ಲಿ ಕಂಡು ಬಂದು, ಐತಿಹಾಸಿಕತೆಗೂ ಪೂರಕವಾಗಿದೆ ಎನ್ನಬಹುದು. ವಿರೂಪಾಕ್ಷ ದೇಶಿಕೇಂದ್ರರು ಹಾಗು ಚಂದ್ರಗುಂಡ ದೇಶಿಕೇಂದ್ರರು ಶ್ರೀಶೈಲದ ಚಂದ್ರಗುಂಡ ಪರಂಪರೆಯನ್ನು ಮುಂದುವರಿಸಿದ ಪೀಠಾಧಿಕಾರಿಗಳಾದ ಕಾರಣ ಗೂಳೂರು

ಮಹಾಸಂಸ್ಥಾನಕ್ಕೆ ನಿಡುಮಾಮಿಡಿ ಪವಾಡವೂ (ವಿವರ ಮುಂದಿದೆ) ಸೇರಿ ವಿಶೇಷಣ ಸಹಿತ ಹೆಸರು ಚಾಲ್ತಿಗೆ ಬಂತು.

ಗುರು ವಿರೂಪಾಕ್ಷ ದೇಶಿಕೇಂದ್ರರ ಆದೇಶ ಹಾಗು ೧೧ನೇ ಶತಮಾನದ ಆರಂಭದ ದಶಕದ ಹೈಹಯ ವಂಶದ ರಾಜೇಂದ್ರಚೋಳನ ಬಿನ್ನಹದಂತೆ ಜ॥ ಚಂದ್ರಗುಂಡ ದೇಶಿಕೇಂದ್ರರು ಶ್ರೀಶೈಲದಿಂದ, ಚೋಳನ ರಾಜಧಾನಿ ಗೊಯ್ಯದವಾಡಿಗೆ (=ಗುಯ್ಯಲೂರು =ಗುಯಲೂರು=ಗೂಳೂರು) ಮೊದಲಾಗಿ ಬಂದರು. ಯುದ್ಧದ ಹತ್ಯಾದೋಷದಿಂದ ಮಾನಸಿಕ ನೆಮ್ಮದಿಗೆಟ್ಟಿದ್ದ ದೊರೆಯನ್ನು ಸಂತೈಸಿದರು. ದೋಷವು 'ಗುಯ್' ಎಂದು ಹೋದ ಕಾರಣ ಗುಯಲೂರು ಎಂಬ ಹೆಸರಾಯಿತು ಎಂಬ ಸಾಂಪ್ರದಾಯಿಕ ಸ್ಥಳನಾಮ ಪ್ರಮೇಯವೇನೋ ಇದೆ. ವಾಸ್ತವವಾಗಿ ಈ ನೆಲೆ ಅಸಿತವಕ್ತ್ರ ಕಾಳಾಮುಖರ ಒಂದು ವರ್ಗದ 'ಗುಹ್ಯ' (ರಹಸ್ಯ)ಸ್ಥಳವಾಗಿತ್ತು. ಬಾಯ್ದೆರೆಯಲ್ಲಿ 'ಗುಯ್ಯ'ವೆಂದಾಗಿ ಜ॥ ಚಂದ್ರಗುಂಡರು ಗೋತ್ರಪುರುಷ ಮಹಾವೃಷಭನನ್ನು (ಗೂಳಿ) ಪ್ರತಿಷ್ಠಾಪಿಸಿದ ಕಾರಣ, ಗೂಳಿಕುಳಿತ ಊರು, 'ಗೂಳೂರು'ಎಂದು ಅವರಿಂದಾಗಿ 'ಗುಯಲೂರು' ವಿನೊಡನೆ ಸಮೀಕರಣಗೊಂಡು ಪ್ರಸಿದ್ಧಿಗೊಂಡಿತೆನ್ನಬೇಕು.

ಜ॥ ಚಂದ್ರಗುಂಡರು ಈ ರಾಜೇಂದ್ರಚೋಳನ ಉದ್ಯಾನವನದಲ್ಲಿ (ಹಾಲಿ ಪೀಠದ ಪರಿಸರ) ಶಿವಪೂಜೆ ಮಾಡುವಲ್ಲಿ ಪ್ರಸಾದಾರ್ಪಣ ಕಾತುರರಾಗಿ ಬಳಿ ಇದ್ದ ತೆಂಗಿನ ಮರದ ಫಲದತ್ತ ದಿಟ್ಟಿ ಇಟ್ಟರು. ಆಗ ತೆಂಗಿನ ಮರವು ಬಾಗಿ ಫಲ ನೀಡಿದ ಪವಾಡವನ್ನು (ಸಾಮಯಿಕವಾಗಿ ಕಳಿತು ಕಳಚಿ ಬಿದ್ದುದನ್ನು ಶಿವಪೂಜಾ ಸಮಯದಲ್ಲಿ ಗ್ರಹಿಸಿ ಪ್ರಸಾದಕ್ಕಿಟ್ಟ ತೆಂಗಿನ ಫಲದ ಸಂದರ್ಭವೆನ್ನಬೇಕು) ತೋರಿದರಂತೆ. ನಿಡಿದಾದ ತೆಂಗು ನೀಡಿನ ಫಲದ ನೆಲೆ ಇದಾದ ಕಾರಣ 'ನೀಡು'ಶಬ್ದವೆ 'ನಿಡು' ಎಂಬ ರೂಪಾಂತರ ವಿಶೇಷಣವಾಗಿ ಉಭಯಾರ್ಥಕವಾಗಿ ಧರ್ಮಗುರು ಶ್ರೀ ಚಂದ್ರಗುಂಡ ಸ್ಥಾಪಿತ ಈ ವೀರಶೈವ ಮಹಾಸಂಸ್ಥಾನ ಪೀಠದ ಹೆಸರಿಗೆ ಹೊಂದಿಕೊಂಡಿತು. 'ಮಾಮಿಡಿ' ಎಂಬ ಗ್ರಾಮನಾಮಗಳು ಬೇರೆಡೆಯೂ ಇರುವ ಕಾರಣ (ಪೆನುಗೊಂಡೆ- ಹೈದರಾಬಾದ್ ಹಾದಿಯಲ್ಲಿ) ಚಂದ್ರಗುಂಡರ ಪವಾಡದ ಕಾರಣವಿಟ್ಟು 'ನಿಡು' ಎಂಬ ಶಬ್ದಕ್ಕೆ ಮಾಮಿಡಿ ಪವಾಡ ಮೆರೆದ ಜ॥ ಕರಿಬಸವೇಂದ್ರರ ಸಂದರ್ಭವನ್ನು ಸಂಯುಕ್ತಗೊಳಿಸಿ 'ನಿಡುಮಾಮಿಡಿ' ಎಂಬ ಶಬ್ದಸಂಯುಕ್ತವನ್ನು ರೂಢಿಗೆ ಕಾಲಾಂತರದಲ್ಲಿ ತರಲಾಗಿರಬೇಕು. ಪೂರ್ವದ ಜ॥ ಚಂದ್ರಗುಂಡರ ನಾರಿಕೇಳ ಪವಾಡವನ್ನು ಅರಿತು ನಿಡುಮಾಮಿಡಿ ಎಂಬ ಶಬ್ದದಲ್ಲಿ ಐಕ್ಯಗೊಳಿಸಿ ಚನ್ನಬಸವಪುರಾಣದ ವಿರೂಪಾಕ್ಷ ಪಂಡಿತ, ಗುರುರಾಜ ಚಾರಿತ್ರ್ಯದ ಸಿದ್ಧನಂಜೇಶ ಬರೆದಿರುವಂತಿದೆ. ಹಾಗಾಗಿ ಚಂದ್ರಗುಂಡರ ನಾರಿಕೇಳ ಪವಾಡವನ್ನು ಅಲ್ಲಿ ನಿಡುಮಾಮಿಡಿಯ ಜ॥ ಕರಿಬಸವೇಂದ್ರರಿಗೆ ಆರೋಪಿಸಿ

ಬಿಡಲಾಗಿದೆ. ಈ ಹಿನ್ನೆಲೆಯಲ್ಲಿ ಜ॥ ಚಂದ್ರಗುಂಡರ ಗುಯ್ಯಲೂರು ಪೀಠ-ಗೂಳೂರು ಪೀಠ, ೧೨ನೇ ಶತಮಾನದ ನಿಡುಮಾಮಿಡಿ ಪವಾಡದ ನಂತರ ನಿಡುಮಾಮಿಡಿಪೀಠವೆಂದು ಚಾಲ್ತಿಗೆ ಬಂತು. 'ನೆಡುಮಾಮಿಡಿ' ಎಂಬ ಶಬ್ದ ಜನಭಾಷೆಯಲ್ಲಿ 'ನಿಡುಮಾಮಿಡಿ' ಎಂಬ ಉಭಯ ಪವಾಡಾನ್ವಯ ಅರ್ಥದ ಶಬ್ದವಾಗಿ ರೂಪು ತಳೆಯಿತು. ಜ॥ ಕರಿಬಸವೇಂದ್ರರು, ಸೋಮಲಾಪುರ ಎಂಬ ಹೊಯ್ಸಳ ಅಂಕಿತ ಆಂಧ್ರದ (ನಿಡುಮಾಮಿಡಿ ಆಂಧ್ರಪ್ರದೇಶ) ನೆಲೆಗೆ ಬಂದು, ನೀರಿಲ್ಲದಿದ್ದ ನದಿ ನೆಲೆಯಲ್ಲಿ, ಅಗೆದು ತೆಗೆದ ನೀರಿನ ಮೂಲಕ ಮಾವಿನ ಮರಗಳನ್ನು ಬೆಳೆಸಿ ಜನರಿಗೆ ನೆಮ್ಮದಿ ತಂದ ಮಣಿಹವೇ ಪವಾಡವಾಗಿ ಜನತೆಗೆ ಕಂಡಿತು. ಹಾಗಾಗಿ 'ಮಾಮಿಡಿ ನೆಡು' ಎಂಬ ಕ್ರಿಯೆಯ ಮಾವಿನ ಗಿಡಗಳನ್ನು ನೆಟ್ಟ ನೆಲೆ ಎಂಬ ಅರ್ಥದಲ್ಲಿ ರೂಪುಗೊಳ್ಳುತ್ತದೆ. ಉತ್ತರಪದ 'ನೆಡು' ಎಂಬುದು ಪೂರ್ವಪದ ಪಲ್ಲಟವಾಗಿ ಬಂದು ನೆಡುಮಾಮಿಡಿ >ನಿಡುಮಾಮಿಡಿ ಎಂಬ ರೂಪ ತಳೆದಿರಬೇಕು.

ಜ॥ ಚಂದ್ರಗುಂಡರಿಗೂ ವಿರೂಪಾಕ್ಷಪಂಡಿತನು ತನ್ನ ಚನ್ನಬಸವಪುರಾಣದಲ್ಲಿ 'ನಿಡುಮಾಮಿಡಿ' ಪವಾಡವನ್ನು ಅಂಟಿಸಿಬಿಟ್ಟಿದ್ದಾನೆ ಈ ಅಂಶಗಳು ಗೂಳೂರಿನ ನಾರಿಕೇಳದ ನೀಡು (>ನಿಡು) ಪವಾಡ, ಸೋಮಲಾಪುರದ (ನೆಡು)ಮಾಮಿಡಿ ಪವಾಡಗಳನ್ನು ಸಂಯುಕ್ತಗೊಳಿಸಿ 'ನಿಡುಮಾಮಿಡಿ' ರೂಪವನ್ನು ಪ್ರಮುಖ ಮಾಡಿದಂತಿವೆ. ಅಂದರೆ 'ನಾರಿಕೇಳ'ಪವಾಡದ ಗೂಳೂರು ಪೀಠವು ಸ್ಥಿರಪಟ್ಟಾಧಿಕಾರದ್ದಾದರೆ ಗುಯ್ಯದವಾಡಿಯ ಭಾಗವಾಗಿದ್ದ ಸೋಮಲಾಪುರವು 'ಮಾಮಿಡಿ' ಪವಾಡದ ನಂತರ ನಿಡುಮಾಮಿಡಿ ಎನಿಸಿ ಚರಪಟ್ಟಾಧಿಕಾರದ ನೆಲೆಯಾಗಿ ರೂಪುಗೊಂಡಿತು. ಆದರೆ ಹೊಯ್ಸಳ ಅದರಲ್ಲೂ ವಿಶೇಷವಾಗಿ ವಿಜಯನಗರ ಕಾಲದಲ್ಲಿ ಪೆನುಗೊಂಡೆ ರಾಜಧಾನಿಗೆ; ಹಂಪಿಗೆ ಪೀಠದ ನೆಲೆಯು ಸಾನ್ನಿಧ್ಯ ಹಾಗು ರಾಜಗುರು ಪ್ರಭಾವ – ವರ್ಚಸ್ಸಿನ ಕಾರಣ, 'ನಿಡುಮಾಮಿಡಿ' ನೆಲೆಯೆ ಹೆಚ್ಚು ಪ್ರಸಿದ್ಧಿಗೊಂಡು ಪೀಠದ ಹೆಸರನ್ನು ಆ ಪೀಠನಾಮದಲ್ಲಿಯೇ ಮುಂದುವರಿಸಲಾಯಿತೆನ್ನಬೇಕು. ಹೈಹಯ ಚೋಳರ ಕಾಲಕ್ಕೆ ಜ॥ ಚಂದ್ರಗುಂಡರು, ಹೊಯ್ಸಳರ (ನಿಡುಗಲ್ಲು ಚೋಳ !) ಕಾಲಕ್ಕೆ ಜ॥ ಕರಿಬಸವೇಂದ್ರರು, ವಿಜಯನಗರ ಕಾಲಕ್ಕೆ ಜ॥ ಕಾಶಿವಿಲಾಸ ಕ್ರಿಯಾಶಕ್ತಿದೇವ ಒಡೆಯರು, ಜ॥ ಚಂದ್ರಭೂಷಣದೇವ ಒಡೆಯರು ವರ್ಚಸ್ವೀ ಮುಖ್ಯರಾಗಿ ಕಾಣಬರುತ್ತಾರೆ.

ಇವೆಲ್ಲ ಹೀಗೆ ಇರಲಿ ಜ॥ ಚಂದ್ರಗುಂಡ ದೇಶಿಕೇಂದ್ರ ಶಿವಾಚಾರ್ಯರ ವರ್ಚಸ್ವಿ ವ್ಯಕ್ತಿತ್ವ, ಮಹಿಮೆಗಳನ್ನು ಕಂಡ ಹೈಹಯ ಚೋಳವಂಶದ ರಾಜನು, ಸಪತ್ನೀಕನಾಗಿ (ಸತಿ ಕನಕವಲ್ಲಿ) ವೀರಶೈವ ದೀಕ್ಷೆ ಪಡೆದ. ಗೂಳೂರಿನಲ್ಲಿ ಹಿರಿಯ ಮಠವನ್ನು ಕಟ್ಟಿಸಿಕೊಟ್ಟು, ವಾಸ್ತವ್ಯಕ್ಕೆ ಸೂಕ್ತ ವ್ಯವಸ್ಥೆ ಮಾಡಿದ. ಜ॥ ಚಂದ್ರಗುಂಡ ದೇಶಿಕೇಂದ್ರರು ಅಲ್ಲಿ ಸ್ಥಿರ ನಿವಾಸವನ್ನು ಏರ್ಪಡಿಸಿಕೊಂಡು 'ಸಿಂಹಾಸನ-ಸಂಸ್ಥಾನ

ಪೀಠ'ವಾಗಿಸಿದರು. ಪುಲ್ಲಕವಿಯು ತನ್ನ ಕೃತಿಯ ಪ್ರಥಮಶ್ವಾಸದ ೨೪೫, ೨೪೯ನೇ ಪದ್ಯದಲ್ಲಿ (ಪು.೭೫) ಹೀಗೆ ನುಡಿದಿದ್ದಾನೆ.

ಸಕಲ ಜನ ಪೂಜ್ಯಮುಗ ಶಿ
ಷ್ಟಕಲಿತ ಮತಿ ಮಾಘ ಶುದ್ಧ ಸಪ್ತಮಿಯಂದುನ್
ಪ್ರಕಟಮುಗ ಸೂರ್ಯ ಸಾವ
ರ್ಣಿಕ ಮನ್ವಾದಿನಿ ಸುಧೀಪಣಿತ ಲಗ್ನಮುನನ್ (ಪ. ೨೪೫)

ಸ್ಥಿರಂಬುಗಾಗ ಚಂದ್ರಗುಂಡ ದೇಶಿಕೇಂದ್ರುಡಂಬು ಶ್ರೀ
ಕರಂಬುಗಾಗ ವೇರುಬೆಟ್ಟಿ ಗೌರವಂಬು ಚಲ್ಲಗಾ
ನಿರಂತರೈಕ ಭದ್ರಲೀಲ ನಿತ್ಯನೈಜ ಮುದ್ರಲನ್
ಕರಂ ಬೌಸಂಗಿ ಗೌರವಿಂಚಿ ಗಾಢ ಹರ್ಷಚಿತ್ತುಡೈ ॥(ಪ. ೨೪೯)

– ಇಲ್ಲಿ ರಥಸಪ್ತಮಿಯಂದು ಸ್ಥಿರಪಟ್ಟಾಧಿಕಾರದ ಪೀಠಾರೋಹಣ ಮಾಡಿದ ವಿಷಯ ಸ್ಪಷ್ಟವಾಗಿದೆ.

ಮಾಘ ಶುದ್ಧ ಸಪ್ತಮಿಯಂದು ರಥಸಪ್ತಮಿ. ಚಾಂದ್ರಮಾನ ಸಂಪ್ರದಾಯದಲ್ಲಿ ಸೂರ್ಯನ ಉತ್ತರಾಯಣದ ಆರಂಭವಿದು. ಇಂದು ರಥವೇರಿದ ಸೂರ್ಯನಿಗೆ ಪೂಜೆ ರಥಸಪ್ತಮಿಯಂದು ಪೀಠಾರೋಹಣವನ್ನು ಚಂದ್ರಗುಂಡರು ಮಾಡಿದರು. ಹೀಗಾಗಿ ಸೂರ್ಯಪೀಠ ಸಂದರ್ಭವನ್ನು ಆರಂಭಿಸಿದರು; ಹೊಸದಕ್ಕೆ ನಾಂದಿ ಹಾಕಿದರು.

ಇದರ ಇನ್ನಷ್ಟು ವಿವರವನ್ನು ಹೀಗೆ ಹೇಳಬಹುದು: ಸೂರ್ಯನೇನೋ ಉತ್ತರಾಯಣ ಪುಣ್ಯಕಾಲದಲ್ಲಿ (ಜನವರಿ ೧೪ ಅಥವಾ ೧೫) ಉತ್ತರಾಯಣ ಪ್ರವೃತ್ತನಾಗುತ್ತಾನೆ. ಆದರೆ ಅವನು ರಥಸಪ್ತಮಿಯಂದೆ ರಥಾರೋಹಣ ಮಾಡುತ್ತಾನೆ. ಆ ಪುಣ್ಯದಿವಸದಲ್ಲಿ ಸೂರ್ಯಸಾವರ್ಣಿ ಮನ್ವಂತರವು ಆರಂಭವಾಗುತ್ತದೆ. ದೇವಯಾನ ಮಾರ್ಗವು ಮುಕ್ತವಾಗಿ ಆಸ್ತಿಕರಿಗೆ ಅಪ್ಯಾಯಮಾನ ಆಪ್ತವಾಗುತ್ತದೆ.

ಇಮ್ಮಡಿ ಕರಿಬಸವ ರಾಜದೇಶಿಕೇಂದ್ರರ ಕಾಲದಲ್ಲಿ (೧೭೭೦–೧೮೧೫) ಕೃತಿ ಬರೆದು ಸನ್ಮಾನಿತನಾದ ಪುಲ್ಲಕವಿಯು, ಅಂದು ಪೀಠದಲ್ಲಿ ನಡೆದ ರಥಸಪ್ತಮಿಯ ವೈಭವ ಕುರಿತು ನೀಡಿರುವ ವರ್ಣನೆ (ಪಂಡಿತಾರಾಧ್ಯಚರಿತ್ರಮು, ಆ.೭, ಪ.೭೪) ಹೀಗಿದೆ:

'ಅಮಿತ ವಿಲಾಸರೀತಿ ಪ್ರತಿ ಹಾಯಮುನ್‌ವೆಸ ಮಾಘ ಶುದ್ಧ ಸ
ಪ್ತಮಿ ನಿ ಮಹೋತ್ಸವಂಬಲರ ಸರ್ವ ದಿಶಾಗತ ಭಕ್ತಲೋಕಮುಲ್
ಕ್ರಮಮುನ ವಚ್ಚಿಕೊಲ್ವಗನಖಂಡ ವಿಲಾಸಮೊಲರ್ಪಗದ್ದೆ ಪೈ
ಸಮುಚಿತ ಪಟ್ಟಭದ್ರುಡನ ಸಾರೆಕುನೊಪ್ಪುಚು ನಿಂಡು ವೇಡುಕನ್

– ಈ ಮನೋಹರ ವರ್ಣನೆಯಲ್ಲಿ ರಥಸಪ್ತಮಿಯ ವಾರ್ಷಿಕವಿಲಾಸ, ಸಮಸ್ತ ಭಕ್ತ ವೃಂದವು, ಅಪ್ಯಾಯ ಮಾನವಾಗಿ ಕಂಡ ಉತ್ಸವ ಹಾಗು ಗುರುಗಳ ಸಿಂಹಾಸನಾರೋಹಣದ ವೈಭವವು ಕಣ್ಕಟ್ಟುವಂತೆ ಚಿತ್ರಿಸಲಾಗಿದೆ.

ಜ॥ ಚಂದ್ರಗುಂಡ ದೇಶಿಕೇಂದ್ರರು, ಚಂದ್ರಮೌಳೀಶ್ವರ ಲಿಂಗ, ಮಹಾವೃಷಭ, ಗುಂಡಿ (ಗುಂಡ) ವೀರಭದ್ರನನ್ನು ಪ್ರತಿಷ್ಠಾಪಿಸಿ ಪೀಠದ ಸಂಪ್ರದಾಯವನ್ನು ಪಾಲಿಸಿದರು. ಗೂಳೂರಿನಲ್ಲಿ ಪೀಠದ ಮೊದಲ ಜಗದ್ಗುರುವಾಗಿ ನಿಂತರು. ಇವರು ಜೀವಂತ ಕ್ರಿಯಾಸಮಾಧಿಗೊಂಡ ನೆಲೆ ಗೂಳೂರು ಪೀಠದಲ್ಲಿ ಇಂದಿಗೂ ಇದೆ. ಇವರ ಗುರುವಿನ ಕಾರಣಿಕ ಸಂಬಂಧವನ್ನು ವಿಜಯನಗರದರಸರಿಗೆ ಅನ್ವಯಿಸಿ ಸಂಪಾದನೆಯ ಸಿದ್ಧನಂಜೇಶನು ತನ್ನ ಗುರುರಾಜ ಚಾರಿತ್ರ್ಯದಲ್ಲಿ ಹೀಗೆ ನುಡಿದ್ದಾನೆ (ಸಂ. ೧೩, ಪ. ೭೧):

ಚಂದ್ರಗುಂಡದ ವಿರೂಪಾಕ್ಷಯ್ಯನೆಂಬ ವಿಜಿ ।
ತೇಂದ್ರಿಯಂ ವಿದ್ಯಾನಗರಿಯಾಳ್ವ ಪ್ರೌಢನಾ
ರೇಂದ್ರಂಗುರೆ ಸ್ವಪ್ನದೊಳು ಹೋಗಿಯಾತನ ಪೂರ್ವಜನ್ಮಾಂತರವ ತಿಳುಹಿ
ಸಾಂದ್ರ ಮಹಿಮೆಯನುಳ್ಳ ಶ್ರೀಗಿರಿಗೆ ಬರಿಸಿ ವಿಧಿ
ಯಿಂದ್ರಾನುಜಾದ್ಯದರಯದ ಪುರುಷ ಮಲ್ಲೇಶ
ನಂ ದೃಷ್ಟವೆನೆ ತೋರಿ ಮರಣ ಚಿಹ್ನವನರುಹಿ ನೃಪನ ಬೀಳ್ಕೊಟ್ಟು ಬಳಿಕ

ಶ್ರೀಶೈಲದ ಚಂದ್ರಗುಂಡವೆಂಬಲ್ಲಿದ್ದ ವಿರೂಪಾಕ್ಷ ಮಹಾಶ್ರೀಗಳವರು ವಿಜಯನಗರದ ಪ್ರೌಢದೇವರಾಯನ ಸ್ವಪ್ನದಲ್ಲಿ ದರ್ಶನವಿತ್ತರು. ಆಗ ಅವನ ಪೂರ್ವಜನ್ಮದ ವೃತ್ತಾಂತವನ್ನು ಹೇಳಿ ಶ್ರೀಶೈಲಕ್ಕೆ ಬರವಾಡಿಕೊಂಡು ಮಲ್ಲಿಕಾರ್ಜುನನ ದರ್ಶನ ಮಾಡಿಸಿದರಂತೆ. ಅಂದರೆ ಶ್ರೀ ನಿಡುಮಾಮಿಡಿ ಪೀಠಕ್ಕೆ ವಿಜಯನಗರದ ಅರಸರ ಗುರುಭಕ್ತಿಯ ಸಂಕೇತವಾಗಿ ಹೇಗೆ ಕಾವ್ಯದಲ್ಲಿ ಪ್ರಸ್ತಾಪಿಸಿರುವಂತಿದೆ. ಇಲ್ಲಿ ಪುಲ್ಲಕವಿಯು ಹೇಳುವಂತೆ ವಿರೂಪಾಕ್ಷ ದೇಶಿಕೇಂದ್ರರು ಉತ್ತರ ಭಾರತದ ಸಂಚಾರ ಮುಗಿಸಿ ಕರ್ನಾಟಕ, ಆಂಧ್ರ, ಕೊಂಕಣದಲ್ಲಿ ವೀರಶೈವ ಧರ್ಮದ ಪ್ರಸಾರ ಕೈಗೊಂಡರು. ಈ ಸಮಯದಲ್ಲಿ ಗೂಳೂರು ನೆಲೆಯು ಅವರಿಗೆ ಸೂಕ್ತ ನೆಲೆ ಎನಿಸಿ ಪೀಠದ ನೆಲೆಯೆಂದು ಪ್ರತಿಷ್ಠಾಪಿಸಿ ಚಂದ್ರಗುಂಡ ಎಂಬ ಸಿಂಹಾಸನ ಮಠದ ನೆಲೆಯ ಹೆಸರಿನಲ್ಲಿಯೇ ಕರಕಮಲಸಂಜಾತರನ್ನಾಗಿ ಮಾಡಿ ಪ್ರತಿಷ್ಠಾಪಿಸಿ ಪೀಠಾಧಿಪತಿಯಾಗಿ ಇಲ್ಲಿ ನೆಲೆಸಲು ಆದೇಶ ನೀಡಿದ ಬಗ್ಗೆ ಪುಲ್ಲಕವಿಯ ಚರಿತ್ರೆಯಿಂದಲೂ ಸೂಚಿತವಾಗುತ್ತದೆ.

ಡಾ ಕೆ. ಲಲಿತಾಂಬ ಅವರು ತಮ್ಮ ಪಿ.ಹೆಚ್.ಡಿ. ಸಂಶೋಧನಾ ಕೃತಿಯಲ್ಲಿ ಇದನ್ನು ದೃಢೀಕರಿಸಿ ನುಡಿದಿದ್ದಾರೆ.

"Virupaksha after his piligrimage according to pullakavi settled down at Gulur in Karnataka, where he set up a peetha which came to be looked upon as the original peetha... One of the branches of the Gulur Math was set up at Nidumamidi"

ಅಂದರೆ ೧೧ನೇ ಶತಮಾನದ ಪೂರ್ವಾರ್ಧದ ಸುಮಾರಿಗೆ ಚಂದ್ರಗುಂಡ ದೇಶಿಕೇಂದ್ರರು ಈ ಪೀಠವನ್ನು ಪ್ರಸಿದ್ಧಿಗೆ ತಂದಿರುವಂತಿದೆ. ಶ್ರೀ ಚಂದ್ರಗುಂಡ ದೇಶಿಕೇಂದ್ರರಿಗೆ ಪೂರ್ವಾಶ್ರಮದ ಹೆಸರು 'ಗೋಪತಿ' ಎಂಬುದು ಜನಪ್ರಿಯ ಹೆಸರಾಗಿತ್ತು ಎಂಬುದಿದೆ. ಈ ಹಿನ್ನಲೆಯಲ್ಲಿ ಕೊಡಗಿನ ಶಾಸನವೊಂದರಲ್ಲಿ ಬರುವ ಈ ಹೆಸರು ಗಮನಾರ್ಹವಾಗಿದೆ.

ಕೊಡಗಿನ ೧೧ನೇ ಶತಮಾನದ ಒಂದು ಹೊಸ ವೀರಶಾಸನದಲ್ಲಿ ಗುರುಸ್ತುತಿಯಂತೆ ಕಂಡು ಬರುವ ಸಾಲುಗಳಲ್ಲಿ (ತ್ರುಟಿತ ಅಕ್ಷರಗಳು ಕೆಲವಿವೆ) ಈ ಪದಗಳಿಗೆ:

"... ಗೊರುಣಭದ್ರ ಗುರೋಪಿ ಮಾರತಿಂಬಿ ನಿಂಣಗಣ ಗೋಪತಿ ಕೋಕ್ಷ ಶ್ರಿ ಬುವಿಯನರತಿ ಯಘ್ನ ಮಾಡಿದ ಭದ್ರಗೋತ್ರಾಶಿಕ್ಷರ್..."

– ಇಲ್ಲಿ ಭದ್ರಗೋತ್ರ, ಗುರುಗಳ ಗುರು ಎಂಬ ಕಲ್ಪನೆ ಅಲ್ಲದೆ 'ಗೋಪತಿ' ಎಂಬ ಶಬ್ದವೂ ಇದ್ದು ಚಂದ್ರಗುಂಡ ದೇಶಿಕೇಂದ್ರರ ಮಣಿಹಗಳ ಸೂಚನೆಯಾಗಿ ಕಾಣಬರುವಂತಿದೆ. ಬಹುಶಃ ವಿರೂಪಾಕ್ಷ ದೇಶಿಕೇಂದ್ರರ, ಜೊತೆ ಗುರುಸಂಚಾರ ಹೊರಟಾಗ ಅಸಿತವಕ್ತ್ರ ಕಾಳಾಮುಖರನ್ನು ವೀರಶೈವ ದೀಕ್ಷಿತರನ್ನಾಗಿ ಮಾಡಿ ಭದ್ರಗೋತ್ರವನ್ನು ಅವರಿಗೆ ಅನ್ವಯಿಸಿದಂತಹ ಸೂಚನೆ ಕಾಣುತ್ತದೆ. ಬಹುಶಃ ಕ್ರಿ.ಶ. ೧೧ನೇ ಶತಮಾನದಲ್ಲಿ ರಾಜೇಂದ್ರ ಚೋಳನು ಕರ್ನಾಟಕದ ಗಂಗವಾಡಿಯನ್ನು ಗೆದ್ದ ಮೇಲೆ ಚಂದ್ರಗುಂಡ ದೇಶಿಕೇಂದ್ರರ ಸಂಪರ್ಕಕ್ಕೆ ಬಂದನೆಂದು ಕಾಣುತ್ತದೆ. ಈ ರಾಜೇಂದ್ರಚೋಳನು ಹೈಹಯ ವಂಶದವನು ಎಂಬುದು ಚಿಲಕೂರು ವೀರಭದ್ರರಾಯರ ಆಂಧ್ರುಲ ಚರಿತ್ರೆಯಿಂದ ತಿಳಿದುಬರುತ್ತದೆ. ಅವನೇ ಗುಯಲೂರಿನಲ್ಲಿ (ಗುಯ್ಯಲೂರು > ಗುಯಲೂರು > ಗೂಳೂರು) ಚಂದ್ರಗುಂಡರ ನಾರಿಕೇಳ ಪವಾಡವನ್ನು ಕಂಡು ದೀಕ್ಷೆ ಪಡೆದು, ಅದನ್ನು ಪ್ರಚಾರ ಮಾಡಲು ಕಾರಣನಾದನೆಂದು ತೋರುತ್ತದೆ. ವೀರಭದ್ರರಾಯರ ರೀತ್ಯ ಈ ರಾಜೇಂದ್ರ ಚೋಳ ಹೈಹಯ ವಂಶಕ್ಕೆ ಸೇರಿದವ. ಈ ವಂಶೀಯರಿಗೆ ಹೈಹಯನ ಮೊಮ್ಮಗನಾದ ಕಾರ್ತವೀರ್ಯನ ವಂಶಿಕರೆನ್ನುವುದುಂಟು. ಚಾಲುಕ್ಯ ಮತ್ತು ವೆಲನಾಟಿ ಚೋಳರಿಗೆ ಸೇರಿದ ಕೋನಮಂಡಲವನ್ನು ಆಳಿದ ವಂಶವೇ ಹೈಹಯವಂಶ". ಕೋನಮಂಡಲಾಧಿಪತಿ ಹೈಹಯ ವಂಶಜ ರಾಜಪರೇಡುಕುಮಾರ ವಿಕ್ರಮರುದ್ರ ಎಂದೆಲ್ಲ

ಬಿರುದಾಂಕಿತನಾದ ರಾಜೇಂದ್ರಚೋಳನಿಗೆ ಗುಯಲೂರು ಸೀಮೆ ಸೇರಿತ್ತು. ಚಂದ್ರಗುಂಡ ಜಗದ್ಗುರುಗಳ ಪವಾಡ, ಸ್ಥಿರಪೀಠ ಸ್ಥಾಪನೆ, ವಾಸ್ತವ್ಯಗಳ ಕಾರಣ ಗುಯಲೂರುವಿಗೆ (ಗೊಯ್ಯದವಾಡಿ) ಪ್ರಸಿದ್ಧಿ ಹೆಚ್ಚಿತು. ಈ ಕಾರಣವೆ ಮುಂದೆ ೧೨ನೇ ಶತಮಾನದಲ್ಲಿ ಕಲ್ಯಾಣ ಚಾಲುಕ್ಯರ ಚಕ್ರವರ್ತಿ ಜಗದೇಕಮಲ್ಲನ ಮಹಾ ಮಾಂಡಲೇಶ್ವರನಾದ ಇರುಂಗೋಳಚೋಳನು ಅನಂತಪುರ ಜಿಲ್ಲೆ ರಾಜ್ಯದ ಈ ಗುಯಲೂರನ್ನು ರಾಜಧಾನಿ ಮಾಡಿಕೊಂಡು ಆಳುತ್ತಿದ್ದ. ಇದು ಅಂದಿನ ಕರ್ನಾಟಕದ ವ್ಯಾಪ್ತಿಯನ್ನು ತೋರುತ್ತದೆ. ಶಾಸನಗಳಲ್ಲಿ ಮಹಾಮಂಡಲೇಶ್ವರ ಇರುಂಗೊಳಚೋಳ ಮಹಾರಾಜ (ಕ್ರಿ.ಶ. ೧೧೪೯) ಎಂದಿರುವಲ್ಲಿ ಇವನು ಹೈಹಯವಂಶದ ಶಾಖೆಯವನಿರಬೇಕೆನಿಸುತ್ತದೆ. ಇವನ ವಂಶದವರಿಗೆ ನಿಡುಗಲ್ಲು ಚೋಳರು ಎಂಬ ರಾಜವಂಶಿಕನಾಮವಿದೆ. ಈ 'ನಿಡು'ವಿಗೂ, 'ನಿಡು'ಮಾಮಿಡಿಗೂ ಸಂಬಂಧವಿರ ಬಹುದೇ ಎಂದೂ ಪರಿಶೀಲಿಸಬೇಕಿದೆ. ಕಾರಣ ಜ॥ ಕರಿಬಸವೇಂದ್ರರ ನಿಡುಮಾಮಿಡಿ ಮಾಮರದ ಪವಾಡ ನಡೆದದ್ದೂ ಈ ೧೨ನೇ ಶತಮಾನದಲ್ಲಿಯೆ. ಜ॥ ಚಂದ್ರಗುಂಡ ಶಿವಾಚಾರ್ಯರ ನಾರಿಕೇಳ ಪವಾಡವನ್ನು ನಿಡುಮಾಮಿಡಿ ಕರಿಬಸವೇಂದ್ರರಿಗೆ ಸಾಹಿತ್ಯಕವಾಗಿ ಅಂಟಿಸಿರುವುದನ್ನು ನೋಡಿದರೆ ಅದರ ಪ್ರಸಿದ್ಧಿ ಪರಂಪರೆಯನ್ನು ಪೀಠದ ಮುಂದಿನ ಜಗದ್ಗುರುಗಳ ಮಹಿಮೆಗಳಿಗೆ ಅಂಟಿಸಿ ಹೇಳುವ ಪ್ರಯತ್ನವೇ ಆಯಿತೆನ್ನಬೇಕು. ಅಂದರೆ ಸ್ಥಿರಪಟ್ಟದ ಮಹಿಮೆಯನ್ನು ಚರಪಟ್ಟಕ್ಕೂ ಅಪ್ಯಾಯಮಾನಗೊಳಿಸುವುದು ಶಿಷ್ಯ ಭಕ್ತಿಯ ಸಂಕೇತವೇ ಆಗುತ್ತದೆ. ಅಂತೇ ಕ್ರಿ. ಶ. ೧೫೮೫ರ ವಿರೂಪಾಕ್ಷ ಪಂಡಿತನು ತನ್ನ ಚನ್ನಬಸವ ಪುರಾಣದಲ್ಲಿ (ಕಾಂಡ ೫, ಸಂ. ೧೦, ಪದ್ಯ ೫೨):

ನಿಡುಮಾಮಿಡಿಯ ಕರಿಬಸವೇಶನೈತರುತೆ
ನುಡಿದು ತೆಂಗಿನ ಮರನ ಭಿಕ್ಷಮಂ ಬೇಡಲತಿ
ಕಡುಬಾಗಿನಿಂದು ಫಲಗಳ ನೀಡಿ ಬಳಕಲಾಮರನೆಂದಿನಂತೆಸೆವುದು

–ಎಂದಿದ್ದಾನೆ.

ಕ್ರಿ.ಶ. ೧೬೭೬ರ ಸಂಪಾದನೆಯ ಸಿದ್ದನಂಜೇಶನು ಗುರುರಾಜಚಾರಿತ್ರ್ಯದಲ್ಲಿ: (ಸಂ. ೧೩ ಪದ್ಯ ೭೩)

ಪರಮಸುಜ್ಞಾನ ಸಂಪನ್ನ ಯತಿಕುಲತಿಲಕ
ಗುರುವರಂ ನಿಡುಮಾಮಿಡಿಯ ಕರಿಬಸವೇಶ
ನಿರುತೊಂದು ದಿವಸ ತೆಂಗಿನಮರದ ಮುಂದೆ ಭಿಕ್ಷಾ ಎನಲ್ಕಾ ತೆಂಗಿನ
ಮರಬಾಗಿ ಕಾಯ್ಗಳು ಭಿಕ್ಷವಿತ್ತುದು..

– ಎಂದು ನೆನಸಿದ್ದಾನೆ.

ಈ ಎರಡೂ ಪದ್ಯಗಳ ಮಂಡನೆಯನ್ನು ನೋಡಿದರೆ ಜ॥ ಕರಿಬಸವೇಂದ್ರರಿಗೆ ಪೂರ್ವ ಗುರುಗಳ ಮಣಿಹದ ಸ್ಮರಣೆಯ ಆರೋಪ ಕಾಣುವಂತಿದೆ. ಹೀಗಾಗಿ ಜ॥ ಚಂದ್ರಗುಂಡರ ಸ್ಥಿರಪಟ್ಟದ ಸಿಂಹಾಸನದ ಸ್ಮರಣೆಯೂ ನಾರಿಕೇಳ ಪವಾಡದ ಸ್ಮರಣೆಯೊಡನೆ ಹೊಂದಿಕೊಂಡೇ ಸಾಗುತ್ತದೆ ಎನ್ನಬೇಕು.

ರಾಜೇಂದ್ರಚೋಳ ಮತ್ತು ಅವನ ರಾಣಿ ಕನಕವಲ್ಲಿಯನ್ನು ಶಿವಾಚಾರಕ್ಕೆ ತೊಡಗಿಸಿದ ಮೇಲೆ ಚಂದ್ರಗುಂಡರು ಧರ್ಮಜಾಗೃತಿಗಾಗಿ ದೇಶಸಂಚಾರಕ್ಕೆ ಹೊರಟು ಕರ್ನಾಟಕ, ಆಂಧ್ರ, ದ್ರಾವಿಡ, ಕೇರಳ, ಮಹಾರಾಷ್ಟ್ರ ಪ್ರಾಂತ್ಯಗಳಲ್ಲಿ ಸಂಚರಿಸಿದರು. ಹೀಗೆ ಸಂಚಾರ ಕಾಲದಲ್ಲಿ ರಾಚೋಟಿ, ಹುಮುನಾಬಾದ್, ಹಂಪೆ, ಗೊಡಚಿ, ಚಿತ್ರಾವತಿ, ನಂದಿ, ಗೂಳೂರು ಮುಂತಾದ ನಾಡಿನ ಅನೇಕ ಪಟ್ಟಣ ಹಾಗು ಗ್ರಾಮಗಳಲ್ಲಿ ಶಿವಾಗಮೋಕ್ತವಾಗಿ ವೀರಭದ್ರ ಮೂರ್ತಿಗಳನ್ನು ಪ್ರತಿಷ್ಠಾಪಿಸಿದರು. ಗೊಡಚಿಯಲ್ಲಿ ವೀರಭದ್ರರ ಹಿಂಬದಿಯ ಗುಡಿಯಲ್ಲಿ ಇಂದೂ ಕಾಣುವಂತೆ ಅಸೀನ ಮುದಿವೀರಣ್ಣನ (ಹಿರಿಯವೀರಭದ್ರ, ಪ್ರಾಚೀನ ವೀರಭದ್ರ.. ಪೂರ್ವಾರ್ರಾಭ್ಯ ಬಂದ ವೀರಭದ್ರನ ಸಂಕೇತ) ಗುಡಿ ಇರುವುದು ಗಮನಾರ್ಹ. ಗೊಡಚಿ ವೀರಭದ್ರನಲ್ಲಿ ಪರಂಪರೆ ಎಂದರೆ ಸವದತ್ತಿ ಎಲ್ಲಮ್ಮನಿಗೆ ಮುತ್ತೈದೆ ಹುಣ್ಣಿಮೆಯಲ್ಲಿ ಬಳೆಯನ್ನು ಈ ಗುಡಿಯಿಂದ ಕಳಿಸಲಾಗುತ್ತದೆ. ಅಂದರೆ ಆಕೆಗೆ ರಂಡೆಹುಣ್ಣಿಮೆಯಂದು ಬಳೆ ಒಡೆಯುವಲ್ಲಿ ಆಕೆಗುಂಟಾದ ರಂಡೆತನ ಕಳೆಯಲು ಮುತ್ತೈದೆ ಬಾಳು ಕೊಡುವ ಸಂಕೇತವಾಗಿ ಮುತ್ತೈದೆ ಹುಣ್ಣಿಮೆಯಲ್ಲಿ ಬಳೆಯನ್ನು ಕಳಿಸುವುದು. ಇಲ್ಲಿನ ವೀರಭದ್ರನ ಪರಂಪರೆ ಆಗಿದೆ. ೧೨ನೆಯ ಶತಮಾನದಲ್ಲಿ ಮಡಿವಾಳ ಮಾಚಿದೇವರು ಮುದಿವೀರಣ್ಣನ ಮೇಲೆ ಹುತ್ತ ಬೆಳೆದಿದ್ದ ನೆಲೆಯಲ್ಲಿ ಅನುಷ್ಠಾನಗೈದು ಅವನಲ್ಲಿ ಐಕ್ಯವಾದನಂತೆ. ಆದಾಗಿ ಮುದಿವೀರಣ್ಣನೇ ಮಡಿವಾಳ ಮಾಚಿದೇವ ಎನ್ನುತ್ತಾರೆ. ಬಹುಶಃ ೧೮ ಫಣಕಟ್ಟಿನಲ್ಲಿಯ ಅಂಗವಾದ ಮಡಿವಾಳರ ಹಾಗು ಚಂದ್ರಗುಂಡರಿಂದ ಶಿವದೀಕ್ಷೆಯೂ ನಡೆದ ಸಂಬಂಧವೂ ಹಾಗು ಇಲ್ಲಿನ ವೀರಭದ್ರ– ಅವರ ಪ್ರತಿಷ್ಠೆ ಎಂದಿರುವ ಕಾರಣಕ್ಕೆ ಅನ್ವಯ ಕತೆ ಇದಾಗಿರಬಹುದು. 'ರಣಬಾಜಿ' ಎಂಬಲ್ಲಿ ಅಂಧಕಾಸುರನ್ನು ಸೋಲಿಸಿ ಶಿವಗಣದ 'ಅಣಕಪ್ಪ'ನನ್ನಾಗಿಸಿದ ಗೊಡಚಿ ವೀರಭದ್ರನನ್ನು ಜಾಗ್ರತ ವೀರಭದ್ರೇಶ್ವರ ಎನ್ನುತ್ತಾರೆ. ಇವನು 'ವಿರೂಪಾಕ್ಷ ಲಿಂಗ'ದಲ್ಲಿ ಹುಟ್ಟಿದವನಂತೆ. ಗೊಡಚಿ ವೀರಭದ್ರ, ಸವದತ್ತಿ ಎಲ್ಲಮ್ಮ ಅಣ್ಣತಂಗಿ ಎಂಬುದು ಜನಪದ ರೂಢಿಯಲ್ಲಿರಲು ಈ ಸಂಪ್ರದಾಯ ಚಾಲೂ ಆಗಿದೆ." ಈ ವೀರಭದ್ರ ಪ್ರತಿಷ್ಠಾಪನೆಯು ಜ॥ ಚಂದ್ರಗುಂಡರ ಪ್ರತಿಷ್ಠಾಪನೆ. ಎನ್ನುವಲ್ಲಿ ವೀರಭದ್ರನಿಂದ ದೊರಕುವ ಸ್ತ್ರೀಗೌರವಕ್ಕೆ ಈ ಪೀಠದ ಪರಂಪರೆಯೂ ಕಾರಣವೆನಿಸುತ್ತದೆ. ಪುಲ್ಲಕಪಿಯು ಜ॥ ಚಂದ್ರಗುಂಡರ ರಾಚೋಟಿ ವೀರಭದ್ರ ಪ್ರತಿಷ್ಠಾಪನೆ ಕುರಿತು ಹೀಗೆ ನುಡಿದಿದ್ದಾನೆ: ಆ ವೀರಭದ್ರ ಪ್ರಭಾವವನ್ನು ತೋರಿದ್ದಾನೆ:

ವಿನಯಸುಧಿಕೋಟಿ ರಾಚವೀಟಿನ್ ಮೇಟಿನ್...

....

ಭಾಸುರ ಮಂಟಪ ಮಧ್ಯ ನಿ
ವಾಸಂಬುನ ವಲಯು ವೀರಭದ್ರುನಿ ಜಗತಿನ್ !
ವಾಸಿಗನು ಪ್ರತಿಷ್ಠಿಂಚೆ ವಿ
ಲಾಸಕಳ ಮಹಿಮಮೀರ ಲಲಿತ ಪ್ರೌಢಿನ್
(ಶ್ರೀ ಪಂಚ: ದ್ವಿತೀಯಾಶ್ವಾಸ ಪ. ೧೫೫, ಪದ್ಯ ೧೫೬ ಪು.೧೨೬)

ಮಾಘಶುದ್ಧ ಪೌರ್ಣಿಮೆಯ ಸಮಯದಲ್ಲಿ ಮಾರ್ಚಿ ೨೬ ರಿಂದ ೩೧ರ ವರೆಗೆ ಸೂರ್ಯಕಿರಣಗಳು ನಂದಿಕೋಡುಗಳ ಮೂಲಕ ಬಂದು ರಾಚೋಟಿ ವೀರಭದ್ರನ ಪಾದ ಸ್ಪರ್ಶದಿಂದಾರಂಭಿಸಿ ವಕ್ಷಸ್ಥಲದ ಮೇಲೆ ಬಿದ್ದು ಹರಡುವ ಕಾರಣ ಸೂರ್ಯಪ್ರಭೆಯ ಮೆರವಣಿಗೆ ಇವನಿಗುಂಟು. ಬಹುಶಃ ಗುಡಿಯ ವಾಸ್ತುರಚನೆಯಲ್ಲಿ ಇಂಥ ವ್ಯವಸ್ಥೆ ಇದ್ದು 'ಭಾಸುರ ಮಂಟಪ'ವಾದ ನಿರ್ಮಾಣಕ್ಕೆ ಜ॥ ಚಂದ್ರಗುಂಡರ ಮಣಿಹವನ್ನು ತಾರ್ಕಣೆಗೊಳಿಸಿ ಹೇಳಿರುವಂತಿದೆ. ರಾಚೋಟಿಯಲ್ಲಿ ರಾಜೇಂದ್ರಚೋಳನ (೧ನೇ ರಾಜರಾಜಚೋಳ ಎನ್ನುವುದೂ ಉಂಟು. ಹಾಗಿದ್ದರೆ ಜ॥ ಚಂದ್ರಗುಂಡರಿಂದ ಅವನೂ ಪ್ರಭಾವಿತನಾಗಿರುವ ಸಂದರ್ಭವೆನ್ನಬೇಕಾಗುತ್ತದೆ) ಕಾಲದಲ್ಲಿ ೧೧ನೇ ಶತಮಾನದಲ್ಲಿ ವೀರಭದ್ರ ಗುಡಿ ನಿರ್ಮಿತವಾಯಿತೆಂಬ ಮಾತಿಗೆ ಜ॥ ಚಂದ್ರಗುಂಡ ರಾಚೋಟಿ ವೀರಭದ್ರ ಪ್ರತಿಷ್ಠೆ ಎಂಬುದು ಸಮನ್ವಯಗೊಳ್ಳುತ್ತದೆ. ಹುತ್ತರಾಚೋಟಿ ವೀರಣ್ಣಲೀಲೆ ಅಂದರೆ ಸರ್ಪರೂಪದಲ್ಲಿ ಹುತ್ತ ಹೊಕ್ಕ ಈ ವೀರಣ್ಣನ ಮೇಲೆ ಗೋವಿನ ಮೊಲೆ ಹಾಲು ಸುರಿದು ಅವನು ಅದನ್ನು ಕುಡಿಯುತ್ತಿದ್ದನಂತೆ. ಅಂದರೆ ಪುರವಂತರ ವೀರಭದ್ರನ ವಡಬುಗಳಲ್ಲಿ ಬರುವ 'ಅಹಾಹಾ ಸರ್ಪ' ಎಂಬ ಉಗ್ಗಡಣೆಗೆ, ಈ ಕತೆಯೂ ಪಾರಂಪರಿಕ ಪೋಷಣೆ ಎನ್ನುವುದಾಗುತ್ತದೆ. ಸೈಂಧವ ಸಂಸ್ಕೃತಿಕಾಲದ ನಾಗಾಬುಡಕಟ್ಟಿನ ನೇತಾರ ವೀರಭದ್ರನಾಗಿದ್ದು, ಅವನ ಕೈಯಲ್ಲಿ ಕಾಲಸರ್ಪವನ್ನು ಕಾಲದ ಪ್ರತೀಕವಾಗಿ, ಶಿಲ್ಪಗಳಲ್ಲಿ ನಾಗಕಿರೀಟ ಧಾರಣೆಯಾಗಿ ತೋರಿಸಲಾಗಿದೆ ಎಂದು ಡಾ॥ ಶ್ರೀ ಜಚನಿ ಅವರು ಅಭಿಪ್ರಾಯಪಟ್ಟಿದ್ದಾರೆ. ಆದಾಗಿ ಚಂದ್ರಗುಂಡ ಜಗದ್ಗುರು ಪ್ರತಿಷ್ಠಿತ ರಾಚೋಟಿ ವೀರಭದ್ರದಲ್ಲಿ ಅದೊಂದು ಜನಪದ ರೂಪಕವಾಗಿ ಜತೆ ಕಾಣಿಸಿಕೊಂಡಂತಿದೆ. ರಾಚೋಟಿ ವೀರಭದ್ರನನ್ನು 'ಕುಮಾರವೀರಭದ್ರ' ಎಂದು ಕರೆಯುವಲ್ಲಿ ತದನುಗುಣನಾಮವು ನಿಡುಮಾಮಿಡಿ ಹಾಗು ಗೂಳೂರು ಸಂಸ್ಥಾನದಲ್ಲಿರುವ ವೀರಭದ್ರರಲ್ಲಿಯೂ ಅನ್ವಯವಿರುವುದು ಗಮನಾರ್ಹ. ರಾಚೋಟಿ ವೀರಭದ್ರನಿಗೆ ಎರಡೇ ಕೈಗಳು. ನಿಡುಮಾಮಿಡಿಯ ವೀರಭದ್ರಗುಡಿಯ ಸ್ತಂಭಗಳಲ್ಲಿ ದ್ವಿಭುಜ ವೀರಭದ್ರನ ಉಬ್ಬುಶಿಲ್ಪಗಳಿರುವುದು ಅಂತೇ ಗಮನಾರ್ಹ.

ಬೀದರ್ ಜಿಲ್ಲೆ ಹುಮ್ನಾಬಾದ್ ವೀರಭದ್ರನದೂ ಒಂದು ಪ್ರಸಿದ್ಧ ಕ್ಷೇತ್ರವಾಗಿದೆ. ಅಲ್ಲಿ ವೀರಭದ್ರನ ವಿಗ್ರಹದ ಎಡಬದಿಗೆ ರಾಚೋಟಿ ವೀರಭದ್ರನ ವಿಗ್ರಹವೂ ಇದೆ. ಇದು ಜ॥ಚಂದ್ರಗುಂಡರ ಸಂಬಂಧದ ಸೂಚನೆಯಾಗಿರಬಹುದು. ಕಾರಣ ಎರಡೂ ಕ್ಷೇತ್ರದ ವೀರಭದ್ರ ಪ್ರತಿಷ್ಠೆಯು ಅವರ ಕಾಲದ್ದೆನ್ನಲಾಗಿದೆ. ಜಾದುವಂಶದ ಚಂದರ್‌ಸೇನನ ಮಗ ರಾಮಚಂದ್ರನು ಈ ಊರಿನಲ್ಲಿ ಮಹಾದೇವನ ದೇಗುಲಕಟ್ಟಿ ದೇವಪ್ರತಿಷ್ಠೆ ಮಾಡಲಿದ್ದ. ಆದರೆ ಗದವಟ್ಟಿಯ ದೇಗುಲದ ವೀರಭದ್ರಮೂರ್ತಿಯನ್ನು ತಂದು ಇಲ್ಲಿ ಪ್ರತಿಷ್ಠಿಸಲು ದೇವಾದೇಶವಾಯಿತಂತೆ. ಎಷ್ಟಾದರೂ : 'ರುದ್ರಸ್ಯತನಯೋ ರೌದ್ರ:' – ರುದ್ರನ ಪುತ್ರ ವೀರಭದ್ರನಲ್ಲವೇ? ಅವನು ಶಿವನ ಸೇನಾನಿಯಲ್ಲವೆ! ಹೀಗಾಗಿ ಮಗನಿಗೆ ಪ್ರಾಮುಖ್ಯಕೊಟ್ಟ ಮಹಾದೇವ. ಇದು ಬಹುಶಃ ಹಿಂದಿನ ಇತಿಹಾಸದ ಘಟನೆಗೆ ತಾಗಿಸಿದ ದೈವ ಸಂಕೇತವೆನಿಸುತ್ತದೆ.

ಒಂದು ಕಾಲಕ್ಕೆ ಹುಮ್ನಾಬಾದಿನಲ್ಲಿದ್ದ (ಜೈಸಿಂಗ್‌ನಗರ) ದೇಗುಲದಲ್ಲಿ ವೀರಭದ್ರಮೂರ್ತಿಯು ಜ॥ ಚಂದ್ರಗುಂಡರಿಂದ ಸ್ಥಾಪಿತಗೊಂಡಿದ್ದು, ದೇಗುಲ ಶಿಥಿಲವಾದಾಗಲೋ ಅಥವಾ ಶತ್ರುದಾಳಿಯ ಕಾಲದಲ್ಲಿಯೋ ಗದವಟ್ಟಿಗೆ ವಲಸೆ ಹೋದ ಪ್ರಾಚೀನ ವೀರಭದ್ರಮೂರ್ತಿಯನ್ನು ಕ್ರಿ.ಶ. ೧೭೫೫ ರಲ್ಲಿ ತಂದು ಪುನರ್ ಪ್ರತಿಷ್ಠಾಪನೆ ಮಾಡಿರಬೇಕು; ಇಲ್ಲವೆ ಜ॥ ಚಂದ್ರಗುಂಡಪ್ರತಿಷ್ಠಾ ವೀರಭದ್ರಮೂರ್ತಿ ಗದವಟ್ಟಿಯದಾಗಿರಬೇಕು. ಹುಮ್ನಾಬಾದಿನ ಜಾಗೀರ್‌ದಾರ್ ನವಾಬ್ ಬಂದೇ ಅಲಿಖಾನನು ಈ ವೀರಭದ್ರನ ಕೈಯ ಖಡ್ಗವನ್ನು ಪ್ರಾರ್ಥಿಸಿ ಪಡೆದು ದರೋಡೆಕೋರರನ್ನು ಸದೆ ಬಡಿದು ಅವರ ಹಾವಳಿ ತಪ್ಪಿಸಿದನಂತೆ. ಹಂತಿ ಜಾನಪದ ಹಾಡುಗಳಲ್ಲಿ ಗಡವಂತಿ (ಗದವಟ್ಟಿ!) ಯಿಂದ ಬಂದ ಈ ವೀರಭದ್ರನ ಥಾಲುವಿನ ವರ್ಣನೆ ಇದ್ದು ಅವನು ಮನ:ಕುಂಡಲಿನಿಯೋಗದ ಮನ:ಸಂಯಮಿ ವೀರಭದ್ರ ಶಿಲ್ಪಸಂಕೇತವಾಗಿದ್ದಾನೆ ಎನಿಸುತ್ತದೆ (ಕ್ಷೇತ್ರಕಾರ್ಯದಲ್ಲಿ ಪಡೆದ ಮಾಹಿತಿ). ಇದು ಸಂಸ್ಥಾನ ಸಂಬಂಧದ 'ಸರ್ವಾಂಗಲಿಂಗ ಶಿಲ್ಪ'ದ ಸಾಂಕೇತಿಕ ಅನ್ವಯವೂ ಹೌದು.

ಇದಲ್ಲದೆ ಜ॥ ಚಂದ್ರಗುಂಡರು ಕೋಲಾರ, ವಾಪಸಂದ್ರ, ಚಿಕ್ಕಬಳ್ಳಾಪುರ, ಮಂಚನಬೆಲೆ, ಗುಡಿಬಂಡೆ, ಹುಣಸಮಾರನಹಳ್ಳಿ, ಲೇಪಾಕ್ಷಿ, ಪೆನುಗೊಂಡೆ, ಐತಾಂಡಹಳ್ಳಿ, ಬೆಟ್ಟದಪುರ ಇತ್ಯಾದಿ ಅನೇಕ ಕಡೆ ಶಾಖಾ ಮಠಗಳನ್ನು ಸ್ಥಾಪಿಸಿದರು. ತಮ್ಮ ಪೀಠದ ಮಣಿಹವಾಗಿ, ಗಾಣಿಗ, ಗೌಳಿಗ, ಬಣಜಿಗ, ಬಳೆಗಾರ, ಹೂಗಾರ, ಈಡಿಗ, ಬೆಸ್ತ, ಕುಂಬಾರ, ನಿಂಪಿಗ ಮೊದಲಾದ ಕೆಳಗಾಗಿಸಿದ್ದ ವರ್ಗದ ೧೮ ಕುಲದವರನ್ನು ಶಿವಾಚಾರಕ್ಕೆ ಒಳಗು ಮಾಡಿದರು. ಇಂದಿಗೂ ಈ ೧೮ ಫಣಕಟ್ಟಿನ ಗುರುತ್ವ ಜ॥ ಚಂದ್ರಗುಂಡರ ದೇಶಿಕೇಂದ್ರರಿಂದಾಗಿ ಈ ಪೀಠಕ್ಕೆ ಇದೆ. ಆಂಧ್ರ ಮತ್ತು ಕರ್ನಾಟಕದ ಈ ಪಣಕಟ್ಟಿನಲ್ಲಿ ತುಸು ಬೇರೆ ಬೇರೆ ಜನಾಂಗಗಳು

ಸೇರ್ಪಡೆಗೊಂಡಿವೆ[೭೮]. ಇವರಲ್ಲದೆ ಪೀಠಕ್ಕೆ ವಿವಿಧ ಜನಾಂಗದವರು ಬುಡಕಟ್ಟಿನವರು, ಶಿಷ್ಯರಾಗಿ ನಡೆದುಕೊಂಡಿದ್ದಾರೆ. ವಿಶೇಷತಃ ಚಲವಾದಿಗಳ ಪಾರಂಪರಿಕ ಸೇವೆ ಗಮನಾರ್ಹವಾಗಿದೆ.

ಇಲ್ಲಿ ಗಮನಕ್ಕೆ ಬರುವ ಮತ್ತೊಂದು ಅಂಶವೆಂದರೆ ಜ॥ ಚಂದ್ರಗುಂಡ ದೇಶಿಕೇಂದ್ರರ ಕಾಲಕ್ಕೆ, ಅವರ ಜೊತೆಯಲ್ಲಿ ಬಂದವರೆನ್ನಲಾದ ಶ್ರೀ ಶೈಲದ ಗಿರಿಜನರಾದ ವೇಕರ ಚುಂಚಲು (ಕೋಲಾರದ ಬಳಿ ಗುಮ್ಮನಾಯ್ಕನ ಪಾಳ್ಯದ ಬಳಿ ಇವರ ವಂಶೀಕರಿದ್ದಾರೆ.) ಹಾಗು ಅವರಿಗಿರುವ ಗೂಳೂರು ಪೀಠದ ಸಂಬಂಧವಾಗಿದೆ. ಕೋಲಾರಜಿಲ್ಲೆಯ ಗುಮ್ಮನಾಯ್ಕನ ಪಾಳೆಪಟ್ಟಿನ ನಾಯಕರು ಮೂಲದಲ್ಲಿ ಶ್ರೀಶೈಲದಿಂದ ಬಂದ ಚುಂಚರ (ವೇಕರ ಚುಂಚಲು) ಪೈಕಿಯವರು. ಇವರು ಶ್ರೀ ನಿಡುಮಾಮಿಡಿ ಪೀಠಕ್ಕೆ ನಡೆದುಕೊಂಡು ಬಂದವರಾಗಿದ್ದಾರೆ ಹಾಗು ಛಲವಾದಿಗಳನ್ನು ಕಳಿಸಿಕೊಡಲು ಪೀಠದಿಂದ ಇವರಿಗೆ ಆದೇಶ ಹೋಗುತ್ತಿತ್ತು ಎಂದು ಗುಮ್ಮನಾಯ್ಕನ ಪಾಳೇಪಟ್ಟು ನಾಯಕರ ವಂಶೀಕರಾದ ಶ್ರೀ ಜಿ. ನಗರ್ಲು ರಾಜಣ್ಣಾನಾಯ್ಕರು ತಿಳಿಸುತ್ತಾರೆ. ಈ ನಾಯಕ ವಂಶದವರನ್ನು ದೊರೆಗಾರ್ರು ಎಂದೂ ಕರೆಯುತ್ತಾರೆ.

ಈ ಗುಮ್ಮನಾಯ್ಕನ ಪಾಳೇಪಟ್ಟು ಕ್ರಿ.ಶ. ೧೨೪೨ರ ಸುಮಾರಿನಲ್ಲಿ ಆರಂಭವಾಗಿದ್ದು ವಿಜಯನಗರ ಪೂರ್ವದ ಪಾಳೇಪಟ್ಟು ಆಗಿತ್ತು. ಗುಮ್ಮನಾಯ್ಕನ ಪಾಳೇಪಟ್ಟಿನಲ್ಲಿಯೂ ನಿಡುಮಾಮಿಡಿ ಪೀಠದ ಶಾಖೆ ಇತ್ತು. ಹೀಗಾಗಿ ಈ ಪಾಳೇಪಟ್ಟಿನ ದೊರೆಗಳಿಗೆ ಪೀಠದ ವತಿಯಿಂದ ಮಾರ್ಗದರ್ಶನವೂ ಆಗುತ್ತಿತ್ತು; ೧೮ ಫಣಕಟ್ಟುಗಳ ಸಂಕೇತದ ಗಂಟೆ–ಬಟ್ಟಲನ್ನು ತರುವ ಛಲವಾದಿಗಳನ್ನು ಪೀಠಕ್ಕೆ ಕಳುಹಿಸುವ ಹೊಣೆಯೂ ಈ ಪಾಳೇಪಟ್ಟಿನ ದೊರೆಗಳಿಗೆ ಇತ್ತು. ಅದರಂತೆ ಈ ಪೀಠಕ್ಕೆ ಆ ವೇಕರ ಚುಂಚುಲು ವಂಶಿಕರು ನಡೆದುಕೊಂಡು ಬಂದಿದ್ದಾರೆ.

ಜ॥ ಮಾಚೇಶ್ವರ ಶಿವಾಚಾರ್ಯರು ರಾಯದುರ್ಗ ಸೀಮೆಯಲ್ಲಿ ಈ ವಂಶದ ರಾಜರಿಗೆ ಲಿಂಗದೀಕ್ಷೆ ನೀಡಿದರು. ರಾಜ ಕಟ್ಟಿಸಿಕೊಟ್ಟಮಠಕ್ಕೆ ಶ್ರೀ ಗುರು ಬಸವಸ್ವಾಮಿಗಳೆಂಬುವರನ್ನಿಟ್ಟರು. ಪುಂಗನೂರು ಅರಸರಿಗೂ ಲಿಂಗದೀಕ್ಷೆ ನೀಡಿದರು. ಇಂಥವರು ಗುಮ್ಮನಾಯಕನ ಪಾಳೆಯಗಾರರಿಗೂ ಧರ್ಮೋಪದೇಶವಿತ್ತರು. ಅದಾಗಿ ಆ ವಂಶೀಕರಿಗೆ ಪೀಠದ ಮೇಲೆ ನಿಷ್ಠೆ ಇದೆ.

ಪುಲ್ಲಕವಿ ಹೇಳುವಂತೆ ಈ ಪೀಠವು ಸಕಲಚ್ಛಾತ್ರ ನಿವಾಸವಾಗಿತ್ತು. ಅನುಭಾವಿಗಳ ಕೇಂದ್ರವಾಗಿತ್ತು. ವಿದ್ಯಾರ್ಥಿಗಳಿಗೆ ಅನುವಾಗಿತ್ತು. ಈಗಾಗಲೇ ಹೇಳಿದಂತೆ ಜ॥ ಚಂದ್ರಗುಂಡರು ತಮ್ಮ ಸಂಚಾರ ಕಾಲದಲ್ಲಿ ಬಹಳಷ್ಟು ವೀರಭದ್ರಮೂರ್ತಿಗಳ ಪ್ರತಿಷ್ಠಾಪನೆಯನ್ನು ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಗಮನಿಸುವಾಗ ಚಿಕ್ಕಬಳ್ಳಾಪುರ

ತಾಲ್ಲೂಕು ಮಂಚನಬೆಲೆಯಲ್ಲಿ ರುದ್ರದೇವರು ಎಂದು ಕರೆಯಲ್ಪಡುವ ವೀರಭದ್ರನ ಗುಡಿಯಲ್ಲಿ ಚಂದ್ರಗುಂಡರು ವೀರಭದ್ರನನ್ನು ಪ್ರತಿಷ್ಠಾಪಿಸಿದರೆಂದು ಡಾ॥ ಶ್ರೀ ಜ.ಚ.ನಿ. ಯವರು ತಮ್ಮ ಕೃತಿಯಲ್ಲಿ ಪ್ರಸ್ತಾಪಿಸಿದ್ದಾರೆ. ಆದರೆ ಇದು ಹಳೆಯ ಶಿಲ್ಪವಿರದೆ ವಿಜಯನಗರ ಕಾಲದ ಮೂರ್ತಿಯು ಕಾಲಾಂತರದಲ್ಲಿ ಪ್ರತಿಷ್ಠಾಪಿಸಲ್ಪಟ್ಟಿದ್ದರೂ, ಜ॥ ಚಂದ್ರಗುಂಡರು ಪ್ರತಿಷ್ಠೆ ಮಾಡಿದ ಸಂಕೇತವಾಗಿ ಇಲ್ಲಿನ ಕೆಲವು ತಾತ್ತ್ವಿಕ ಸಂಕೇತಗಳು ಕಾಣಬರುತ್ತವೆ. ಇಲ್ಲಿ ೩೬ ದೀಪದ ಗೂಡುಗಳನ್ನು ತ್ರಿಭುಜಾಕೃತಿಯಲ್ಲಿ ಗೋಪುರಾಕಾರವಾಗಿ, ಭಿತ್ತಿಯಲ್ಲಿ ಮೂಡಿಸಲಾಗಿದೆ. ವೀರಾಗಮದ ಭದ್ರಕವಚದಲ್ಲಿ ವೀರಭರನಿಗೆ ೩೬ ತತ್ವಗಳನ್ನು (ಷಟ್ ತ್ರಿಂಶತ್ವ ನಿಲಯಂ) ಆರೋಪಿಸಿದೆ. ಜ॥ ಚಂದ್ರಗುಂಡರಲ್ಲಿಯೂ ೩೬ ತತ್ವದ ಮನಃಕುಂಡಲಿನಿ ಯೋಗಸಿದ್ಧಿಯ ಪ್ರತೀಕವಾಗಿ ಸರ್ವಾಂಗಲಿಂಗದ ಸಂಬಂದ ಹೇಳುವುದುಂಟು. ಕಾರ್ತಿಕದಲ್ಲಿ ಈ ೩೬ ಗೂಡುಗಳಲ್ಲಿ ಹಣತೆ ಇಟ್ಟು ದೀಪೋತ್ಸವ ನಡೆಸುತ್ತಾರೆ. ಈ ರುದ್ರದೇವರಿಗೆ ನಡೆದುಕೊಳ್ಳುವವರು ಪೀಠದ ಶಿಷ್ಯರಾದ ಜ್ಯೋತಿಪಣದ ಸಜ್ಜನರೆ.

ಈಗಾಗಲೇ ಹೇಳಿದಂತೆ ಹೈಹಯನ ಮೊಮ್ಮಗ ಕಾರ್ತವೀರ್ಯಾರ್ಜುನ ಪ್ರಸಿದ್ಧಿಯ ಹೈಹಯವಂಶಕ್ಕೆ ಸೇರಿದ ರಾಜೇಂದ್ರಚೋಳನು ಸಪತ್ನೀಕನಾಗಿ ಲಿಂಗದೀಕ್ಷೆ ಪಡೆದ ಮೇಲೆ, ಜ॥ಚಂದ್ರಗುಂಡರು ಅವನ ಪಂಗಡವರಿಗೂ ದೀಕ್ಷೆ ನೀಡಿ ಸಜ್ಜನರು ಅಥವಾ ತೇಲಿಕರು ಎಂಬ ಹೆಸರಿಟ್ಟು, ಅವರ ಇಚ್ಛೆಯನ್ನು ಮಾನಿಸಿ ಬೆಜವಾಡದ ಮಲ್ಲೇಶ್ವರ ಮತ್ತು ಕನಕ ದುರ್ಗಾಂಬೆಯರನ್ನು ಇಷ್ಟದೈವವನ್ನಾಗಿಸಿದರು. ಈ ರಾಜವಂಶಿಕರು ಗುಮ್ಮನಾಯಕನ ಪಾಳೆಪಟ್ಟು ಆರಂಭವಾಗುವವರಿಗೂ ಕೂಡಿಕೊಂಡ, ಗೋರಂಟ್ಲ, ಕಂದಕೂರು ಇತ್ಯಾದಿ ಕಡೆ ತಮ್ಮ ಪಾಳೆಪಟ್ಟು ಹೊಂದಿದ್ದಂತೆ ತೋರುತ್ತದೆ. ಗುಮ್ಮನಾಯಕನಪಾಳೆಯಪಟ್ಟು (ಕ್ರಿ.ಶ. ೧೨೪೨ ರಲ್ಲಿ) ಆರಂಭವಾಗುವ ಮುಂಚೆಯೂ ಅವರು ಅಲ್ಲಿ ವಾಸ್ತವ್ಯವಿದ್ದಿರಬೇಕು. ಇದಕ್ಕೆ ಅಲ್ಲಿರುವ ಅಕ್ಕಗಾರು ದೇವತೆ, ಕರ್ನಿಕಲ ದೊಣೆಗೆ (ಕನ್ನಿಕುಲದೊಣೆ!) ಸಂಬಂಧಗೊಂಡ ಕತೆಗಳು ಸೂಚನೆ ಕೊಡುತ್ತವೆ.

ಈ ಸಂದರ್ಭದಲ್ಲಿ ಗುಮ್ಮನಾಯಕನ ಪಾಳೆಯಪಟ್ಟಿನ ಚುಂಚರ 'ವೇಕರಿ' ದೊರೆ ಮನೆತನ, ಇರುಂಗೋಳಚೋಳದೇವ, ಗುಮ್ಮನಾಯಕನ ಪಾಳೆಯದ ಬೆಟ್ಟದ ಮೇಳಿನ ಅಕ್ಕಗಾರು ದೇವತೆ, ಕರ್ನಿಕುಲ ದೊಣೆ (ಕನ್ನಿಕುಲದೊಣೆ!) ದೇವರಾಜಪಲ್ಲಿ ಇತ್ಯಾದಿ ಕುರಿತ ಇತಿಹಾಸ ಹಾಗು ಜಾನಪದೀಯ ಸಂಬಂಧಗಳನ್ನು ಅನುಲಕ್ಷಿಸಬೇಕಾಗುತ್ತದೆ.

ಹೈಹಯವಂಶದ ರಾಜೇಂದ್ರಚೋಳನ ವಂತಿಕ ಶಾಖೆಯವರೆನ್ನಬಹುದಾದ ನಿಡುಗಲ್ಲು ಚೋಳರು ಬೀಳಾನುವೃತ್ತಿಯಿಂದ (ಕುಮಾರವೃತ್ತಿಯಿಂದ)

ಗುಯ್ಯಲೂರಿನಲ್ಲಿ ಆಳ್ವಿಕೆಗೆ ನಿಂತರು. ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಮಹಾಮಂಡಲೇಶ್ವರರಾಗಿ ಕ್ರಿ.ಶ. ೧೧೧೫ರಲ್ಲಿ ಗುಯ್ಯಲೂರು ರಾಜಧಾನಿ ಮಾಡಿಕೊಂಡು ಆಳುತ್ತಿದ್ದುದು ಆಗಲೂ ಗುಯ್ಯಲೂರಿನ ಪ್ರಸಿದ್ಧಿಯನ್ನೆ ಸೂಚಿಸುತ್ತದೆ. ಈ ವೇಳೆಯಲ್ಲಿ ಜ॥ಚಂದ್ರಗುಂಡರನ್ನನುಸರಿಸಿ ಬಂದಿದ್ದ ಶ್ರೀ ಶೈಲದ ವೇಕರಿ ಚುಂಚರು, ಇರುಂಗೋಳನಲ್ಲಿ ಸೇನಾಧಿಪತಿಗಳೋ, ನಾಯಕರೋ ಆಗಿದ್ದರೆಂದು ತೋರುತ್ತದೆ. ಬಹುಶಃ ಈ ಕಾರಣವೇನೋ ಅವರಲ್ಲಿ ಮುಂದೆ ಆದ ಎರಡು ಗುಂಪುಗಳಲ್ಲಿ ಒಂದಕ್ಕೆ ಇರೋಳ್ಲು* (ಇರುಂಗೋಳ> ಇರುಗೋಳ> ಇರೋಳ > ಇರೋಳು > (ತೆಲುಗುರೂಪ ಇರೋಳ್ಲು!), ಇನ್ನೊಂದಕ್ಕೆ ಕಾಮಾಳ್ಲು ಎಂಬ ಹೆಸರಿದೆ. ಇರೋಳ್ಲು ಗುಂಪಿನವರು ಈಶ್ವರ , ಭೈರವ, ಶ್ರೀಶೈಲದ ಮಲ್ಲಿಕಾರ್ಜುನ, ವೆಂಕಟೇಶ್ವರ ಇತ್ಯಾದಿ ಹೆಚ್ಚಗಿ ಶಿವಪರದೇವತೆಗಳಿಗೆ ನಡೆದುಕೊಂಡರೆ, 'ಕಾವಾಳ್ಲು'ಗುಂಪಿನವರು ಖಾದಿ ನರಸಿಂಹಸ್ವಾಮಿಗೆ ನಡೆದುಕೊಳ್ಳುತ್ತಾರೆ. 'ಇರೋಳ್ಲು'ನವರಿಗೆ ಕೃಷಿಗಾರಿಕೆಯ ನೈಪುಣ್ಯದ ಆರೋಪವೂ ಇದೆ. ಈ ಎರಡು ಗುಂಪುಗಳಿಗೂ ಮೊದಲಿನಿಂದಲೂ ಗುರುಪೀಠವಾಗಿರುವುದು ಗೂಳೂರಿನ ಮಹಾಸಂಸ್ಥಾನ ಪೀಠವೆ.

ಈ ಗುಂಪುಗಳ ವಿಷಯವನ್ನು ತಿಳಿಸಿದವರು ವೇಕರಿ ದೊರೆವಂಶಿಕರಾದ ಶ್ರೀ ನಗರ್ಲು ರಾಜಣ್ಣನಾಯಕ ದೊರೆಗಾರ್ರು ಅವರು

ಈ ವೇಕರಿ ಚುಂಚರು ಕ್ರಿ.ಶ. ೧೨೪೨ ರಲ್ಲಿ ಗುಮ್ಮನಾಯಕನ ಪಾಳೆಪಟ್ಟು ಸ್ಥಾಪಿಸುವ ಮುನ್ನ ಹೈಹಯ (ಕಾರ್ತವೀರ್ಯಾರ್ಜುನ) ವಂಶಿಕ ರಾಜೇಂದ್ರಚೋಳನ ಪಂಗಡದವರಾದ ಸಜ್ಜನರು ಅಥವಾ ತೇಲಿಕರು, ಇರುಂಗೋಳಚೋಳ ಮಹಾಮಂಡಲೇಶ್ವರನ ಕೈಕೆಳಗೆ, ಗುಮ್ಮನಾಯಕನಪಾಳ್ಯದ ಬೆಟ್ಟ, ಕೊಡಿಕೊಂಡ, ಗೋರಂಟ್ಲ ಕುಂದಕೂರು, ಮಾರ್ಗಾನುಕುಂಟೆ, ಬುರಂಕೊಂಡ ಮುಂತಾದ ಆಗಿನ ಬಾಗೇಪಲ್ಲಿ, ಕೋಲಾರ ತಾಲ್ಲೂಕು ಪ್ರದೇಶದಲ್ಲಿ ತುಂಡುನಾಯಕರಾಗಿ ಪಾಳೆಪಟ್ಟುಗಳನ್ನು ಹೊಂದಿದ್ದರೆನ್ನಬೇಕು. ಆದರೆ ಇವರ ಪ್ರಾಬಲ್ಯ ಕುಸಿದ ಮೇಲೆ ಕ್ರಿ.ಶ. ೧೨೪೨ರ ವೇಳೆಗೆ ವೇಕರಿಚುಂಚರ ಪೈಕಿಯ ಖಾದ್ರಿ ಪತಿನಾಯಕ ಹಾಗು ಹಿರೇನಾರಸಿಂಹನಾಯಕರು ಶೋಭಕೃತು ಸಂವತ್ಸರದಲ್ಲಿ ಪಾತಪಾಳೆಯ ಎಂಬ ಗ್ರಾಮಕ್ಕೆ ಬಂದರು.

ಪಾತಪಾಳಯದ ಗುಮ್ಮರೆಡ್ಡಿ, ಲಕ್ಕರೆಡ್ಡಿ ಎಂಬ ಸಾಹುಕಾರರು ಖಾದ್ರಿಪತಿನಾಯಕನ ಯೋಗ್ಯತೆ ಕಂಡು ನಾಲ್ಕು ಬಿಂದಿಗೆ ವರಹಗಳನ್ನು ನೀಡಿದರು. ಅದರಿಂದಾಗಿ ಅವರು ಪಾಳೆಗಾರರಾಗಿ ಪ್ರಬಲಿಸಿದರು. ಇವರಿಂದ ಮೂರನೇ ದೊರೆ ಚೆನ್ನಮನಾಯಕನಿಗೆ (ಬಹುಶಃ ಬೆಟ್ಟದಲ್ಲಿಯ ಗುಪ್ತನಿಧಿ) ನಿಧಿಯೂ ಸಿಕ್ಕಿತು. ಕಾಡಾಗಿದ್ದ ಪ್ರದೇಶವನ್ನು ಕಡಿಸಿ ಸನಿಹದ ಬೆಟ್ಟದ ಬಲಿ ಅವನು ಹೊಸದಾಗಿ

ಊರು, ಕೋಟೆ ಕಟ್ಟಿಸಿದ; ಕಲ್ಯಾಣನಗರ ಎಂಬ ಹೆಸರಿಟ್ಟ. ತಮ್ಮ ವೇಕರಿ ಮನೆತನದ ಸಂತತಿಯನ್ನು ಉದ್ಧರಿಸಿದ ಗುಮ್ಮರೆಡ್ಡಿ, ಲಕ್ಕರೆಡ್ಡಿ ಅವರ ಹೆಸರಿನ ಮೇಲೆ ಗುಮ್ಮಯ್ಯಲಕ್ಕ ಎಂಬ ಬಿರುದನ್ನು ಚಿನ್ನಮನಾಯಕ ಧರಿಸಿದ. ಒಕ್ಕಲುಗಳನ್ನು ಕೈಕಸುಬಿನವರನ್ನು ತಂದು ಸೇರಿಸಿದ. ಕುಲಾಚಾರವನ್ನು ಗೊತ್ತು ಮಾಡಿದ. ದೊರೆಯಾದ ಕಾರಣ 'ಮಹಾನಾಯಕ' ಎನಿಸಿದ. ಜಾತಿವಾರು ಆಚರಣೆ ಗೊತ್ತುಮಾಡಿದ. ಅದರಿಂದ 'ಆಚಾರ್ಯ' ಎಂದು ಹೆಸರಾಯ್ತು. ಇವೆರಡನ್ನೂ ಸೇರಿಸಿ 'ಮಹಾನಾಯಕಾಚಾರ್ಯ' ಎಂಬ ಬಿರುದನ್ನು ಹೊತ್ತ. ಈತನೇ ವಂಶಿಕರಲ್ಲಿ ಮೊದಲು ರಾಜ್ಯಭಾರಕ್ರಮವನ್ನು ಏರ್ಪಡಿಸಿದ. ಈತನ ಬಗ್ಗೆ ತೆಲುಗು ಸೀಸಪದ್ಯ ಹೀಗಿದೆ:

'ಪರಡೆಬ್ಬಯೇನು ಪಾಳ್ಯೆಲ ಲೋಪಲ ? ಪೆದ್ದಯ್ಯೆ ಚಿನ್ನೊಂದಿ ಪೇರ್ಮಿಮರಸಿ ? ಪುಡಮಿ ವೇಕರಿ ವಂಶಾಬ್ದಿ ಚಂದ್ರುಡಗುಬು ? ನಿಲಿಚೆ ಬೋಪೆದ್ದ ಪಾಳೆನ ನೆರ್ಪು ಮರೆಯ ? .... ಚಿನ್ಮಯಗುಮ್ಮಭೂಪ ?

–ಅಂದರೆ ಎಪ್ಪತ್ತೇಳು ಪಾಳೆಯಗಾರರಲ್ಲಿ ಮುಖ್ಯನಾಗಿ ವೇಕರಿ ಎಂಬ ವಂಶಸಾಗರಕ್ಕೆ ಚಂದ್ರನಂತೆ ಶೋಭಿಸಿದ ಬಂಧು, ಭೃತ್ಯಪೋಷಕ, ಹಿರಿಯ ಪಾಳೆಯಗಾರ 'ಚಿನ್ಮಯಗುಮ್ಮ'ರಾಜ ಎಂದರ್ಥ.

ಹೀಗೆ ರಾಜಧಾನಿ ಮಾಡಿದ ಗುಮ್ಮನಾಯಕ ಪಾಳ್ಯಕ್ಕೆ ಈ ಸ್ಥಾನ ಮಾನ, ಜನರನ್ನು ಕೂಡಿಸಿ ಕೋಟೆ ಕಟ್ಟಿಸಿ ಕಲ್ಯಾಣದುರ್ಗವೆಂಬ ಹೆಸರಿಟ್ಟ. ಈ ಪಾಳೆಯಪಟ್ಟಿಗೆ ಆಗಿನ ಬಾಗೇಪಲ್ಲಿ ತಾಲ್ಲೂಕಿನ ಪ್ರದೇಶದ ಕೊಡಿಕೊಂಡ, ಗೋರಂಟ್ಲ, ಕಂದಕೂರು ಹಾಗು ಗುಮ್ಮ ನಾಯಕನ ಪಾಳೆಪಟ್ಟಿನ ಉತ್ತರದಲ್ಲಿದ್ದ ಗುಟ್ಟಪಾಳ್ಯ, ಮದ್ದೇಪಲ್ಲಿ ಸೇರಿದ್ದು ಆದಾಯವೂ ಅವನ ಕಾಲದಲ್ಲಿ ಹೆಚ್ಚಿತ್ತು. ಐತಿಹ್ಯದಂತೆ ಖಾದ್ರಿಪತಿನಾಯಕನಿಗೆ ಬುರಂಕೊಂಡ ಬೆಟ್ಟದಲ್ಲಿ ೨ ಕೊಪ್ಪರಿಗೆ ಗುಪ್ತನಿಧಿ ದೊರಕುವ ಬಗ್ಗೆ ಹುತ್ತದಿಂದ ದೇವತೆಯಿಂದ ಸಂದೇಶ ಬಂತಂತೆ. ಆಗ ಗುಡಿಯನ್ನು ಕಟ್ಟಿ ದೇವರಾಜಪಲ್ಲಿ ಎಂಬ ದೇವತಾನಾಮವಿಟ್ಟು ಅರಮನೆ ಕಟ್ಟಿ ವಾಸಮಾಡಿದ.

ಬಾಗೇಪಲ್ಲಿ ತಾಲ್ಲೂಕು ಗುಂಮಿನಾಯಕನ ಪಾಳ್ಯದ ಕ್ರಿ.ಶ. ೧೭೪೪ರ ಶಾಸನದಲ್ಲಿ: ಎ.ಕ.ಸಂ.೧೦ ಕೋಲಾರ ಜಿಲ್ಲೆ, ಬಾಗೇಪಲ್ಲಿ ಶಾಸನ ಸಂಖ್ಯೆ ೬೪)

'ಶ್ರೀ ಮಂನ್ಮಹಾನಾಯಂಕಾಚಾರ್ಯುಲ ಮಹಾರಾಜ
ಶ್ರೀ ಗುಂವಿನಾಯನಿ ನಾರಸಿಂಹ ನಾಯನಿವಾರಿ ಧರ್ಮಹಿತು
ಪತ್ನಿ ಅಯಿನ ರಾಮಕ್ಕ ಅಂಮಯಗಾರಿ ಪುತ್ರಲುಯಿನ
ವಸಂತಪ್ಪ ನಾಯಿನಗಾರಿಮುನ ಮಾಮ ಯಿರಿಕುಲ
ವಂಶೋಧಾರ ಕುಲಯಿನ ಅಪ್ಪಂನಗಾರಿ ಧರ್ಮಪತ್ನಿ

ಆಯಿನ ಕದಿರಂಮ ಗರ್ಭಾಬ್ದಿ ಚಂದ್ರೋದಯ ಯಲಮ್ಮ
ದಳವಾಯಿ ಸುಬ್ಬಪ್ಪಗಾರು ಕಲ್ಯಾಣಗಿರಿಯಿಂದ
ಆಚಂದ್ರಾರ್ಕ.................................

– ಈ ಶಾಸನದಿಂದ ಗುಂಮನಾಯಕ ಪಾಳೆಪಟ್ಟಿನ ದೊರೆಗಳಿಗೆ ೧೮ನೇ ಶತಮಾನದಲ್ಲಿಯೂ ಪರಂಪರಾಗತವಾದ 'ಮಹಾನಾಯಕಾಚಾರ್ಯ' ಎಂಬ ಬಿರುದು, ಪಾಳೆಪಟ್ಟಿಗೆ 'ಕಲ್ಯಾಣಗಿರಿ (ಕಲ್ಯಾಣದುರ್ಗ) ಎಂಬ ಹೆಸರೂ ಮುಂದುವರಿದಿದ್ದ ವಿಷಯ ತಿಳಿಯುವಲ್ಲಿ, ಹಿನ್ನೆಲೆಯ ಇತಿಹಾಸಕ್ಕೆ ಮತ್ತಷ್ಟು ಪೋಷಕ ಧ್ವನಿ ಒದಗುತ್ತದೆ. ಈ ಬಿರುದು ನಮೂದನೆಯು ಈ ವಂಶಿಕರು ಆಳ್ವಿಕೆಗೆ ಸೇರಿದ್ದ ಬಾಗೆಪಲ್ಲಿ, ಮುಳಬಾಗಿಲು, ಕೋಲಾರ ತಾಲ್ಲೂಕುಗಳ ಭಾಗಗಳಲ್ಲಿರುವ ಶಾಸನಗಳಿಂದ ಕ್ರಿ.ಶ. ೧೪೧೮ರಿಂದಲೇ ಕಾಣಬರುತ್ತದೆ. ಇಲ್ಲಿ 'ಯಿರಿಕುಲ'ಎಂದಿರುವುದು 'ಇರೋಳ್ಳು' ಎಂಬುದರ ಪರ್ಯಾಯ ರೂಪವಿರಬಹುದು.

ಇದಲ್ಲದೆ ಗುಂಮನಾಯಕನ ಪಾಳ್ಯದಲ್ಲಿರುವ ನರಸಿಂಹಸ್ವಾಮಿದೇಗುಲದ ಬೋದಿಗೆಯೊಂದರಲ್ಲಿರುವ ಶಾಸನವು:

'ಶೋಭಕೃತು ಸಂವತ್ಸರ ಆಸ್ವಿಜ ಶು೧೦ಲು ಗುಂಮಿನಾಯಕನಿಕುಮಾರ
ನಾರಸಿಂಹನಾಯನಿವಾರಿ ದಾದಿ ವುಗ್ರಾಣಂ ಪಾಪ ವುಭಯಂ ಯೋರ ಅಂಕಣಾಲು

– ಎಂದಿರುವಲ್ಲಿ ಶೋಭಕೃತು ಸಂವತ್ಸರ ಈ ಪಾಳೆಪಟ್ಟಿನವರಿಗೆ ಶುಭಕರ ಎಂದು ಪಾತಪಾಳೆಯಕ್ಕೆ ಪೂರ್ವದಲ್ಲಿ ದೊರೆ ನಾಯಕರು ಹಿಂದೆ ಇದೇ ಹೆಸರಿನ ಸಂವತ್ಸರದಲ್ಲಿ ಬಂದ ಹಿನ್ನಲೆಯಲ್ಲಿ ಗಮನಕ್ಕೆ ಬರುತ್ತದೆ. ಅಲ್ಲದೆ ದೇಗುಲ ನಿರ್ಮಾಣ, ಉಗ್ರಾಣ, ಬಾವಿ ಇತ್ಯಾದಿಗಳ ವ್ಯವಸ್ಥೆಯ ದಕ್ಷ ಆಡಳಿತ ಅವರಲ್ಲಿದ್ದ ಕುರುಹಾಗಿ ಕಾಣುತ್ತದೆ. ಹೀಗೆ ನರಸಿಂಹ ಭಕ್ತರಾದ ಗುಂಪು ಇದ್ದರೂ, ಶ್ರೀ ನಿಡುಮಾಮಿಡಿ ಪೀಠದ ಶಾಖಾ ಮಠವನ್ನು ಪಾಳೆಯದಲ್ಲಿ ಹೊಂದಿ ತಮ್ಮ ಗುರುಭಕ್ತಿಯನ್ನು ಧರ್ಮಸಮನ್ವಯದಿಂದ ತೋರಿದ್ದಾರೆ. ಇದು ಹೈಹಯ ವಂಶದ ಗುರುಮಠವೂ ಆಗಿತ್ತಲ್ಲದೆ? ಹಾಗಾಗಿ ಇವರಿಗೆ ಮುನ್ನ ಹೈಹಯ ವಂಶಿಕರೂ ರಾಜ್ಯಾಡಳಿತ ಸೂಕ್ತ ವೇದಿಕೆಯನ್ನು ಅಲ್ಲಿ ನಿರ್ಮಿಸಿದ್ದರು ಎನ್ನಬೇಕು.

ಈ ಮೇಲಿನ ಅಂಶಗಳಿಂದ ಹೆಕ್ಕುವಲ್ಲಿ ಹೈಹಯವಂಶದಿಂದ ಮೂಡಿಬಂದ ಸಜ್ಜನರೂ ಪಾಳೆಯಪಟ್ಟುಗಳನ್ನು ಹೊಂದಿ ಆಡಳಿತ ನಡೆಸುತ್ತಿದ್ದರು; ಇವರ ಪ್ರಾಬಲ್ಯ ಕಡಿಮೆಯಾದ ಮೇಲೆ ಶ್ರೀಶೈಲದಿಂದ ಜ॥ಚಂದ್ರಗುಂಡರೊಡನೆ ಬಂದ ಬುಡಕಟ್ಟು ಗಿರಿಜ ಜನಾಂಗದವರಾದ ವೇಕರಿ ಚುಂಚರು, ಗುಮ್ಮನಾಯಕನ

ಪಾಳೆಯಪಟ್ಟನ್ನೂ ಸ್ಥಾಪಿಸಿದರು. ಇಂಥ ಬುಡಕಟ್ಟು ಜನಾಂಗವೂ ರಾಜ್ಯ ಕಟ್ಟಲು ಶ್ರೀ ನಿಡುಮಾಮಿಡಿ ಪೀಠದ ಆಶೀರ್ವಾದ, ಮಾರ್ಗದರ್ಶನವಿತ್ತು ಎಂಬ ಸೂಚನೆಯೂ ಆ ಜನಾಂಗದ ಮನೆತನದ ಚರಿತ್ರೆ ಮತ್ತು ಆಚಾರಗಳಿಂದ ತಿಳಿಯುತ್ತದೆ. ಈ ಜನಾಂಗದವರು ಹರಿಹರ ಭೇದವಿಲ್ಲದೆ ವಿವಿಧ ಗುಂಪುಗಳಿದ್ದರೂ ಮನೆತನದ ಗುರುಪೀಠವಾಗಿ ಶ್ರೀ ನಿಡುಮಾಮಿಡಿ ಪೀಠಕ್ಕೆ ಭಕ್ತಿ ಗೌರವ ಪರಂಪರೆಯನ್ನು ನಡೆಸಿಕೊಂಡು ಬಂದರು. ಇದಕ್ಕೆ ಪೋಷಕವಾಗಿ ಡಾ||ಶ್ರೀ ಜಚನಿಯವರನ್ನು ಕರೆದುಕೊಂಡು ಹೋಗಿ 'ಕಾಮಾಳ್ಲು ಹಾಗು ಇರೋಳ್ಲು' ವಿಭಾಗದವರು ಪಾದಪೂಜೆ ನಡೆಸುತ್ತಿದ್ದುದೇ ಆಗಿದೆ. ಇವರು ೧೮ ಫಣಕಟ್ಟಿನ ಕುಲಾಚಾರ ಸಂಬಂಧದಲ್ಲಿ ಛಲವಾದಿ ಗಂಟೆಬಟ್ಟಲು ಹೊಂದಿದ್ದ ಛಲವಾದಿಗಳನ್ನು ಮಠದಿಂದ ಆಜ್ಞೆ, ಬರುವಾಗ ಕಳುಹಿಸಿಕೊಡುತ್ತಿದ್ದರು.

ಚಿನ್ನಮನಾಯಕನು ಜಾತಿವಾರು ಕುಲಾಚಾರವನ್ನು ಗೊತ್ತು ಮಾಡಿದವನಾಗಿ 'ಮಹಾನಾಯಕಾಚಾರ್ಯ' ಎನಿಸಿದ್ದನಷ್ಟೆ. ಇದು ಅವನು ರಾಜಧಾನಿಗೆ ಕೈಕಸುಬಿನವರನ್ನು ಕರೆತಂದನೆಂದಿರುವ ಕಾರಣ ೧೮ ಫಣಕಟ್ಟುಗಳಿಗೆ ಸೇರಿದವರಿಗೆ ಉದ್ಯೋಗ ಕಲ್ಪಿಸಿದವನೆನ್ನಬೇಕು. ಇದು ಶ್ರೀ ನಿಡುಮಾಮಿಡಿ ಪೀಠದ ೧೮ ಫಣಕಟ್ಟಿನ ದೀಕ್ಷಾಚಾರಕ್ಕೆ ಸಂಬಂಧಿಸಿದ ಸಂಗತಿಯಾಗಿ, ಪೀಠದ ಶಿಷ್ಯನಾಗಿ ಅವನು ಅದನ್ನು ನೇರ್ಪುಗೊಳಿಸಿದಂತಿದೆ. ಗುಮ್ಮನಾಯಕನ ಪಾಳ್ಯದಲ್ಲಿ ಪೀಠದ ಶಾಖಾಮಠವೂ ಇತ್ತಲ್ಲ. ಇನ್ನು ಮೊದಲೆ ಇದ್ದ ದೇವತೆ 'ಅಕ್ಕಗಾರು ದೇವತೆ' ಎಂದಿರುವ ಕಾರಣ ಅದು 'ಸಜ್ಜನರ' ಪಾಳೆಯಪಟ್ಟು ಆಗಿತ್ತೆನಿಸುತ್ತದೆ. ಅಕ್ಕಮ್ಮನ ದೊಣೆಯೂ ಅಲ್ಲಿದ್ದು, ದೇವತೆಗೆ ಗುಡಿಕಟ್ಟಿದ ಮೇಲೆ 'ಕರ್ನಿಕಲ ದೊಣೆ' (ಕನ್ನಿಕುಲ !) ಎಂಬ ಹೆಸರನ್ನು ಅದಕ್ಕೆ ನೀಡಿದುದನ್ನು ಗಮನಿಸಿದರೆ, ಹಿನ್ನೆಲೆ ಕತೆಯನ್ನು ಅರಿತು ನೀಡಿದ್ದಿರಬೇಕು ಎನಿಸುತ್ತದೆ.

ಸಜ್ಜನರ ಪೈಕಿಯ ಅಕ್ಕಮ್ಮ: ಕನ್ಯೆಯರಿದ್ದ ಮನೆಯ ಹಿರಿಯಕ್ಕ ಆಗಿದ್ದಿರಬೇಕು. ಬಹುಶಃ ಗಿರಿಜನ ವೇಕರಿ ವಂಶವು ರಾಜ್ಯ ಸ್ಥಾಪಿಸುವ ಬಹಳೇ ಮುನ್ನವೇ ಯಾವುದೋ ದಾಳಿಯಲ್ಲಿ ಹೈಹಯ ವಂಶಿಕರಾದ ಸಜ್ಜನರ ಆ ಪಾಳೆಯಪಟ್ಟು ವೈರಿದಾಳಿಗೀಡಾಗಿರಬೇಕು. ಆ ಸಮಯದಲ್ಲಿ ಅಕ್ಕಮ್ಮನಾದಿಯಾಗಿ ಇದ್ದ ಕನ್ಯೆಯರು 'ಕುಲವಾಗಿ'(ಒಟ್ಟಾಗಿ) ದೊಣೆಗೆ ಹಾರಿ ಆತ್ಮಾರ್ಪಣೆ ಮಾಡಿಕೊಂಡಿರುವಂತಿದೆ. ಐತಿಹ್ಯದ ರೀತ್ಯಾ ಮದುವೆಯಾಗದಿದ್ದ ಕನ್ಯೆಯರು ಈ ದೊಣೆಗೆ ಹಾರಿ ಬಲಿದಾನವಾದರು ಎಂಬ ಕತೆಯ ಹಿನ್ನಲೆಯಲ್ಲಿ ಮೇಲಿನ ಸಾಧ್ಯತೆಯನ್ನು ಗಮನಿಸಬಹುದು. ಇಂದಿಗೂ ಸಜ್ಜನರ ಪೈಕಿ 'ಅಕ್ಕಂ'ಮನೆತನವಿದೆ. ಮಾರ್ಗಾನುಕುಂಟೆಗೆ 'ಅಕ್ಕಂ'ದೇವತೆಯ ವಂಶೀಕರು ವಲಸೆ ಹೋದ ಮೇಲೆ ಸನಿಹದ ಬೆಟ್ಟಗಳಿಗೆ ಆ ಹೆಸರು ಇಟ್ಟುಕೊಂಡು ದೇವತಾನೆಲೆ ಏರ್ಪಡಿಸಿ

ಕರೆಯತೊಡಗಿದ 'ಅಕ್ಕಮ್ಮನ ಬೆಟ್ಟ' (ದೊಡ್ಡ ಅಕ್ಕಮ್ಮ, ಚಿಕ್ಕ ಅಕ್ಕಮ್ಮನ ಬೆಟ್ಟಗಳು: ದೊಡ್ಡಬೆಟ್ಟ, ಚಿಕ್ಕಬೆಟ್ಟ) ಎಂಬ ಹೆಸರು ಇದಕ್ಕೆ ಸಾಕ್ಷಿ ಎನ್ನುವಂತಿದೆ.

ಗುಮ್ಮನಾಯಕನ ಪಾಳೆಯಪಟ್ಟಿಗೆ ಸುಮಾರು ನಾಲ್ಕು ಕಿ.ಮೀ. ದೂರದಲ್ಲಿ ದೇವರಾಜಪಲ್ಲಿ ಇದೆ. ಇದರ ಬಳಿಯ ಬುರಂಕೊಂಡ ಬೆಟ್ಟದಲ್ಲಿ ಗುಪ್ತನಿಧಿಯು ವೇಕರಿ ವಂಶದ ಖಾದ್ರಿಪತಿನಾಯಕನಿಗೆ ದೇವತಾ ಸಂದೇಶವಾಗಿ ದೊರಕಿದ ಐತಿಹ್ಯವಿದೆ. ಅದರಿಂದ ದೇವತೆಯ ಗುಡಿ, ಅರಮನೆ ನಿರ್ಮಾಣ ಮಾಡಿ ದೇವರಾಜಪಲ್ಲಿ ಎಂಬ ಹೆಸರಿಟ್ಟನೆಂದಿದೆ.

ಹುತ್ತದಿಂದ ಹೊರಟ ಶಿವಶಕ್ತಿ ಜ್ವಾಲೆಯೇ ದೇವತಾ ಸಂದೇಶವಾಗಿ ಬಂದಿದೆ ಎಂಬ ಆ ಐತಿಹ್ಯವನ್ನು ಗಮನಿಸುವಲ್ಲಿ ಅದು 'ದುರ್ಗೆ'ಯ ದೇವತಾಗುಡಿ ಆಗಿದ್ದಿರಬೇಕು. ಜೊತೆಗೆ ಮಾರುತಿ ಪ್ರತಿಷ್ಠೆಯೂ ಆಯಿತೆನ್ನುವುದಿದೆ. ಅಂದರೆ ದೇವರಾಜಪಲ್ಲಿಯಲ್ಲಿ 'ದುರ್ಗೆ'ಯಲ್ಲದೆ 'ದುರ್ಗ'ವನ್ನು ಕಟ್ಟಿದ ಸಂದರ್ಭವಾಯಿತೆನ್ನಬೇಕು. ಅಂತಾಗಿ ಅಲ್ಲಿ ಮೊದಲ್ಲಿದ್ದ 'ದುರ್ಗಂ' ಮನೆತನದವರು ಕೂಡಿಕೊಂಡ, ಮಾರ್ಗಾನುಕುಂಟೆಯತ್ತ ವಲಸೆ ಬಂದಿರಬೇಕು. ಕೊಡಿಕೊಂಡವೂ ಒಂದು ಪಾಳೆಯಪಟ್ಟಾಗಿ ಕೋಟೆಗಳಿಂದ ಅವೃತವಾದ ಬೆಟ್ಟವಾಗಿ ತಪ್ಪಲಿನಲ್ಲಿ ಗ್ರಾಮವನ್ನು ಹೊಂದಿದೆ. ಮೇಲುಬೆಟ್ಟ, ಕೆಳಗಿನ ಬೆಟ್ಟ ಎಂಬ ಎರಡು ಭಾಗವಿದ್ದು ಕೆಳಗಣ ಬೆಟ್ಟದಲ್ಲಿ 'ಅಕ್ಕಮ್ಮ ದೇವಿಯ'ವಿಗ್ರಹವೂ ಇದೆ. ಸಪ್ತಮಾತೃಕೆಯ ಪ್ರತಿನಿಧಿಯಾಗಿ 'ಚಾಮುಂಡಿ'ಯನ್ನು ತೋರುವುದುಂಟು. ಚಾಮುಂಡಿಯು 'ದುರ್ಗೆ'ಯ ಅನ್ವಯರೂಪವೆ ಆಗುವಲ್ಲಿ 'ದುರ್ಗಂ' ಮನೆತನದ 'ದುರ್ಗ' ಮತ್ತು 'ದುರ್ಗೆ'ಯ ದ್ವಯಾರ್ಥದಲ್ಲಿ ಆರೋಪವಾಗಿರಬೇಕು. ಮನೆತನದ ಈ ದುರ್ಗೆಯ ಮೂಲ ನೆಲೆ 'ದೇವರಾಜಪಲ್ಲಿ'ಯಾದ್ದರಿಂದ ದುರ್ಗಂ ಮನೆತನದವರಲ್ಲಿ 'ದೇವರಾಜ್' ಎಂಬ ಹೆಸರಿನವರು ಈಗಲೂ ಇದ್ದಾರೆ.

ಪಾಳೆಪಟ್ಟು ನಾಶವಾದ ಮೇಲೆ 'ಮಾರ್ಗಾನುಕುಂಟೆ'ಗೆ 'ಸಜ್ಜನರ'ವಲಸೆ ಆಗಲು ಆ ಸ್ಥಳನಾಮವೂ ಸೂಚನೆ ನೀಡುತ್ತದೆ. ಮರಗ್ಯೆನ ಕುಂಟ ಮಾರ್ಗಾನುಕುಂಟ*– ಎಂದರೆ ರಹಸ್ಯವಾದ ಸ್ಥಳ. ಅಡಗಿಕೊಳ್ಳುವ, ಮರೆಯಾದ ಸ್ಥಳ ಎಂದಾಗುತ್ತದೆ. ಹೀಗಾಗಿ ವೈರಿಪಾಳೆಗಾರರಿಂದ ತಪ್ಪಿಸಿಕೊಂಡು ಬಂದು ನೆಲೆಯಾದ ಸ್ಥಳವಿದಾಗಿರಬೇಕು. ಬಹುಶಃ ಚಿನ್ನಮನಾಯಕನ ಕಾಲದಲ್ಲಿ ಇದ್ದ ಗುಟ್ಟಪಾಳೆಯದ ಪಾಳಯಗಾರ ಪ್ರಬಲ ಯರಮಾಚಿ ಪೆಮ್ಮನಾಯಕನ ಕಾಲದಲ್ಲಿ ಇದ್ದ ಗುಟ್ಟಪಾಳೆಯದ ಪಾಳಯಗಾರ ಪ್ರಬಲ ಯಾರಮಾಚಿ ಪೆಮ್ಮನಾಯಕನ ಉಪಟಳವನ್ನು ತಾಳಲಾರದೆ ಸಜ್ಜನರ ಪೈಕಿಯ ಪಾಳೆಯಗಾರರು ಮಾರ್ಗಾನುಕುಂಟೆ, ಕೊಡಿಕೊಂಡ, ಬೂದಿಲಿ, ಮುಂತಾದ ಕಡೆ ವಲಸೆ ಬಂದಿರಬೇಕು. ಅಂದರೆ ಈ ವಲಸೆ ೧೩ನೇ ಶತಮಾನದ (ಕ್ರಿ. ಶ. ೧೨೪೨ರ ಮುನ್ನ)ಪೂರ್ವಾರ್ಧದಲ್ಲಿ ನಡೆದಿರಬೇಕು.

ಹೈಹಯ ರಾಜವಂಶಿಕರಾದ 'ಸಜ್ಜನರು' ವಿಭಾಗದಲ್ಲಿ ಗೋರಂಟ್ಲದಲ್ಲಿ: ತಾಡಮರಿ, ಶೆಟ್ಟಿಪಳ್ಳಿ, ನಾಮಗೊಂಡಲ; ಪುಟಪರ್ತಿಯಲ್ಲಿ: ಮಧ್ಯಪಲ್ಲಿ ತ್ರಿಪುರಾಂತಕಂ, ದುರ್ಗಂ; ಮಾರ್ಗಾನುಕುಂಟೆಯಲ್ಲಿ ಅಕ್ಕಂ, ಅಪ್ಪಾಜಿ, ದುರ್ಗಂ, ಶೆಟ್ಟಿಪಲ್ಲಿ, ಮನೆತನಗಳು ಕಾಣಬರುತ್ತವೆ. ಇವಲ್ಲದೆ ತಾಡಪತ್ರಿ ಮನೆತನ, 'ಗೂಳಿ ಮನೆತನ' 'ಹುರುಳಿ' ಮನೆತನ, ಕುಟಾಗೋಳ್ಲು

ಈ ಗಾದೆ ಹಾಗು ಅರ್ಥವನ್ನು ೨೭-೧೧-೨೦೦೨ ರಂದು ಡಾ ಡಿ.ವಿ.ದೇವರಾಜ್ ಅವರೊಡನೆ

ಶ್ರೀ ದುರ್ಗಂ ಚಿಕ್ಕವೀರಪ್ಪನವರನ್ನು ಭೇಟಿ ಮಾಡಿದಾಗ ತಿಳಿದದ್ದು.

ಮನೆತನ, ಅಪ್ಪಾಜಿ ಮನೆತನ, ಇಬ್ಬಳ್ಳಿ ಮನೆತನ, ಪುಲ್ಲರಿ ಮನೆತನಗಳಿಗೂ ಇವರಲ್ಲಿ ಕಾಣಬರುತ್ತವೆ. ಪೆನುಗೊಂಡೆ, ನಿಡುಮಾಮಿಡಿ, ಹಿಂದೂಪುರದವರೆಗೆ ಈ ಮನೆತನಗಳು ಹರಡಿ ಕೊಂಡಿವೆ.

ನಿಡುಮಾಮಿಡಿಯಲ್ಲಿ 'ಮಾಮಿಡಿ'ಪವಾಡ ನಡೆದು ಶ್ರೀ ನಿಡುಮಾಮಿಡಿ ಕರಿಬಸವಸ್ವಾಮಿಗಳ ಶಿಷ್ಯರಾದ ಕ್ರಿ.ಶ. ೧೨೦೪ರ ಹೆಳವರ ಪಂಗಡದ ಕಂಚಿ ಶಾಸನದ ಕಾಲವನ್ನು ಗಮನಿಸಿದರೆ, ಈ 'ಸಜ್ಜನರ'ಪಾಳೆಪಟ್ಟಾ ನವರು ವಲಸೆಹೋದ ಹಲವಾರು ಗ್ರಾಮಗಳು ನಿಡುಮಾಮಿಡಿಗೂ ಸಮೀಪವಿದ್ದು ಚರಪಟ್ಟಾಧಿಕಾರವಿದ್ದ ನಿಡುಮಾಮಿಡಿ ಶಾಖಾ ಮಠವೂ ಆ ಶಿಷ್ಯ ಜನರಿಗೆಲ್ಲಾ ಧಾರ್ಮಿಕ, ಸಾಂಸ್ಕೃತಿಕ ಆಚಾರಗಳಿಗೆ ಅನುಗುಣವಾಗಿ ಪ್ರಸಿದ್ಧಿಯನ್ನು ಪಡೆಯಿತೆನ್ನಬೇಕು.

ಫ್ರಾನ್ಸಿಸ್ ಬುಕಾನನ್ನನೂ ೧೮೦೭ ರಲ್ಲಿ ಮದ್ರಾಸಿನಿಂದ ಮಲಬಾರಿಗೆ ಮಾಡಿದ ತನ್ನ ಪ್ರವಾಸ ಕಾಲದಲ್ಲಿ ಈ ಪೀಠದ ಜ್ಯೋತಿಪಣದ ಶಿಷ್ಯರ ಕುರಿತು ಹೇಳಿದ್ದಾನೆ:

There is a tribe of oil-makers, who in their mill use only one ox, and who are called Heganigaru. They call themselves Jotyphanadas; and they are not followers of the Brahmins, do not acknowledge themselves to be sudras.. They are a tribe of Karanata extraction and besides their proper business of making oil, they cultivate the fields and gardens and deal in grain and cloth. They have hereditary chiefs called Chittigaras who with the advice of a council of ten settle all disputes and punish transgressions against the rules of the cast..... The Jotypanada are divided into four or five families and a man can not marry a women of his own family. They allwear the Linga, and ofcourse Shiva is the principle object of their worship...Their Guru is Cari-Baswa-Uppa, the Nidamavudy Swamulu, who sends his disciples to receive their contributions to ear their vicutals, and to give them holy water. (Francis Buchanan: A journey from Madras

through the country of Mysore, Canara and Malabar, Vo.II, 1807, London; AES New Delhi Reprint 1988, pp 154-155).

ಈ ಮೇಲಿನ ಅಂಶಗಳು ಕ್ರಿ.ಶ. ೧೮೦೭ರ ಸಮಯದಲ್ಲಿದ್ದ ಶ್ರೀ ನಿಡುಮಾಮಿಡಿ ಮಠದ ಶ್ರೀ ಕರಿಬಸವೇಂದ್ರರ ಶಿಷ್ಯರಾದ ಜೋತಿಪಣದವರನ್ನು, ಹಾಗು ಮಠದ ೧೮ ಫಣಕಟ್ಟಿನ ಮೇಲಿನ ಗುರುವಿನ ಅಧಿಕಾರವನ್ನು ಮನನಿಸುವಂತಿವೆ.

'ಸಜ್ಜನರು' ಪೈಕಿಯ ಮನೆತನಗಳು ಪೀಠದ ಮಹತಿಯನ್ನು ಅನೂಚಾನ ಪರಂಪರೆಯಲ್ಲಿ ಪಾಲಿಸಿಕೊಂಡು ಬಂದಿರುವಂತೆ, ತಮಿಳುನಾಡಿನ, ಕನ್ನಡನಾಡಿನ ಇನ್ನೂ ಅನೇಕ ಮನೆತನಗಳು ಮಹಾರಾಷ್ಟ್ರದ ಮನೆತನಗಳು, ಪೀಠದ ಹಿರಿಮೆಗನುಗುಣವಾಗಿ ನಡೆದುಕೊಂಡಿವೆ. ಅವುಗಳ ಕುರಿತಾಗಿಯೂ ವಿವರಗಳು ಮಂಡಿತವಾಗಬೇಕಿವೆ. ವಿಶೇಷತ: ಈ ಪೀಠಕ್ಕೆ ನಡೆದುಕೊಳ್ಳುವ ಉತ್ತರ ಕರ್ನಾಟಕದ ವಿವಿಧ ಮನೆತನಗಳ ಇತಿಹಾಸವು ಪೀಠದ ಚರಿತ್ರೆಯಲ್ಲಿ ಮಂಡಿತವಾಗಬೇಕಿದೆ.

ಶ್ರೀ ಚಂದ್ರಗುಂಡ ದೇಶಿಕೇಂದ್ರರ ಕರಕಮಲಸಂಜಾತರೆನ್ನಲಾದ ವೃಷಭರಾಜೇಂದ್ರ ದೇಶಿಕರು ಧಾರವಾಡದ ಬಳಿಯ ನರೇಂದ್ರದಲ್ಲಿ ನೆಲೆನಿಂತು ಮಠ ಸ್ಥಾಪಿಸಿದರು. ರಾಜನು ಒಡ್ಡಿದ ಸ್ಪರ್ಧೆಯಲ್ಲಿ ಗೆದ್ದು ಪಡೆದ ಗ್ರಾಮದಾನವನ್ನು ಆನೆಕಾಯುತ್ತಿದ್ದ ಬೊಮ್ಮಪ್ಪ ಎಂಬುವನಿಗೆ ನೀಡಿ ಅವನ ಬಾಳಿಗೆ ಆಧಾರ ಮಾಡಿದರಂತೆ. ಇವರು ರಾಜಗುರುಗಳಾಗಿದ್ದರೆಂದು ಹೇಳಿಕೆ ಇದೆ. ಆದರೆ ಪೀಠದ ಪಟ್ಟವಲ್ಲರಿಯಿಂದ ಈ ಗುರುಗಳ ಹೆಸರು ಹಾಗು ಮಣಿಹಗಳ ಬಗ್ಗೆ ಮಾಹಿತಿಗಳು ಇನ್ನೂ ಸ್ಪಷ್ಟವಾಗಿ ದೊರಕಬೇಕಿದೆ. ನರೇಂದ್ರದಲ್ಲಿದ್ದ ಸಾಕಷ್ಟು ಭೂಮಿಯನ್ನು ಪೀಠವು ಈಗ ಧಾರವಾಡ ಕೃಷಿ ಕಾಲೇಜಿಗೆ ದಾನ ನೀಡಿದೆ.

ಪೀಠದ ಮುಂದಿನ ಆಚಾರ್ಯರ ಪೈಕಿ ಜಾಕರಿಬಸವೇಂದ್ರ ದೇಶಿಕೇಂದ್ರರು ಗುಯ್ಯಲೂರಿನಿಂದ ಧರ್ಮಪ್ರಸಾರಕ್ಕೆ ೧೨ನೇ ಶತಮಾನದ ಉತ್ತರಾರ್ಧದಲ್ಲಿ ಸಂಚಾರ ಹೊರಟು ಪೆನುಗೊಂಡೆಯ ಸನಿಹದ ಸ್ವರ್ಣವತೀ ನದಿ ತೀರದ ಸೋಮಲಾಪುರದ ಒಳಗೆ ಬಂದು ಒಣಮಾಮರದ ಬಳಿ ಶಿವಪೂಜಾನಿಷ್ಠರಾದರು. ಈ ಮರಕ್ಕೆ ಅಭಿಷೇಕ ಜಲ ಎರೆದು ಚಿಗುರಿಸಿ ಪವಾಡರೂಪಿ ಕಾಯಕದಿಂದ ಪ್ರಸಿದ್ಧರಾಗಿ 'ನೀಡುಮಾಮಿಡಿ' ಎಂದು ಭಿಕ್ಷೆ ಬೇಡಿ ಪಡೆದರು. ಹಾಗೆಯೇ ಪೀಠಕ್ಕೆ ನಿಡುಮಾಮಿಡಿ ಎಂಬ ವಿಶೇಷಣ ಬರಲು ಕಾರಣರಾದರು. ಬಹುಶಃ ಸೋಮಲಾಪುರದಲ್ಲಿ ನೀರಿಲ್ಲದೆ ಒಣಗುತ್ತಿದ್ದ ಮಾವಿನ ಮರಗಳಿಗೆ ನೀರಿನ ಆಸರೆಯನ್ನು ಮೇಲೆ ಒಣಗಿದ್ದ ನದಿಯನ್ನು ತೋಡಿ ನಿರಂತರವಾಗಿ ನೀರು ತೆಗೆದು ಮರಗಳನ್ನು ಪೋಷಿಸಿ ಶಿಷ್ಯರೊಡಗೂಡಿ ಗುರುಗಳು ಕಾರ್ಯವನ್ನು ಸಾರ್ಥಕವಾಗಿ ಪೂರೈಸಿರಬೇಕು. ಈ ಕಾಯಕ ಮಾಡಿ ಅವರು ಮಾಮರದ ಕೆಳಗೆ ಕುಳಿತು ಹೂಫಲವನ್ನು ಶಿವಪೂಜಾ ಸಮಯದಲ್ಲಿ

ಪಡೆದ ಸಂಗತಿಯೇ ಜನರ ಕಣ್ಣಲ್ಲಿ ಪವಾಡವೆನಿಸಿತು. 'ನೀಡು'ಶಬ್ದವೆ (ಮಾಮರವು ನೀಡಿದ್ದು) ರೂಪಾಂತರವಾಗಿ ನಿಡುಮಾಮಿಡಿ ಎಂಬ ಹೆಸರು ಈ ನೆಲೆಗೆ ಒದಗಿತು. ಪೀಠದ ೧೯ ಪ್ರಸಿದ್ಧ ನೆಲೆಗಳಲ್ಲಿ ಇದೂ ಒಂದಾಗಿ ಶ್ರೀ ನಿಡುಮಾಮಿಡಿ ಸಂಸ್ಥಾನ ಶ್ರೀಶೈಲ ಪೀಠ ಎಂದು ಚಾಲ್ತಿಗೊಂಡ ಬಗೆಗೆ ಆಂಧ್ರಪ್ರದೇಶದ ಡಿಸ್ಟ್ರಿಕ್ಟ್ ಗ್ಯಾಜೆಟಿಯರ್ ಅನಂತಪುರ(೧೯೭೦), ಪುಟ (೮೮) ಸೂಚಿಸಿದೆ.

ವಿಜಯನಗರದ ಕಾಲದಲ್ಲಿ ಅವರ ಎರಡನೇ ರಾಜಧಾನಿಯಾಗಿದ್ದ ಪೆನುಗೊಂಡೆಯು ಹೊಯ್ಸಳರ ಕಾಲದಿಂದಲೂ ಪ್ರಸಿದ್ಧಿಯಾಗಿತ್ತು ಎಂಬುದಕ್ಕೆ ನಿಡುಮಾಮಿಡಿ ಪವಾಡದ ಆಕಾಲಕ್ಕೆ ಪೆನುಗೊಂಡೆಯ ನಗರಾಧ್ಯಕ್ಷನಾಗಿದ್ದ ಅಚ್ಯುತರಾಯನು ಕ್ರಿ.ಶ. ೧೨೦೪ರ ಕಂಚಿನ ಶಾಸನದಲ್ಲಿಯೇ 'ನಿಡುಮಾಮಿಡಿ'ಯ ಹೆಸರು ಉಕ್ತವಿರಲು ಹೊಯ್ಸಳ ವಂಶಿಕನಾಗಿ ಪೆನುಗೊಂಡೆ ಅಧಿಕಾರಿ ಆಗಿದ್ದಿರಬಹುದು. ಅವನೋ ಅಥವಾ ನಿಡುಗಲ್ಲುಚೋಳ ವಂಶದ ಇರುಂಗೋಳ ಚೋಳ ಮಹಾರಾಯನೋ ಹೊಯ್ಸಳ ಸಾಮಂತರಾಗಿ ಹೈಹಯ ವಂಶದವನೆನಿಸಿ ಗೊಯ್ಯದವಾಡಿಯನ್ನು ಎರಡನೇ ರಾಜಧಾನಿಯಾಗಿ ಮಾಡಿಕೊಂಡಿದ್ದು ಗೂಳೂರು ಸಂಸ್ಥಾನದಲ್ಲಿದ್ದ ರಾಜಗುರು ಜಗದ್ಗುರು ಕರಿಬಸವೇಂದ್ರರನ್ನು ನಿಡುಗಲ್ಲು ಪ್ರಾಂತ್ಯ ವ್ಯಾಪ್ತಿಗಿದ್ದ ಸೋಮಲಾಪುರಕ್ಕೆ ಬಂದು ಇರಲು ಪ್ರಾರ್ಥಿಸಿದಾಗ ಅವರು 'ನೀಡುಮಾಮಿಡಿ' ಮಣಿಹ ತೋರಿ, ನಿಡುಮಾಮಿಡಿ ಶಾಖ ಮಠವನ್ನು ಸ್ಥಾಪನೆ ಮಾಡಿ ನಿಡುಗಲ್ಲು ಚೋಳರಿಗೂ ರಾಜಗುರುವಾಗಿ ಮುಂದುವರೆದಿರಬೇಕು. ಸೋಮಲಾಪುರದ ಗುರು ಮಣಿಹದ ಪ್ರಸಿದ್ಧಿಯಿಂದಾಗಿ ಸೋಮಲಾಪುರ ಎಂಬ ಹೆಸರು ಹಿಂದೆ ಸರಿದು ಪ್ರತಿನಾಮಧೇಯವಾಗಿ 'ನಿಡುಮಾಮಿಡಿ' ಎಂಬ ಹೆಸರು ಚಾಲ್ತಿಗೊಂಡಿದೆ. ರಾಜರ ಭಕ್ತಿ ಗುರುಗಳ ಮಣಿಹದ ಕಾರಣ ಧ್ವನಿಯುಕ್ತವಾಗಿ ಪೀಠವು ತನ್ನಲ್ಲಿ 'ನಿಡು' ಎಂಬ ಶಬ್ದವನ್ನು ಅಡಕ ಮಾಡಿಕೊಂಡಂತೆ ತೋರುತ್ತದೆ. ಹೊಯ್ಸಳ ರಾಜಕುವರಿ ಸೋಮಲಾದೇವಿಯು ಕುಲೊತ್ತುಂಗ ಚೋಳನ ರಾಣಿಯೋ ಅಥವಾ ಅಚ್ಯುತರಾಯನ ಪತ್ನಿಯೋ ಆಗಿದ್ದು, ಆಕೆಯ ಹೆಸರಿನಲ್ಲಿ ಸೋಮಲಾಪುರ ಎಂಬ ಗ್ರಾಮದಲ್ಲಿ ನೀಡುಮಾಮಿಡಿ ಪವಾಡ ನಡೆದು ಅಲ್ಲಿ ನಿಡುಮಾಮಿಡಿ ಮಠದ ಸ್ಥಾಪನೆ ಆಗಿ ಗ್ರಾಮಕ್ಕೂ ಆ ಹೆಸರು ಕೊಟ್ಟು ಕುಲಗುರು ರಾಜಗುರು ಎನಿಸಿಕೊಂಡ ಕರಿಬಸವೇಂದ್ರರಿಗೆ ಅಲ್ಲಿಯೇ ಮಠವನ್ನು ಕಟ್ಟಿಸಿ ಕೊಡಲಾಯಿತು. ಪೆನೆಗೊಂಡೆಯು ಆ ಹೊತ್ತಿಗೂ ಪ್ರಸಿದ್ಧವಾದ ರಾಜಧಾನಿಯೂ ಆಗಿದ್ದು ನಿಡುಮಾಮಿಡಿಯು ಅಲ್ಲಿಂದ ಸುಮಾರು ೬ ಮೈಲಿ ದೂರದಲ್ಲಿದ್ದು ಪೀಠ ಹಾಗು ರಾಜಧಾನಿಯ ಸನಿಹ ಪ್ರಾಮುಖ್ಯತೆಯ ಕಾರಣ ಜ॥ ಕರಿಬಸವೇಂದ್ರರು ನಿಡುಮಾಮಿಡಿ ಮಠದಲ್ಲಿ ನಿಂತು ಪೀಠದ ಪರಂಪರೆಯಂತೆ ಅಚ್ಚಾಳು ವೀರಭದ್ರ, ದುರ್ಗೆಯರನ್ನು ಪ್ರತಿಷ್ಠಾಪಿಸಿದರು. ಈ ನಿಡುಮಾಮಿಡಿ ಮಠವು ಗುಯ್ಯಲೂರಿನಲ್ಲಿದ್ದ

ಮಹಾಸಂಸ್ಥಾನದ ಶ್ರೀಪೀಠದ ಅಂದಿನ ಶಾಖ ಮಠವಾಗಿತ್ತು. ಇದಲ್ಲದೆ ಈ ಜ॥ ಕರಿಬಸವೇಂದ್ರ ದೇಶಿಕರಿಗೆ ಇಲ್ಲಿ ಚರಪಟ್ಟಾಧಿಕಾರವಿತ್ತು ಎಂದು ಡಾ॥ ಶ್ರೀ ಜ.ಚ.ನಿ. ಯವರು ಉಕ್ತಮಾಡಿದ್ದಾರೆ.

೧೧ನೇ ಶತಮಾನದಲ್ಲಿ ಹೈಹಯ ರಾಜವಂಶದ ರಾಜೇಂದ್ರಚೋಳನು ನಾರಿಕೇಳ ಪವಾಡಕಂಡು, ಹತ್ಯಾದೋಷ ನಿವಾರಣೆ ಹೊಂದಿ ಜ॥ ಚಂದ್ರಗುಂಡರಿಗೆ ಮಠ ಕಟ್ಟಿಸಿಕೊಟ್ಟಂತೆ ೧೨ನೇ ಶತಮಾನದಲ್ಲಿ ಅಚ್ಯುತರಾಯನ (ಹೊಯ್ಸಳವಂಶಿಕ!) ಕಾಲದಲ್ಲಿ ಬರವಿದ್ದ ಸೋಮಲಾಪುರದಲ್ಲಿ ಮಾಮಿಡಿ ಪವಾಡದಿಂದ ಹಸಿರುವಲಯ ನಿರ್ಮಿಸಿದ ಜ॥ ಕರಿಬಸವೇಂದ್ರರಿಗೆ ಮಠ ಕಟ್ಟಿಕೊಟ್ಟಿದ್ದಲ್ಲದೆ, ಈರ್ವ ಜಗದ್ಗುರುಗಳೂ ರಾಜಗುರುಗಳೆನಿಸಿ ಪೀಠಕ್ಕೆ ಹೆಸರು ತಂದದ್ದು ಇಲ್ಲಿ ವಿಶೇಷವೆನಿಸುತ್ತದೆ. ಹಾಗು ಈ ಪರಂಪರೆ ಮುಂದುವರೆದಿದೆ. ಹೀಗೆ ೧೩ನೇ ಶತಮಾನದ ಆದಿಯಿಂದ ವಿಜಯನಗರ ಕಾಲದ ಕೊನೆಯವರೆಗೂ ಅಲ್ಲಿ ಹೆಚ್ಚಿನ ರಾಜಪೋಷಣೆಯಾಗಿ ಕುಲಗುರು ಹಾಗು ರಾಜಗುರು ಪರಂಪರೆ ನಡೆದು ಬಂದ ಕಾರಣ ಈ ನೆಲೆಯಲ್ಲಿ ಶ್ರೀ ಸನ್ನಿಧಿಯುವರು ಹೆಚ್ಚು ಕಾಲ ವಾಸ್ತವ್ಯ ಇರುತ್ತಿದ್ದ ಕಾರಣ ಶ್ರೀ ನಿಡುಮಾಮಿಡಿಪೀಠವೆಂದೇ ಪ್ರಸಿದ್ಧಿಗೊಂಡು ಹೆಸರು ಚಾಲ್ತಿಗೊಂಡಿದೆ. ಇದು ಸಾಮಾನ್ಯ ಜನಜೀವನದಲ್ಲಿಯೂ ತನ್ನ ಪ್ರಭಾವ ಬೀರಿದೆ ಎನ್ನಲು ಕಂಚಿಯ ಹೆಳವರ ಶಾಸನವೊಂದು ಸಾಕ್ಷಿಯಾಗಿದೆ. ಶಾಲಿವಾಹನ ಶಕ ೧೧೨೬ ರಾಕ್ಷಸ ಸ॥ ಕಾರ್ತಿಕ ಶು॥ ೫ರ (೩೦-೧೦-೧೨೦೪) ಹೆಳವರ ವಂಶಾವಳಿ ನಮೂದಿತ ಕಂಚಿನ ಶಾಸನದಲ್ಲಿ:

"ಇವರ ಮನೆದೇವರು ವೀರಭದ್ರದೇವರು, ಇವರ ಗುರು ಚಕ್ರವರ್ತಿ
ಶ್ರೀಗಿರಿ ನಿಡುಮಾಮಿಡಿ ಕರಿಬಸವ ಸ್ವಾಮಿಗಳು"- ಎಂದಿದೆ.

ಆಂಧ್ರದಲ್ಲಿ ಪ್ರಸಿದ್ಧವಾದ ಕೊಟ್ಟೂರು ಬಸವರಾಜನ 'ಬಸವರಾಜೀಯ' ಎಂಬ ವೈದ್ಯಗ್ರಂಥದಲ್ಲಿ:

"ಇತಿ ಶ್ರೀ ನೀಲಕಂಠ ಚರಣಾರವಿಂದ ತೀರ್ಥಪ್ರಸಾದ ಪಾರವಾರ ಭೋಗ ವಿಹಾರಣ ಪಾರೀಣ ನಿಡುಮಾಮಿಡಿ ಬಗೆ ಸತ್ಸಂಪ್ರದಾಯಕಾರಾಧ್ಯ ರಾಮದೇಶಿಕ್ ಶಿಷ್ಯೋತ್ತಮ........"

– ಎಂದಿರುವುದನ್ನು ಗಮನಿಸಿದರೆ, ನಿಡುಮಾಮಿಡಿ ಎಂಬ ಹೆಸರು ಒಂದು 'ಬಗೆ'ಯಾಗಿ (ಸಂಪ್ರದಾಯ) ಪರಿವರ್ತಿತವಾಗಲು ಶತಮಾನಗಳ ಕಾಲ ಆ ಪೀಠದ ಪ್ರಭಾವ ಮತ್ತು ಮಹಿಮೆ ಬೆಳೆದು ಜನಜನಿತವಾದರ ಸಂಕೇತವಾಗಿದೆ. ಹೀಗಾಗಿ ಈ ಪೀಠಾಧಿಪತಿಗಳ ತೋರುಗದ್ದುಗೆಗಳು ಮದನಪಲ್ಲಿ ತಾಲ್ಲೂಕಿನ ತಂಬಳಪಲ್ಲಿ ಹಾಗು ಕರ್ನಾಟಕದ ತೊರಗಲ್ಲು, ತೇರದಾಳ, ನರೇಂದ್ರ, ಕೂಡಲ ಸಂಗಮ,

ಕುಷ್ಟಗಿ, ಇಂಚಗಿರಿ, ತಡವಲಗ, ಬಾವಿಹಳ್ಳಿ, ಹಿಪ್ಪಗಿರಿ, ಗುಂಜದಹಳ್ಳಿ, ಪಂಪಾಕ್ಷೇತ್ರ, ನಿಡದ ಹಳ್ಳಿ, ಮುಂತಾದ ಕಡೆ ಕಾಣಬರುತ್ತವೆ.

ಈ ಪೀಠಕ್ಕೆ ಶಿಷ್ಯರು ಸಂರಕ್ಷಣೆ, ನಿರ್ವಹಣೆ, ಆಚಾರಗಳಿಗೆಂದು ನೀಡಿದ ಆಂಧ್ರದ ಅನಂತಪುರ ಜಿಲ್ಲೆಯ ಪಹಣಿಗಳನ್ನು ಗಮನಿಸಿದರೆ, "ನಿಡಿಮಾಮಿಡಿ ಶ್ರೀ ಶೈಲ ಸಂಸ್ಥಾನವು ಗೂಳೂರು ನಿಡುಮಾಮಿಢೈಯ ಮಠಮು", 'ಗೂಳೂರು ಜಂಗಮ್ ನಿಡುಮಾಮಿಡಿ ಮಠ' ಎಂದೆಲ್ಲ ಕಾಣಬರುತ್ತದೆ. ಇಡಗೂರು ರುದ್ರಕವಿಯ ವಿರೂಪಾಕ್ಷ ಮಹಾತ್ಮೆಯಲ್ಲಿ "ಶ್ರೀಮನ್ ನಿಡುಮಾಮಿಡಿ ಕನಕಸಿಂಹಾಸನಾ ಧೀಶ್ವರುಲಗು', ಪಂಡಿರಾಧ್ಯ ಚರಿತ್ರೆಯ ಪ್ರತಿಯಲ್ಲಿ "ಕನಕ ಪುರಾಯಿ ಸಿಂಹಾಸನಂ ನಿಡುವಮಾಮಿಡಿ", ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣದಲ್ಲಿ 'ನಿಡುಮಾಮಿಡಿಯ ಕರಿಬಸವೇಶ' ಎಂಬ ಪ್ರಯೋಗಗಳಿವೆ. ೨೮.೧.೧೯೫೬ರ ಮೈಸೂರಿನ ಮುಜರಾಯಿ ಕಮೀಶನರ್‌ರ ಆದೇಶದಲ್ಲಿ ಈ ಪೀಠವನ್ನು "ಶ್ರೀ ಜಗದ್ಗುರು ಶ್ರೀ ನಿಡುಮಾಮಿಡಿ ಶ್ರೀ ಶೈಲ ಸಂಸ್ಥಾನಂ' ಎಂದೂ ಕರೆದಿದೆ.

ಈ ಹಿನ್ನಲೆಗಳನ್ನು ಗಮನಿಸಿದಾಗ ೧೧ನೇ ಶತಮಾನದಲ್ಲಿ ಹೈಹಯವಂಶದ ರಾಜರಿಗೆ ಕುಲಗುರು, ರಾಜಗುರುವಾದಂತೆ, ೧೨ನೇ ಶತಮಾನದಲ್ಲಿ ನಿಡುಗಲ್ಲು ಚೋಳರಿಗೆ ರಾಜಗುರು ಹಾಗು ಕುಲಗುರುಗಳಾಗಿ ಇದ್ದ ಬಗೆಗೆ ಹಾಗು ೧೨೪೨ರ ಹೊಯ್ಸಳರ ಕಾಲದ ಗುಮ್ಮನಾಯ್ಕನ ಪಾಳೇಪಟ್ಟಿನ ನಾಯಕರಿಗೆ ಕುಲಗುರು ರಾಜಗುರುವಾಗಿ ಇದ್ದುದು ಗಮನಕ್ಕೆ ಬರುತ್ತದೆ.

೧೨ನೇ ಶತಮಾನದಲ್ಲಿ ಅಲ್ಲಮಪ್ರಭುವಿನೊಡನೆ ಇದ್ದು (ಗುಪ್ತಯೋಗ ಸಮಾಗಮದಲ್ಲಿ ಇದ್ದು) ವೀರಶೈವ ಧರ್ಮ ಪ್ರಸಾರ ಕಾರ್ಯಮಾಡಿದವರು ಈ ಜ॥ ಕರಿಬಸವ ದೇಶಿಕೇಂದ್ರರೆ ಅಂದರೆ ವೀರಶೈವ ಪ್ರಸಾರ ಕಾರ್ಯದಲ್ಲಿ ಗುರುಸ್ಥಲ, ಶೂನ್ಯಸ್ಥಲ ಸಂಪ್ರದಾಯಗಳಲ್ಲಿ (ಗುರು, ವಿರಕ್ತ) ಯಾವ ಭೇದವೂ ಇರಲಿಲ್ಲ ಎಂದಾಗುತ್ತದೆ. ಬಹುಶಃ ಇಂತಹ ಸಮನ್ವಯದ ಸಂಕೇತವಾಗಿಯೆ ತಮಿಳುನಾಡಿನಲ್ಲಿ "ವೀರಸಿಂಹಾಸನ- ಮುರುಘ ಬ್ರಹ್ಮತರ್ಕ" ಎಂಬ ಸಂಯುಕ್ತ ಸಂಪ್ರದಾಯವು ಚಾಲ್ತಿಯಲ್ಲಿ ಇದ್ದುದು ಕಾಣಬರುತ್ತದೆ.

ಈ ಪೀಠದ ಗುರುಗಳು ಕ್ರಿ.ಶ. ಸುಮಾರು ೧೩ನೇ ಶತಮಾನದಲ್ಲಿ ರೆಡ್ಡಿ ವಂಶೀಯರಿಗೆ ಅಂದರೆ ಪೋಕನಾಟಿ ರೆಡ್ಲು, ಮರಸಗೌಡ, ಬೆರಳ ಕೊಡುವ ಒಕ್ಕಲಿಗ, ಚಟಿಮಿಟಿ ರೆಡ್ಲು, ಪಂಟಿರೆಡ್ಲು, ಮುಂತಾದ ವರ್ಗದವರಿಗೆ ದೀಕ್ಷೆ ನೀಡಿ ಪೀಠದ ಶಿಷ್ಯರನ್ನಾಗಿಸಿದರು. (ಶ್ರಿ ಶೈಲ ಪೀಠದರ್ಶನ, ಅದೆ, ಪುಟ ೧೮೨)

ಪೀಠದ ಒಂದು ದಾಖಲೆಯ ರೀತ್ಯ ಕೂಡಲ ಸಂಗಮದ ಬಳಿಯ ಪೀಠದ ಶಿಷ್ಯ ಮಡಿವಾಳಪ್ಪನವರ ವಂಶಪತ್ರದಲ್ಲಿ "ಶಕೆ ೧೩೨೧ ಪ್ರಮಾಥಿ ಸಂ॥ ಪುಷ್ಯ

ಬ.೭ ಮಂದವಾರ (ತಾ. ೨೮-೧೨-೧೪೯೯ ಶನಿವಾರ) ದಿಗಂಬರ ವಿರೂಪಾಕ್ಷ ದೇಶಿಕರ್ತನ ಶ್ರೀಮದ್ವೀರಶೈವ ಸಿದ್ಧಾಂತ ಮತಸ್ಥಾಪನಾ.. ಪರಮಪಾವನ ಸುಕ್ಷೇತ್ರ ಚಂದ್ರಗುಪ್ತ ಸಿಂಹಾಸನಾಧೀಶ್ವರ ಶ್ರೀ ನಿಡುಮಾಮಿಡಿ ಮಣಿಖಚಿತ ಕನಕ ಸಿಂಹಾಸನಾರೂಢ ಮಹಾರಾಜ ಶ್ರೀ ಪಟ್ಟದ ಯಿಮ್ಮಡಿ ಕರಿಬಸವರಾಜ ಸ್ವಾಮಿಗಳವರ ಪಾದ ಸರೋಜಂಗಳಿಗೆ..." ಎಂಬ ಉಲ್ಲೇಖವು ವಿಜಯನಗರ ಕಾಲದಲ್ಲಿ ಇದ್ದ ಅವರ ಪ್ರಭಾವದ ಸೂಚನೆಯಾಗಿ ಕಾಣುತ್ತದೆ ಹಾಗು ಸ್ಥಿರಪಟ್ಟಾಧ್ಯಕ್ಷರಾಗಿ ಶ್ರೀ ಇಮ್ಮಡಿ ಕರಿಬಸವರಾಜಸ್ವಾಮಿಗಳು ಗೂಳೂರು ಸಂಸ್ಥಾನದಲ್ಲಿದ್ದು ಚರಪಟ್ಟಾಧ್ಯಕ್ಷರಾಗಿ ನಿಡುಮಾಮಿಡಿಯಲ್ಲಿ ಕ್ರಿಯಾಶಕ್ತಿ ದೇವರಾಯ ಒಡೆಯನು ರಾಜಗುರುವಾಗಿ ರಾಜಕೀಯ ಮಹತ್ವದ ಕಾರಣವಾಗಿ ಇದ್ದನೆನ್ನಬೇಕು.

ಇದಕ್ಕೆ ಪೂರಕವಾಗಿ ವಿಜಯನಗರ ರಾಜಗುರುಗಳಿಗೆ ಸಂಬಂಧಿಸಿದ ಶಾಸನಗಳು ನಿಡುಮಾಮಿಡಿಯಲ್ಲಿ ಇವೆ. ಹಕ್ಕಬುಕ್ಕರ ವಿಜಯನಗರ ಸಂಸ್ಥಾಪನೆಯ ಕಾರ್ಯದಲ್ಲಿ ನೆರವಾದ ಕುಲಗುರು ರಾಜಗುರು ಕ್ರಿಯಾಶಕ್ತಿದೇವನ ಸಂಬಂಧದ ಶಾಸನವು (ಕ್ರಿ. ಶ. ೧೪೦೩) ಉಕ್ಕುದೆ, ಆದರೆ ಒಕ್ಕಣೆ ಹೀಗಿದೆ. ಶ್ರೀ ಗುರುಭ್ಯೋನಮಃ ಸ್ವ(ಸ್ತಿ)ಭಾನು ಸಂ॥ ಮಾಘ ಬ॥ ೩೦ ಬು. ಶ್ರೀ ಮುದ್ರಾಯ ರಾಜಗುರು ಮಹಾಮಂಡಲಾಚಾರ್ಯ ಕ್ರಿಯಾಶಕ್ತಿ ದೇವರಾಯ ಒಡೆಯರು ಎಂದಿದೆ. ವಿಜಯನಗರ ಅರಸರ ಕುಲಗುರು ಮತ್ತು ರಾಜಗುರುವಾದ ಕಾಶೀವಿಲಾಸ ಕ್ರಿಯಾಶಕ್ತಿಯು ಶ್ರೀ ನಿಡುಮಾಮಿಡಿಪೀಠದಲ್ಲಿ ಗುರುವಾಗಿದ್ದುದರ ಸಾಕ್ಷಿ ಇದಾಗಿದೆ. ಈ ಕ್ರಿಯಾಶಕ್ತಿಗಳು ಮೊದಮೊದಲು ಕಾಳಾಮುಖ ಶೈವರ ಪಂಗಡದವರೆನಿಸಿದ್ದರೂ ಈ ಪೀಠದ ಆಚಾರ್ಯರ ಪ್ರಭಾವದಿಂದ "ನಿಜೇಷ್ಟಲಿಂಗ ದೃತಾಧಿಷ್ಠಾನ"ರಾಗಿ ವೀರಶೈವ ದೀಕ್ಷೆ ಪಡೆದು ನಿಡುಮಾಮಿಡಿ ಪೀಠದ ಆಚಾರ್ಯರ ಪಂಕ್ತಿಯಲ್ಲಿ ಅಲಂಕೃತರಾಗಿದ್ದರು ಎಂಬುದು ಸಂಗಮರಸರು ಹಾಗು ಕಾಶಿವಿಲಾಸ ಕ್ರಿಯಾಶಕ್ತಿಯ ಆರಂಭದ ಬದುಕಿನ ಇತಿವೃತ್ತದ ಮೇಲೆ ಇದ್ದ ಈ ಪೀಠದ ಪ್ರಭಾವದ ಸೂಚನೆಗಳು ಕಾಣಬರುತ್ತವೆ. ಈ ಕಾಶೀವಿಲಾಸ ಕ್ರಿಯಾಶಕ್ತಿಯು ಧರ್ಮಾವರಂನಲ್ಲಿ ತಾಯಿಯ ಹೆಸರಿನಲ್ಲಿ ಕೆರೆ ಕಟ್ಟಿಸಿದ. ಆನೆಗೊಂದಿಯಲ್ಲಿ ಕಂಪಿಲರಾಯನ ಪತನವಾದಾಗ ಚೆನ್ನಕೇಶವ ವಿಗ್ರಹವನ್ನು ರಕ್ಷಿಸಿ ಧರ್ಮಾವರಂನಲ್ಲಿ ಸ್ಥಾಪಿಸಿದರು. ಇವರು ಇಮ್ಮಡಿ ಹರಿಹರನ ಕಾಲದಲ್ಲಿಯೂ ರಾಯ ರಾಜಗುರು ಪಿತಾಮಹ ಎಂದು ಸಂಬೋಧಗೊಂಡಿರುವವಲ್ಲಿ ಇವರು ದೀರ್ಘಕಾಲ ಬದುಕಿದ್ದ ಬಹು ಗೌರವಾನ್ವಿತ ವಯೋವೃದ್ಧ ರಾಜಗುರು ಕುಲಗುರು ಎನಿಸುತ್ತದೆ.

ಒಂದನೇ ಬುಕ್ಕನ ಸೊಸೆಯೂ ಕಂಪಣನ ಅರಸಿಯೂ ಆದ ಗಂಗಾದೇವಿಯು 'ಮಧುರಾವಿಜಯ' ಎಂಬ ತನ್ನ ಸಂಸ್ಕೃತ ಕೃತಿಯಲ್ಲಿ ಕ್ರಿಯಾಶಕ್ತಿಯನ್ನು ಕುರಿತು ಹೀಗೆ ಹೊಗಳಿದ್ದಾಳೆ.

ಅಸಾಧಾರಣ ಸಾರ್ವಜ್ಞಂ ಏಲಸಿತ್ ಸರ್ವಮಂಗಲಂ I
ಕ್ರಿಯಾಶಕ್ತಿ ಗುರುಂ ವಂದೇ ತ್ರಿಲೋಚನ ಮಿವಾಪರಂ II

೧೪ನೇ ಶತಮಾನದ ಅಬ್ಬಾವರಂ ಕನ್ನಡ ಶಾಸನವು ಕ್ರಿಯಾಶಕ್ತಿಯನ್ನು ಕುರಿತು ಹೀಗೆ ನುಡಿದಿದೆ:

ಶ್ರೀಮುದ್ರಾಯ ರಾಜಗುರು ಮಹಾ ಮಣ್ಡಲಾಚಾರ್ಯ್ಯ
ಸಮಯ ಚಕ್ರವರ್ತಿ ಬಲ್ಲಾಡರಾಯಮ [....] ಶೂಲ ಯಾದವರಾಯ
ಸ್ತ(ಪನ)ಚಾರ್ಯ.... ಶ್ರೀ ಸ್ವಯಂಬು ತ್ರಿಯಂಬಕ ದೇವರ ದಿವ್ಯ ಶ್ರೀಪಾದ
ಪದ್ಮಾರಾಧಕರು ಮಪ್ಪ. ಶ್ರೀಕ್ರಿಯ [ಶಕ್ತಿ] ದೇವರಾಯುವುಡೆಯ ಶಿವದೇವರುಗಳು
ಕಾರುಣ್ಯ [ಶಿವಷ್ಯ]

– ಎಂದು ಹೇಳಿ ಕ್ರಿಯಾಶಕ್ತಿಯ ಇತಿವೃತ್ತವನ್ನು ಧ್ವನಿ ಸಂಕ್ಷಿಪ್ತವಾಗಿ ಹೇಳಿದಂತಿದೆ. ಅಲ್ಲದೆ ಪೀಠದ ಪ್ರಭಾವವು ವಿಜಯನಗರ ಅರಸರ ಮೇಲೆ ಆಗಿದ್ದ ಸೂಚನೆಯನ್ನು ನೀಡುತ್ತದೆ. ಈ ಪೀಠದ ಗುರುಗಳು ರಾಯ ರಾಜಗುರು ಮಹಾಮಂಡಲಾಚಾರ್ಯ ಎನಿಸಿ ಮಾನಿತರಾಗಿದ್ದರು ಎಂದು ತಿಳಿಯುತ್ತದೆ.

ಕ್ರಿ.ಶ. ೧೩೭೮ರ ಚನ್ನರಾಯಪಟ್ಟಣದ ಶಾಸನವು (ಸ. ೧೩೧, ಹುಲಿಕೆರೆ):

'........ವಿರೂಪಾಕ್ಷಃ ಸಾಕ್ಷಾತ್ ಕುಲ ಪರಮದೈವಂ ಕುಲಗುರುಃ ಕ್ರಿಯಾಶಕ್ತ್ಯಾಚಾರ್ಯ ಕಲಿಕಲಭ ಕಂಠೀರಬಯಶಾಃ.........'

– ಇಲ್ಲಿ ವಿಜಯನಗರದರಸರ ಕುಲಗುರುವೆ ಕ್ರಿಯಾಶಕ್ತಿ ಆಚಾರ್ಯ ಎನ್ನಲಾಗಿದೆ.

ಕ್ರಿ.ಶ. ೧೪೧೦ ದಾವಣಗೆರೆ ಶಾಸನವು ಕ್ರಿಯಾಶಕ್ತಿಯನ್ನು ಕುರಿತು:

' .... ಶ್ರೀ ಸ್ವಯಂಬು ತ್ರಿಯಂಬಕ ಚರಣಾರವಿಂದಾರಾಧಕ ಶ್ರೀಮದ್ರಾಯ ರಾಜಗುರು ಮಂಡಲಾಚಾರ್ಯ ಆಚಾರ್ಯವರ್ಯ್ಯ ತಪೋರಾಜ್ಯಲಕ್ಷ್ಮೀ ನಿಜನಿವಾಸಕಾಯ ಶ್ರೀಕ್ರಿಯಾಶಕ್ತಿಗುರುವರ ಚರಣ ಪರಿಚರಣ ಪ್ರಸಾದಾಸಾದಿತ ಮಹಿತ..... ಶ್ರೀ ವೀರಪ್ರತಾಪ ದೇವರಾಜ ಮಹಾರಾಜ'

– ಎಂದಿರುವಲ್ಲಿ, ವಿಜಯನಗರ ಸಾಮ್ರಾಜ್ಯವು ಕ್ರಿಯಾಶಕ್ತಿಗುರುಚರಣ ಪ್ರಸಾದದಿಂದ ಸಾಧಿತವಾದದ್ದು ಎಂದು ಗುರುಮಣಿಹದ ಸ್ಮರಣೆ ಇದೆ. ಇಂಥ ಗುರು, ಶ್ರೀ ನಿಡುಮಾಮಿಡಿ ಪೀಠದ ಜಗದ್ಗುರುವಾಗಿದ್ದ ಎಂಬುದೇ ಒಂದು ಹೆಗ್ಗಳಿಕೆಯಾಗುತ್ತದೆ. ವಿಜಯನಗರ ಕಾಲದಲ್ಲಿ ಅದರ ಎರಡನೇ ರಾಜಧಾನಿ ಪೆನುಗೊಂಡೆಗೆ ನಿಡುಮಾಮಿಡಿ ತೀರ ಸನಿಹವಿದ್ದ ಕಾರಣ, ರಾಜಗುರುವಾಗಿ

ವ್ಯವಹಾರಕ್ಕೆ ಹಾಗು ವಾಸ್ತವ್ಯಕ್ಕೆ 'ನಿಡುಮಾಮಿಡಿ'ಯನ್ನೆ ಕ್ರಿಯಾಶಕ್ತಿ ಆರಿಸಿಕೊಂಡಿದ್ದಂತೆ ಕಾಣುತ್ತದೆ. ಅದರಿಂದಾಗಿ ಅವನ ಕುರಿತ ಶಾಸನ ನಿಡುಮಾಮಿಡಿ ಶಾಖಾ ಮಠದಲ್ಲಿ ಕಾಣಬರುತ್ತದೆ. ಆದರೆ ಶ್ರೀ ನಿಡುಮಾಮಿಡಿ ಪೀಠದ ಆಚಾರ್ಯನಾಗಿ ಬಂದ ಕಾರಣ ಅವನು ಲಿಂಗೈಕ್ಯನಾದ ಮೇಲೆ ಪೀಠದ ಸ್ಥಿರ ನೆಲೆ ಗೂಳೂರಿನಲ್ಲಿ ಗದ್ದುಗೆಗೊಂಡಿರುವುದು ಸಾಧ್ಯ.

ಗೂಳೂರಿನ ಶ್ರೀ ನಿಡುಮಾಮಿಡಿ ಮಹಾಸಂಸ್ಥಾನ ಪೀಠದ ಆವರಣದಲ್ಲಿ ವಿಜಯನಗರ ಕಾಲದ ವಾಸ್ತುವಿನ ತ್ರಿಗರ್ಭಗೃಹದ ಜಗತಿ ಕಟ್ಟಡವಿದೆ. ಆದರೆ ಸ್ತಂಭಗಳಲ್ಲಿ ವಿಜಯನಗರದ ಮೊದಲ ರಾಜರಾದ ಸಂಗಮರ ರಾಜಲಾಂಛನದಲ್ಲಿದ್ದ 'ಕಠಾರಿ ಚಿಹ್ನೆ' ಮಾತ್ರ ಇದೆ; ಅಸೀನ ಸಿಂಹದಮೊಗದಾಕೃತಿಯೂ ಶಿಲ್ಪಗೊಂಡಿದೆ. ಮೊದಲಿಗೆ 'ಸರ್ವಾಂಗಲಿಂಗಶಿಲ್ಪವೂ' ಈ ಕಟ್ಟಡದ ಮಧ್ಯಗದ್ದುಗೆಯ ಮೇಲಿದ್ದುದು ಈಗ ಡಾ॥ ಜ.ಚ.ನಿ. ಅವರ ಗದ್ದುಗೆಯ ಮೇಲಿದೆ. ಸರ್ವಾಂಗಲಿಂಗವು ತಾತ್ತ್ವಿಕ ಅನುಸಂಧಾನವಾಗಿ ಕ್ರಿಯಾಶಕ್ತಿ ಗುರುವಿಗು ಸಂಬಂಧಗೊಂಡಿತ್ತೆಂದಿರುವಲ್ಲಿ ಅವನ ಗದ್ದುಗೆಯೂ ಈ ಕಟ್ಟಡದಲ್ಲಿ ಆಗಿರಬೇಕು ಎನಿಸುತ್ತದೆ.

ಈ ಕ್ರಿಯಾಶಕ್ತಿದೇವರ ಕರಕಮಲ ಸಂಜಾತರಾಗಿ, ಕ್ರಿಯಾಶಕ್ತಿ ದೇವರ ಕಾಲದಲ್ಲಿ ಪೀಠದ ಕಿರಿಯ ಗುರುವಾಗಿ ಸಂಚಾರಮೂರ್ತಿಯಾಗಿ ಚರಪಟ್ಟಾಧಿಕಾರಿಯಾಗಿ ಚಂದ್ರಭೂಷಣದೇವ ಒಡೆಯರಿದ್ದಿರಬೇಕು. ಕ್ರಿಯಾಶಕ್ತಿಯ ನಂತರದಲ್ಲಿ ಶ್ರೀ ನಿಡುಮಾಮಿಡಿ ಪೀಠದ ಜಗದ್ಗುರುವಾಗಿ ಹೊಣೆ ಹೊತ್ತು, ವಿಜಯನಗರದರಸರ ರಾಜಗುರುವಾದರು.

ಇವರೇ ಕ್ರಿ.ಶ. ೧೪೩೮ರ ಸಮಯದಲ್ಲಿ ಶ್ರೀಚಂದ್ರಭೂಷಣದೇವ ಒಡೆಯರು ಎಂಬ ಪೀಠದ ಜಗದ್ಗುರುಗಳಾಗಿ ರಾಯರಾಜಗುರು ಮಹಾಮಂಡಲಾಚಾರ್ಯ ರಾಗಿದ್ದ ಬಗೆಗೆ ನಿಡುಮಾಮಿಡಿಯ ಶಾಸನವು ದಾಖಲಿಸಿದೆ:

೧. ಶುಭಮಸ್ತು ಕಾಳಯುಕ್ತಿ ಸಂವತ್ಸರದ ಶ್ರಾವಣ
೨. ಸು.೧೦. ಶ್ರೀಮದ್ರಾಯ ರಾಜಗುರು ಮಹಾಮಂಡ
೩. ಲಾ ಚಾರ್ಯ ಶ್ರೀ ಚಂದ್ರಭೂಷಣದೇವ ವೊಡೆ
೪. ಯರ ನಿಡುಮಾವಿ(ಮಿ)ಡಿನ ಸುದೇವ ಸ್ಥಾಪನದಲ್ಲಿ ಅಂಣಮ
೫. ರಸರ ಮಗ ಬಾಬರಸನು ಪ್ರತಿಷ್ಠೆ ಮಾಡಿದ ಬ
೬. ಸವ ರಾಜದೇವರು ಮಂಗಳ ಮಹಾ ಶ್ರೀ ಶ್ರೀ
೭. ಶ್ರೀ

ಶಾಸನದಲ್ಲಿನ ಶ್ರೀ ಮದ್ರಾಯ ರಾಜಗುರು ಮಹಾಮಂಡಲಾಚಾರ್ಯ ಎನ್ನುವ ವಿಶೇಷಣದಿಂದ ಚಂದ್ರಭೂಷಣದೇವ ಒಡೆಯರು ವಿಜಯನಗರದರಸರ

ರಾಜಗುರುವಾಗಿದ್ದರು, ಸಾಮ್ರಾಜ್ಯದ ಮಹತ್ವ ಧಾರ್ಮಿಕ ಅಧಿಕಾರದ ಆಚಾರ್ಯರಾಗಿದ್ದರು ಎಂಬುದರ ಸೂಚನೆ ಆಗುತ್ತದೆ. ಶಾಸನದಲ್ಲಿ ಅಣ್ಣಮರಸರ ಮಗ ಬಾಚರಸ ಎಂದಿರುವುದು ಬಹುಶಃ ವಿಜಯನಗರದ ಅರಸರ ಅಮರನಾಯಕರಾಗಿ ಇವರುಗಳು ನಿಡುಮಾಮಿಡಿ ಪಾಳೇಪಟ್ಟನ್ನು ಆಳುತ್ತಿದ್ದರೆಂದು ತೋರುತ್ತದೆ. ಇವರುಗಳು ಬಸವಮೂರ್ತಿಯನ್ನು ಪ್ರತಿಷ್ಠಿಸಿರುವುದನ್ನು ಗಮನಿಸಿದರೆ ಶಿಥಿಲವಾಗಿದ್ದ ಬಸವನ ಬದಲು ಅಲ್ಲಿದ್ದ ವೀರಭದ್ರನ ಗುಡಿಯ ಮುಂದೆ ಹೊಸ ಬಸವನ ಪ್ರತಿಷ್ಠೆಮಾಡಿ ಶಾಸನ ಹಾಕಿಸಿದ ಸಂಗತಿ ಕಾಣುತ್ತದೆ.

ಪೀಠದ ಗುರುಗಳ ಪಟ್ಟವಲ್ಲರಿಯಲ್ಲಿ 'ಶ್ರೀ ಕರಿಬಸವ' ಎಂಬ ಮೂಲ ರೂಪದ ಪರ್ಯಾಯ ವಿಶೇಷಣಗಳ ಹೆಸರುಗಳು ೧೨ನೇ ಶತಮಾನದಿಂದ ಸದ್ಯಕ್ಕೆ ೧೪ ಹೆಸರುಗಳು ಕಂಡುಬರುತ್ತವೆ. ಹೀಗಾಗಿ ಕೆಲವು ಗುರುಮಣಿಹಗಳು ನಿರ್ದಿಷ್ಟವಾಗಿ ಇಂಥ ಗುರುವಿನದೇ ಎಂದು ಹೇಳಲಾಗದಿದ್ದರೂ, ಪ್ರಸ್ತುತ ಪೀಠದ ಗುರುಗಳಿಂದ ನಡೆದವೆಂಬುದು ಮುಖ್ಯವೆಂದು ಒಂದೆರಡು ಉದಾಹರಣೆಗಳನ್ನು ಮುಂದೆ ಮಂಡಿಸಲಾಗಿದೆ.

ವಿಜಯನಗರ ಕಾಲದಲ್ಲಿ ಅರಸರ ಪ್ರಾರ್ಥನೆಯಂತೆ ವಿಜಯನಗರದತ್ತ ಇಮ್ಮಡಿ ಕರಿಬಸವೇಂದ್ರರು ಸಂಚಾರ ಹೊರಟರು. ಹಾದಿಯಲ್ಲಿ ಮಹಾರಣ್ಯ ಸಿಕ್ಕಿತು. ರಾಜ ಮತ್ತು ಅವನ ಪರಿವಾರವೂ ಗುರುಗಳ ಜೊತೆಗಿತ್ತು. ಕಾಡಿನಲ್ಲಿ ಅಲೆಯುತ್ತಲೇ ಬಂದ ಪರಿವಾರ ಹಸಿವಿನಿಂದ ಬಳಲಿತು. ಗುರುಗಳ ಗಮನಕ್ಕೆ ಅದು ಬಂದಿತು. ಪಲ್ಲಕ್ಕಿಯಿಂದಿಳಿದರು. 'ಮುಷ್ಟಿ' ಎಂಬ ಕಹಿರಸದ ಹಣ್ಣುಗಳ ಗಿಡಗಳು ಆ ಕಾಡಿನಲ್ಲಿ ವಿಪುಲವಾಗಿದ್ದುವು. ಗುರುಗಳು 'ಮುಷ್ಟಿ' ಹಣ್ಣುಗಳ ಕಹಿಭಾಗ ತೆಗೆದು ಸಿಹಿಭಾಗವನ್ನು ತೋರಿ ಭುಂಜಿಸಲು ಹೇಳಿದರು. ಮರಕ್ಕೆ ಗುರು ಸ್ಪರ್ಶವಾಯಿತಲ್ಲ ಅದರಿಂದ ಸಿಹಿರಸ ಹಣ್ಣಿಗೆ ಒದಗಿತು ಎಂಬ ಭಾವ ರಾಜ ಹಾಗು ಅವನ ಸೈನ್ಯ ಪರಿವಾರಕ್ಕೆ ಬಂದು ವಿಶೇಷವೆನಿಸಿತು. ಕಾರಣ ಅವರಿಗೆ ಹಣ್ಣಿನ ಕಹಿಭಾಗ ತಿಳಿಯದೆ ತಿಂದು ಕಹಿರಸದ ಹಣ್ಣು ಎಂದುಕೊಂಡಿದ್ದರು (ಸೌತೇಕಾಯಿಯಲ್ಲಿ ಕಹಿಭಾಗ ತೆಗೆದು ಸೇವಿಸಿದರೆ ಅದು ಸ್ವಾದಿಷ್ಟವಾಗುವುದಿಲ್ಲವೇ ಹಾಗೆಯೇ ಇದು). ಅಂತಾಗಿ ಕಹಿಫಲ ಗುರುಮಹಿಮೆಯಿಂದಾಗಿ ಸಿಹಿಫಲವಾಯಿತು ಎಂದು ರಾಜನಿಗೆ ಅನಿಸಿ ರಾಜನು ನಗರಕ್ಕೆ ಗುರುಗಳನ್ನು ಕರೆತಂದು ಪೂಜಿಸಿದ ಎಂಬ ಭಾವ ಪುಲ್ಲಕವಿಯಲ್ಲಿ ಬಂದಿರುವುದು ಹೀಗಿದೆ:

ಮಾಮಿಡಿ ತುಂಡ್ಲ ಕನ್ನನತಿ ಮಾಧುರಿಚೇ ರಸನ್ಯೈಕ ಸುರಭ
ಶ್ರೀಮಹಿತಂಬುಲೈದನರಿ ಜಿಹ್ವಲಕುನ್ ರುಚಿಬುಟ್ಟ ಜೇಯುಚುನ್
ವೇಮರುನಾಶಗೊಲ್ಪುಚುನು ವಿಸ್ಮಯಮೊಂದುಚುನಂತ ಸೇನಲುನ್
ಭೂಮಿವರುಂಡು ಭೃತ್ಯುಲುನು ಪೋಲ್ಪುತಗನ್ ಭುಂಜಿಯಿಂಚಿರಂದರುನ್
(ಪುಲ್ಲಕವಿ ಪಂಚ.ತೃತೀಯಶ್ವಾಸ ಪ.೨೯)

ಶ್ರೀ ಜ॥ ಇಮ್ಮಡಿ ಕರಿಬಸವೇಂದ್ರರು ಮಹಾನಂದಿ ಕ್ಷೇತ್ರಕ್ಕೆ ಆಗಮಿಸಿದರು. ಅಲ್ಲಿದ್ದ ವೈಶ್ಯರು (ನಗರ್ತರು) ಹಿಂದೆ ಮಹಾತ್ಮನೊಬ್ಬನಿಂದ ಶಾಪಕ್ಕೀಡಾಗಿದ್ದರಂತೆ. ಆದರೆ ಒಣಗಿದ ಮರವನ್ನೂ ಚಿಗುರಿಸುವ ಗುರು ಬಂದಾಗ ನಿಮ್ಮ ಶಾಪ ವಿಮೋಚನೆ ಎಂದೂ ಹೇಳಲಾಗಿತ್ತಂತೆ. ಹೀಗಾಗಿ ಕರಿಬಸವೇಂದ್ರರು ಬಂದು ನಂದೀಶ್ವರ ದೇಗುಲದ ಬಳಿಯ ಒಣಗಿದ ಬಿಲ್ವವೃಕ್ಷಗಳನ್ನು ಕಂಡು, ದಿವ್ಯದೃಷ್ಟಿ ಬೀರಿ ಚಿಗುರಿಸಿದರೆಂದೂ, ಅದನ್ನು ಕಂಡ ವೈಶ್ಯರೆಲ್ಲ ಶಿವದೀಕ್ಷಿತರಾಗಿ ಶಾಪ ಕಳೆದುಕೊಂಡರೆಂದು ಪುಲ್ಲಕವಿ ಸಾಹಿತ್ಯಕ ಭಾವದಲ್ಲಿ ಮಂಡಿಸಿದ್ದಾನೆ.

ಯತಿವರುಂಡು ಚಿಂತನವಲೋಕನಮು ಸೇಯ
ಬಿಲ್ವದಾರಪುದು ಚೆಲ್ವಮಲರ
ಯತನಿ ಮಹಿಮಮಲನ ನದಿ ಪಲ್ಲವಿಂಚಗಾ
ಜೂಚಿ ವೈಶ್ಯಲೆಲ್ಲ ಚೋದ್ಯಮೊಂದಿ॥

(ಪುಲ್ಲಕವಿ: ಅದೇ, ತೃತಿಯಾಶ್ವಾಸ ಪದ್ಯ ೪೨)

ಇಲ್ಲಿ ಸೂಚಿತ ಅಂಶವೆಂದರೆ ನಂದೀಶ್ವರ ಗುಡಿಯ ಬಳಿ ಪೋಷಣೆ ಇಲ್ಲದೆ ಬಿಲ್ವ ವೃಕ್ಷಗಳು ಒಣಗಿದ್ದವು. ಬೆಟ್ಟದಲ್ಲಿ ನೀರಿನ ನೆಲೆಗೆ ಬರವೆ ! ಆದರೆ ಅಲ್ಲಿದ್ದ ವೈಶ್ಯಕುಲ ಅದನ್ನು ನಿರ್ಲಕ್ಷಿಸಿ ಒಣ ಬಿಲ್ವವನವಾಗಿಸಿದ್ದರು. ಜ॥ ಕರಿಬಸವೇಂದ್ರರು ವೈಶ್ಯ–ನಗರ್ತರನ್ನೆಲ್ಲ ಸಂಘಟಿಸಿ ಬಿಲ್ವವನವನ್ನು ನೇರ್ಪುಗೊಳಿಸಿ ಹಸಿರುಪತ್ರಗಳಿಂದ ಕಂಗೊಳಿಸುವಂತೆ ಮಾಡಿದರು. ವೈಶ್ಯ–ನಗರ್ತಕುಲದವರನ್ನೆಲ್ಲ ಲಿಂಗದೀಕ್ಷಿತರನ್ನಾಗಿಸಿ, ಪೀಠದ ಶಿಷ್ಯರನ್ನಾಗಿಸಿದರು ಎಂಬುದು ಸೂಚ್ಯಾರ್ಥದಲ್ಲಿದೆ. ಇದಕ್ಕೆ ಪೂರಕವಾಗಿ ನಂದಿಬೆಟ್ಟ ಹಾಗು ನೆರೆಯ ಕಳವಾರಬೆಟ್ಟದ ಬಳಿಯ ಕಂದವಾರಗ್ರಾಮದ ವೀರಭದ್ರನ ಒಕ್ಕಲುಗಳಾಗಿರುವ ನಗರ್ತ ಶಿವಾಚಾರದವರು ಪೀಠದ ಶಿಷ್ಯರಾಗಿರುವುದೂ ಕಾಣಬರುತ್ತದೆ. ಚಿಕ್ಕಬಳ್ಳಾಪುರದ ವಾಪಸಂದ್ರ ಮಠವು, ಪೀಠದ ಶಾಖಾಮಠ ವಾಗಿರುವುದೂ ಈ ದೃಷ್ಟಿಯಿಂದ ಗಮನಾರ್ಹ.

ಕಂದವಾರದಲ್ಲಿ ಹೊಯ್ಸಳ ಕಾಲದ ವೀರಭದ್ರ ಶಿಲ್ಪವಿದ್ದುದು ಭಿನ್ನವಾಗಿ, ವಿಜಯನಗರ ಕಾಲದ ವೀರಭದ್ರ ಶಿಲ್ಪವು ಪುನರ್ ಪ್ರತಿಷ್ಠೆಯಾಗಿ ನಗರ್ತ ವೀರಶೈವರು ಅದರ ಮೇಲ್ವಿಚಾರಕ – ವ್ಯವಸ್ಥಾಪಕರಾಗಿರುವುದು, ಮಂಚನಬೆಲೆ ರುದ್ರದೇವರ (ವೀರಭದ್ರ)ಗುಡಿಯ ನಿರ್ವಹಣೆ ಸಜ್ಜನ ವೀರಶೈವರ ಪೈಕಿಯ ಗೂಳಿವಂಶದವರು ನೋಡಿಕೊಳ್ಳುತ್ತಿರುವುದು ಹಾಗು ಗುಡಿಯ ಮುಂದೆ ಶಿಲಾಗಾಣವಿದ್ದು, ಆ ವೀರಭದ್ರ ಒಕ್ಕಲಿನ ಹಳೆಯ ಚರಿತ್ರೆ ಹಾಗು ಶ್ರೀ ನಿಡುಮಾಮಿಡಿ ಪೀಠದ ಸಂಬಂಧವನ್ನು ತಿಳಿಸುವಂತಿದೆ. ದೇಗುಲದ ಸ್ತಂಭದಲ್ಲಿ ತೆಂಗಿನ ಫಲ ಬೇಡಿದ ನಾರಿಕೇಳಪವಾಡದ ಚಂದ್ರಗುಂಡರ ಶಿಲ್ಪವೂ ಇರುವುದು ಗಮನಾರ್ಹ. ಹೊರಭಿತ್ತಿಯಲ್ಲಿ ೩೬ ತ್ರಿಭುಜಾಕೃತಿಯ ದೀಪಗಳ ಗೂಡುಗಳಿರುವುದೂ ಗಮನಾರ್ಹ.

ಮಹಾನಂದಿಯಿಂದ ಹೊರಟು ಬರುವಾಗ ಹಾದಿಯಲ್ಲಿ ಕುರುಳಿ ಗ್ರಾಮಕ್ಕೆ ಜ॥ ಇಮ್ಮಡಿ ಕರಿಬಸವೇಂದ್ರರು ಹೋಗಿ 'ಪಾಕನಾಟಿ' ಎಂಬ ಚತುರ್ಥವರ್ಣದ, ಜನಾಂಗದವರನ್ನು ಉದ್ಧರಿಸಿ ಮೂಕನೊಬ್ಬನಿಗೆ ಅನುಗ್ರಹ ನೀಡಿದರು. ಅವನ ಮೂಕತನವು ಹೋಗಿ ಅವನು ಗುರುಸ್ತುತಿ ಮಾಡಿದ. ಪಾಕನಾಟಿ ಜನಾಂಗದವರಿಗೆ ಗುರುಗಳು ದೀಕ್ಷೆ ಮಾಡಿದ ಮೇಲೆ, ವೀರಭದ್ರ ಪ್ರತಿಷ್ಠೆ ಹಾಗು ಮಠವೊಂದು ಇಲ್ಲಿ ನಿರ್ಮಾಣಗೊಂಡಿತು.

ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ (ಕ್ರಿ.ಶ. ೧೫೦೯-೨೯) ಪೀಠದ ಜಗದ್ಗುರುಗಳಾಗಿದ್ದವರು ಶ್ರೀ ಕರಿಬಸವಸ್ವಾಮಿಗಳು. ಅವರು ಪೆನುಗೊಂಡೆ ಶಾಖಾಮಠದಲ್ಲಿ ಮೊಕ್ಕಾಂ ಮಾಡಿದ್ದ ಸಮಯ. ಅವರು ಪೆನುಗೊಂಡೆ ಶಾಖಾಮಠದಲ್ಲಿ ಮೊಕ್ಕಾಂ ಮಾಡಿದ್ದ ಸಮಯ. ಉಪರಾಜಧಾನಿ ಪೆನುಗೊಂಡೆಗೆ ಕೃಷ್ಣದೇವರಾಯನು ಪರಿವಾರ ಸಮೇತ ಬಂದು, ಗುರುದರ್ಶನ ಪಡೆದ. ಆ ಸಮಯದಲ್ಲಿ ರಾಯನ ಕಡೆಯ ಕೆಲವು ಕುಹಕಿಗಳು ಕಿವುಡನೆಂದು ಒಬ್ಬನನ್ನು ಗುರುಗಳ ಮುಂದೆ ನಿಲ್ಲಿಸಿದರು. ಅವನ ಕಿವುಡನ್ನು ಹೋಗಲಾಡಿಸಿದರೆ ರಾಜನ ಪ್ರತ್ಯಕ್ಷದ ನಿಮ್ಮ ಪ್ರಸಿದ್ಧಿ ಒಪ್ಪುತ್ತೇವೆ ಎಂದರು. ಆಗ ಶ್ರೀಗಳವರು, ಕಿವುಡನೆಂದವನಿಗೆ ಚಿಕಿತ್ಸೆ ನೀಡುತ್ತಾ ಪರಸ್ಪರ ಮಾತಿಗೆಳೆಸಿ ಕೃತಕ ಬಧಿರತ್ವದ ಗುಟ್ಟನ್ನು ಹೊರಗೆಡವಿದರಂತೆ, ವೈದ್ಯಕ್ಕೆ ಪೀಠವು ಹೆಸರಾಗಿದ್ದುದೂ ಕುಹಕಿಗಳಿಗೆ ಸೈರಿಸದೆ ಇಂಥ ಆಟಕ್ಕೆ ಮುಂದಾಗಿದ್ದರೆನ್ನಲಾಗಿದೆ. ಕಿವುಡು ಪರಿಹಾರದ ಘಟನೆಯನ್ನು ಪುಲ್ಲಕವಿಯು ಹೀಗೆ ಹೇಳಿದ್ದಾನೆ:

ಚಿವುಡೆಂದು ಬೋಯೆನೊ ಕಥಾ I ಶ್ರವಣಂಬುಲು ಸಕಲ ಶಬ್ದ ಸಂಭಾಷಣಮುಲ್

ವಿವರಿಂಪನಯ್ಯೆ ನಪುಡಾ I ಯವನಿ ಸುರುಂಡು ಸಂತಂಸಿಂಚಿಯತಿವರು ತೋಡನ್

(ಚತುರ್ಥಾಶ್ವಾಸ, ಪದ್ಯ ೬೦ ಪು. ೨೦೧)

ದೊರೆಯು ಗುರುಗಳ ಮಹಿಮೆ ಪ್ರತಿಭೆಗಳಿಗೆ ಮೆಚ್ಚಿ ಸಕಲ ಮರ್ಯಾದೆಗಳೊಡನೆ ರಾಜಧಾನಿಗೆ ಬರಮಾಡಿಕೊಂಡ, ಗೌರವ ಭಕ್ತಿಯಿಂದ ಸತ್ಕರಿಸಿದ. ಮಠವನ್ನು ಕಟ್ಟಿಸಿಕೊಟ್ಟ; ನಂತರ (ಮುಂದೆ ಸದಾಶಿವರಾಯನ ಕಾಲದಲ್ಲಿ ಕೃಷ್ಣಾಪುರದ ಈ ಮಠದ ಪಕ್ಕದಲ್ಲಿಯೆ) ಉದ್ದಾನ ವೀರಭದ್ರನ ಪ್ರತಿಷ್ಠೆಯಾಯಿತು. ಪುಲ್ಲಕವಿಯ ಆ ಬಗೆಗಿನ ವರ್ಣನೆ ಇಂತಿದೆ:

ದಿವ್ಯ ವಿಚಿತ್ರತರ ಪ್ರದೀಪ್ತಂಬುನ್ಯೆಧಾತ್ರಿ। ಪೆಂಪುಗಾ ಮಠಮು ನಿರ್ಮಿಂಚಿ ವೇಟ್ಕಿ।
ವಿಖ್ಯಾತಿನುದ್ದಾನ ವೀರಭದ್ರುನಿಯಂದು। ಸ್ಥಿರಲೀಲ ತೋ ಪ್ರತಿಷ್ಠಿಂಪ ಜೇಸಿ

ಪೆಂಪೆಕ್ಕು ರೀತಿಗಾ ಬಿಲ್ವವನಂಬುಲು । ಸೊಂಪು ಮೀರಗನು ಗಾಪಿಂಪಜೇಸಿ
ಭಕ್ತುಲಕೆಲ್ಲನು ಪಂಚಾಕ್ಷರೀ ಮಹಾಮಂತ್ರೋಪದೇಶಮೇ ಮರಕ ಜೇಸಿ
ವೀರಶೈವ ಸದಾಚಾರವಿಧಮುಲ ಚಟ ಜನಲುಕೆಲ್ಸನು ಬೋಧಿಂಚಿ ಸಾಧುಮತಿಸಿ
ಧೀರತ ಚಲಂಗ ಮರಿಕೊನ್ನಿದಿನಮುಲಂದು । ರಾಜವರ ಪೂಜಿತಾಂಘ್ರಿ
ಸರೋಜುಡಗುಚು

(ಆಶ್ವಾಸ ೩, ಪದ್ಯ ೩೮, ಪು. ೧೪೧)

ಇದೇ ಉದ್ದಾನವೀರಭದ್ರ, ಗುಡಿಯಲ್ಲಿರುವ ಶಿಲಾಶಾಸನದಲ್ಲಿ ದೇಗುಲದ ನಿರ್ಮಾಣದ ಕುರಿತ ಸಾಲುಗಳಿವು:[೨೭]

'................ಶಕ ವರುಷಂ ೧೪೬೭ನೆಯ ವಿಶ್ವಾ [ವ] ಸು ಸಂವತ್ಸರದ.. ಶ್ರೀ ವೀರ ಸದಾಶಿವದೇವ ಮಹಾರಾಯರ.... ದಳವಾಯಿ ಜಂಗಮ್ಮೈಯ್ಯನವರು ಸದಾಶಿವ ದೇವ ಮ[ಹಾ] ರಾಂಯರಿ[ಗೂ]...ಪ್ರಧಾನಿ ಎಲದಿಂಮರಾಜಯ್ಯನವರಿಗೂ ಪು(ಂ)ಣ್ಯವಾಗಬೇಕೆಂದು ಕೃಷ್ಣಾಪುರದ ಪೇಟೆಯ ಹಿರಿಯ ಕಾಲುವೆಯ ಛತ್ರದ ಬಳಿಯಲೂ ಕಟಿಸ್ತಂಥಾ ಮುದು ವೀರಂಣನ ಪ್ರತಿಷ್ಟೆಯನ್ನೂ ಮಾಡಿ....ಸರ್ವಮಾನ್ಯವಾಗಿ ಸಮರ್ಪಿ[ಸ್ತ]ಸ್ವಾಸ್ತೆಗಳು [ಹಿ] ರಿ ಸತ್ರದಲು ದಿನ೧ಕಂ ಅಕಿ [ಸಿಧೆ] ......

– ಅಂದರೆ ಕ್ರಿ.ಶ. ೧೫೪೫ರ ಸದಾಶಿವರಾಯನ ಕಾಲದಲ್ಲಿ, ಮೊದಲೇ ಇದ್ದ ಹಿರೇಮಠದ ಕಾಲುವೆ ಛತ್ರದ ಬಳಿ ದಳವಾಯಿ ಜಂಗಮಯ್ಯನಿಂದ ದೇಗುಲದಲ್ಲಿ ಮುದುವೀರಂಣ (ವೀರಭದ್ರ) ಪ್ರತಿಷ್ಠೆ ಆದ ವಿಷಯ ತಿಳಿಯುತ್ತದೆ. ಶಿಲ್ಪದ ನಿಡು ಎತ್ತರದಿಂದಾಗಿ 'ಉದ್ಯಾನ ವೀರಭದ್ರ'ನೆಂದು ಕರೆಯಲ್ಪಡುವ ಈ ವೀರಭದ್ರನ ಪ್ರತಿಷ್ಠೆ ಶ್ರೀನಿಡುಮಾಮಿಡಿ ಪೀಠದ ಶಿಷ್ಯನಾಗಿದ್ದ ದಳವಾಯಿ ಜಂಗಮಯ್ಯನಿಂದ (ಪೀಠದ ಪರಂಪರೆಯಲ್ಲಿ ಹೇಳುವಂತೆ ಗುರುಪ್ರೇರಣೆಯಿಂದಾಗಿಯೂ) ನಡೆಯಿತೆಂದು ಪುಲ್ಲಕವಿಯಿಂದಲೂ ವಿದಿತವಾಗುತ್ತದೆ. ಪೀಠದ ಸಂಪ್ರದಾಯದಲ್ಲಿ ಕಾಣಬರುವ 'ಸರ್ವಾಂಗಲಿಂಗ' ಶಿಲ್ಪವು ಉದ್ಯಾನ ವೀರಭದ್ರನ ಗುಡಿಯಲ್ಲಿರುವುದು ಗಮನಾರ್ಹ. ವೀರಶೈವ ಸಿದ್ಧಾಂತದ ೩೬ ತತ್ತ್ವಗಳನ್ನು ತಾಂತ್ರಿಕ ಹಿನ್ನೆಲೆಯಲ್ಲಿ ಅಡಕಗೊಳಿಸಿ ಇಷ್ಟಲಿಂಗ; ಪ್ರಾಣಲಿಂಗ–ಭಾವಲಿಂಗ ಸಂಯುಕ್ತ ರೂಪವಾಗಿ ಮೂರು ಮೈಗಳ ಪಟ್ಟಕ ರೂಪದ (prism) ಅರೆ ಗೋಲಾಕಾರ ಶಿರಶಿಲ್ಪದ ಲಿಂಗವಿದು. ಮಳೆಯ ಮಲ್ಲೇಶನ ಸಂಪ್ರದಾಯದ ಸಿದ್ಧವೀರೇಶ್ವರನ ಕರಕಮಲ ಸಂಜಾತನಾದ ವಿರೂಪಾಕ್ಷ ಪಂಡಿತಾರಾಧ್ಯನು, ವಿಜಯನಗರದರಸರ ಕಾಲದಲ್ಲಿ ಶ್ರೀ ನಿಡುಮಾಮಿಡಿ ಪೀಠದ ಶಾಖಾಮಠವಾಗಿದ್ದ ಹಂಪೆಯ ಈ ಹಿರಿಯ ಮಠವನ್ನು ನಿರ್ವಹಿಸುತ್ತ, ವೀರಶೈವ ಧರ್ಮಬೋಧೆಗಾಗಿ ಈ ಸರ್ವಾಂಗಲಿಂಗವನ್ನು ಪ್ರಾತ್ಯಕ್ಷಿಕೆಯಾಗಿ ಮುಂದಿಟ್ಟುಕೊಂಡು ಬಳಸುತ್ತಿದ್ದ[೨೬] ತನ್ನ ಚನ್ನಬಸವ ಪುರಾಣದಲ್ಲಿ

'ವಿದ್ಯಾನಗರಿಯೊಳ್ ಮರೆವ ಹಿರಿಯ ಮಠ' ಸರ್ವಾಂಗಲಿಂಗ ಸಾಹಿತ್ಯ ಹಾಗು ಅದರ ತಾತ್ತ್ವಿಕ ಪರಿಕಲ್ಪನೆ, ನಿಡುಮಾಮಿಡಿಯ ಕರಿಬಸವೇಶ - ಕುರಿತೆಲ್ಲ ಹೇಳಿದ್ದಾನೆ.[೨೮] ಮೂಲಪೀಠದಲ್ಲಿಯೂ ಇಂದಿಗೂ ಈ 'ಸರ್ವಾಂಗಲಿಂಗ' ಶಿಲ್ಪ ಇದೆ. (೧೯೬೪ರಲ್ಲಿ ಮತ್ತೆ ಹೊಸದಾಗಿ ಮಾಡಿಸಲಾಗಿದ್ದು ಡಾ॥ ಶ್ರೀ ಜಚನಿ ಅವರ ಗದ್ದುಗೆಯ ಮೇಲಿದೆ. ಹಳೆಯದು ಭಿನ್ನಗೊಂಡು ಶಿಥಿಲವಾದ ಮೇಲೆ ಇದನ್ನು ಮಾಡಿಸಿದ ಬಗ್ಗೆ ಡಾ॥ ಶ್ರೀ ಜಚನಿ ಸನ್ನಿಧಿಯವರು ಹೇಳುತ್ತಿದ್ದರು).

ಹೂವಿನ ಹಡಗಲಿ ತಾಲ್ಲೂಕು ಹೊಳಗುಂದಿ ಭಾವಿಹಳ್ಳಿಯಲ್ಲಿ ಪೀಠದ ಶಾಖಾ ಮಠವಿತ್ತು. ವಿಜಯನಗರ ಕಾಲದ ಬೃಹತ್ ಕಲ್ಯಾಣಿ ಹಾಗು ಜ॥ ಕರಿಬಸವೇಶ್ವರ ಸ್ವಾಮಿಗಳು ಜೀವಂತ ಸಮಾಧಿಯಾದ ಕ್ರಿಯಾಸಮಾಧಿಯ ಗದ್ದುಗೆ ಅಲ್ಲಿದ್ದು ಕಿರುಶಾಸನವೊಂದು ಅದಕ್ಕೆ ಸೇರ್ಪಡೆಗೊಂಡಿದೆ. ಈ ಭಾವಿಹಳ್ಳಿಯಲ್ಲಿ ರಾಜಗುರು ಹೂದೋಟವಿತ್ತು. ಇಲ್ಲಿಂದ ಹಂಪಿಯ ವಿರೂಪಾಕ್ಷನಿಗೆ ಹೂ ಸರಬರಾಜಾಗುತ್ತಿತ್ತಂತೆ. ಹಂಪೆಹುಣ್ಣಿಮೆಯಂದು ಭಾವಿಹಳ್ಳಿಯಲ್ಲಿ ಈ ಸ್ವಾಮಿಗಳ ಹೆಸರಲ್ಲಿ ನಡೆಯುವ ರಥೋತ್ಸವ ಸಮಯದಲ್ಲಿಯೇ ಉದ್ದಾನವೀರಭದ್ರನ ಗುಡಿಯಲ್ಲಿ 'ಯೋಗಲಿಂಗ'ದ ಉಬ್ಬುಶಿಲ್ಪವಿರುವ ದೀಪಸ್ತಂಭದ ಮೇಲೆ ದೀಪವಿಡುತ್ತಾರೆ. ಇದು ವಿಜಯನಗರ ಹಾಗು ಪೀಠದ ರಾಜಗುರುಗಳ ಸಾಂಸ್ಕೃತಿಕ ಜನಪದೀಯ ಸಂಬಂಧದ ಸಂಕೇತವೆನ್ನುವಂತಿದೆ.

ಕೃಷ್ಣದೇವರಾಯನ ಕಾಲದಲ್ಲಿ ಪೆನುಗೊಂಡೆಯಲ್ಲಿ ಅವನ ಭಂಡಾರಿ ಆಗಿದ್ದ ವಿರುಪಣ್ಣನು ತನ್ನ ಕುಲಗುರು ಜ॥ ಕರಿಬಸವ ದೇಶಿಕೇಂದ್ರರ ಪ್ರೇರಣೆಯಿಂದ ಲೇಪಾಕ್ಷಿಯ ವೀರಭದ್ರಾಲಯವನ್ನು ಕಟ್ಟಿಸಿ ಬೃಹತ್ ವೃಷಭೇಶ್ವರನನ್ನು ಕೆತ್ತಿಸಿದ. ಅಚ್ಯುತರಾಯನ ಕಾಲದಲ್ಲಿ (ಕ್ರಿ.ಶ. ೧೫೩೦-೪೨)ವಿರುಪಣ್ಣನು ದೊರೆಯ ಸಮ್ಮುಖದಲ್ಲಿ ದೇವ ಪ್ರತಿಷ್ಠೆಯನ್ನು ಕುಲಗುರು ಶ್ರೀ ಕರಿಬಸವೇಶ್ವರಿಂದ ಸಾಂಗಗೊಳಿಸಿದ, ಅಚ್ಯುತರಾಯನ ಪೆನುಗೊಂಡೆಯಲ್ಲಿ ಜ॥ ಇಮ್ಮಡಿ ಕರಿಬಸವೇಂದ್ರಸ್ವಾಮಿಗಳನ್ನು ಸನ್ಮಾನಿಸಿ ಬೃಹನ್ಮಠವನ್ನು (ನಿಡುಮಾಮಿಡಿಯಲ್ಲಿಯೂ ಮಠವನ್ನು ಬೃಹನ್ಮಠವಾಗಿ ವಿಸ್ತರಿಸಿ) ಕಟ್ಟಿಸಿಕೊಟ್ಟ; ಘನಗಿರಿ ಮಠ ಎಂದು ಹೆಸರಿಸಿ ಆ ಪ್ರಾಂತ್ಯದ ಫಣಾಚಾರಾಧಿಪತ್ಯವನ್ನು, ನೀಡಿದ. ೧೮ ಫಣಕಟ್ಟುಗಳಲ್ಲಿದ್ದ ದಲಿತರು, ಹಿಂದುಳಿದವರನ್ನು, ಗಿರಿಜನ-ಬುಡಕಟ್ಟಿನವರೂ ಸೇರಿದಂತೆ ಪೀಠದ ಸಂಪರ್ಕಕ್ಕೆ ಜ॥ ಚಂದ್ರಗುಂಡ ದೇಶಿಕೇಂದ್ರರು ಒಳಗು ಮಾಡಿದ್ದ ಸಂಗತಿ ಆಗ ರಾಜಮಾನಿತವಾದದ್ದು ೧೬ನೆಯ ಶತಮಾನದಲ್ಲಿಯೂ ಮುಂದುವರಿದ ಕುರುಹು ಇದು.

ಪುಲ್ಲಕವಿಯ ಪಂಡಿತಾರಾಧ್ಯ ಚರಿತ್ರೆಯ 'ಗ' ಪ್ರತಿಯಲ್ಲಿ ಫಣಾಚಾರಾಧಿಪತ್ಯದ ವಿಷಯವು ಹೀಗೆ ಮಂಡಿತವಾಗಿದೆ:

"ಶ್ರೀ ಮನ್ನಿಡುಮಾಮಿಡಿ ಸ್ವಾಮುಲ್ಕು ಅಷ್ಟಾವರ್ಣಂ ಸಾಲುಮೂಲ, ದ್ಯಾವರ ದೇಶಮುದ್ರ ಶೆಟ್ಟಿ ಶ್ಯಾನುಭೋಗುಲು ಯೆದ್ದುವೇಲ್ಪು ಕಾಪು ಕಮ್ಮಟಂ ದ್ಯಾವರಕೊಂಡ ಡೆಬ್ಬಯೇಲು ಕುಲಂ. ಇದಿ ಪೆನುಗೊಂಡ ಕನಕಪುರಾಯಿ ಸಿಂಹಾಸನಂ ನಿಡುವಮಾಮಿಡಿ ಜಂಗಮಯ್ಯ ಪಂಡಿತಾರಾಧ್ಯ ಸೂರ್ಯಸಿಂಹಾಸನಾನ್ನಿ ನಡಿವವಲಯು, ಅಚ್ಯುತರಾಯಲು ಶಿಷ್ಯಲು ಅಗುಟೆ ಸಾಕ್ಷಿ ಶ್ರೀ ಶ್ರೀ ಶ್ರೀ"

ಇಲ್ಲಿ ಫಣಾಚಾರಾಧಿಪತ್ಯವಲ್ಲದೆ ಸಾಲುಮೂಲೆ ಬಣಜಿಗರು, ದ್ಯಾವರ ದೇಶಮುದ್ರ ಶೆಟ್ಟಿ, ಶ್ಯಾನುಭೋಗ, ಯದ್ದುವೇಲ್ಪು ರೈತ, ಕಮ್ಮಾರ ಇತ್ಯಾದಿ ಎಪ್ಪತ್ತೇಳು ಕುಲದವರು ನಿಡುಮಾಮಿಡಿ ಗುರು ಪೀಠಕ್ಕೆ ನಡೆದುಕೊಳ್ಳಬೇಕು. ಅಚ್ಯುತರಾಯನೂ ಶಿಷ್ಯನಾಗಿ ಇದಕ್ಕೆ ಸಾಕ್ಷಿ ಎಂಬ ಅಭಿಪ್ರಾಯವಿದೆ ಹಾಗು ಪೀಠದ ಪ್ರಭಾವ ಸೂಚಕವಾಗಿದೆ.

ಇನ್ನು ೧೮ ಫಣಕಟ್ಟುಗಳ ಘಟಕಗಳ ಕಾಯಕದ ಸಂಕೇತಗಳನ್ನು ಸಚಿತ್ರವಾಗಿ ಹೊಂದಿರುವ ಉದ್ಧರಣೆ-ಸರಪಳಿ-ಗಂಟೆ ಸಂಯುಕ್ತವಾದ ಗಂಟೆಮುದ್ರೆ ಬಟ್ಟಲಿನ ಹಕ್ಕುದಾರ ದಲಿತ ವರ್ಗದ ಛಲವಾದಿ ಆಗಿದ್ದಾನೆ. ೧೮ ಫಣಕಟ್ಟುಗಳಲ್ಲಿ ಸೇರಿದವರು ಛಲವಾದಿ, ಬಾಲಜಂಗಮರು, ಡೋಹರರು, ಮ್ಯಾದಾರ, ಕುಂಬಾರ, ಈಡಿಗ, ಪಾತ್ರದವರು ಕೊರಗರು, ಶೆಟ್ಟಿಬಣಜಿಗ, ಮಣ್ಣುವಡ್ಡ, ಅಗಸ, ಹೊಲೆಯ, ಭಜಂತ್ರಿ ಮುಂತಾದವರಿದ್ದಾರೆ. ಪೀಠದ ಮೂಲಗುರುಗಳು ರಥಸಪ್ತಮಿಯಂದು ಪೀಠಾರೋಹಣ ಮಾಡಿದ ಸಂದರ್ಭದ ಸಂಸ್ಮರಣೆಗಾಗಿ ಅಂದಿನಿಂದ ಆರಂಭವಾದ ಚರ್ಯೆಯಾಗಿ ಪ್ರತಿ ರಥಸಪ್ತಮಿಯಂದು ಉತ್ಸವ ಸಂದರ್ಭದಲ್ಲಿ ಛಲವಾದಿಗಳು ಗಂಟೆಮುದ್ರೆ ಬಟ್ಟಲು ತಂದು ಪೀಠದ ಬಳಿ ಕಾಯಕ ಸಲ್ಲಿಸುತ್ತಾರೆ.

ಗೌರಿಬಿದನೂರು ತಾಲ್ಲೂಕು ವಾಟದ ಹೊಸಹಳ್ಳಿಯ ಪೀಠದ ಶಿಷ್ಯರಾದ ಛಲವಾದಿ ಸೋದರರಲ್ಲಿ ಈಚೆಗೆ ಗಂಟೆಮುದ್ರೆ ಬಟ್ಟಲು ಹಕ್ಕು ಪರ್ಯಾಯವಾಗಿ ಸೇರುವ ಬಗ್ಗೆ ವಿವಾದವು ನ್ಯಾಯಾಲಯದ ಕಟ್ಟೆ ಏರಿತು. ನ್ಯಾಯಾಲಯವು ಈ ಕಟ್ಟಳೆಯ ನ್ಯಾಯವು ನಿಡುಮಾಮಿಡಿ ಪೀಠದ ಗುರುಗಳ ಅಂಕಿತಕ್ಕೆ ಬರುವುದೆ ವಿನಾ ತನ್ನ ಪರಿಧಿಗೆ ಬರುವುದಿಲ್ಲವೆಂದು ಹೇಳಿತು. ಇದು ಪೀಠದ ಪಾರಂಪರಿಕ ಹಕ್ಕು - ಗೌರವಗಳ ಸಮಾಜೋ- ಸಾಂಸ್ಕೃತಿಕ ಹಕ್ಕನ್ನು ಎತ್ತಿ ಹಿಡಿದುದೇ ಆಗಿದೆ.

ನಿಡುಮಾಮಿಡಿ ಪೀಠಕ್ಕೆ ಗೂಳೂರುನಲ್ಲಿಯ ಛಲವಾದಿ ವಂಶೀಕರು ಹೇಳುವಂತೆ ಗೂಳೂರು, ಮಾರ್ಗಾನುಕುಂಟೆ, ಹೊನ್ನಂಪಲ್ಲಿ, ನಲ್ಲಪ್ಪರೆಡ್ಡಿಪಲ್ಲಿ, ತಿಮ್ಮಂಪಲ್ಲಿ, ನರಾವಲ್‌ಪಲ್ಲಿ, ನಂಜರೆಡ್ಡಿಪಲ್ಲಿ, ನರಸಾಪುರ, ಮೂಲಚೆಹ್ನಪಲ್ಲಿ, ಮೊಟಕುಪಲ್ಲಿ, ಮಲಕಚರುವುಪಲ್ಲಿ, ಸದ್ದಪಲ್ಲಿ, ಜಲಾಜಿರ್ಲ, ಮಾಡಪ್ಪಲ್ಲಿ, ಎಗ್‌ವಐವಾರುಪಲ್ಲಿ, ದಿಗ್‌ವಐವಾರುಪಲ್ಲಿ, ಕೊತ್ತೂರು, ರಾಯದುರ್ಗಂಪಲ್ಲಿ ಇತ್ಯಾದಿ ೧೮ ಹಳ್ಳಿಗಳಲ್ಲಿರುವ

ದಲಿತರು, ಭಜಂತ್ರಿಗಳು, ಮಡಿವಾಳರು, ಬಣಜಿಗರು, ಕುಂಬಾರರು, ಗಾಣಿಗರು, ಶೆಟ್ಟಿಬಣಜಿಗ, ಲಿಂಗವಂತರು ಮುಂತಾದ ೧೮ ಫಣಕಟ್ಟಿನವರ ಮದುವೆ ಮುಂಜಿ ಸಾವು, ಹಬ್ಬ ಹರಿದಿನ ಇತ್ಯಾದಿ ಸಂದರ್ಭಗಳಲ್ಲಿ ಬಂದು ಗಂಟಾಮುದ್ರೆ ಬಟ್ಟಲು ತರಲು ಹೇಳುತ್ತಾರೆ. ರಥಸಪ್ತಮಿಯಂದು ಪೀಠವು ದತ್ತ ಮಾಡಿರುವ ಹಕ್ಕಿನಂತೆ ಗಂಟೆಮುದ್ರೆ ಬಟ್ಟಲು ಒಯ್ದು ಮನೆಯಲ್ಲಿ ಮದುವೆ ಮುಹೂರ್ತದಲ್ಲಿ ಪೂಜೆಗಿಟ್ಟು ಕಾಯಕ ಸಲ್ಲಿಸುತ್ತಾರೆ. ಮುದ್ರಾಬಟ್ಟಲಿಗೆ ಫಣಕಟ್ಟಿನವರು ಅಕ್ಕಿ, ತಾಂಬೂಲ, ತೆಂಗು, ಫಲ, ದಕ್ಷಿಣೆ ತುಂಬಿ ಛಲವಾದಿಗಳಿಗೆ ಕೊಡುತ್ತಾರೆ. ಪಂಚಲೋಹದ ಈ ಶಿಖಾಮದ್ರಾಬಟ್ಟಲು ಸುಮಾರು ೧೦ ಕೆ.ಜಿ. ತೂಕವಿರುತ್ತದೆ. ಮನೆಯ ಹಿರಿಯ ಮಗನ ಹಕ್ಕಾಗಿ ಇರುವ ಈ ಕಾಯಕವನ್ನು ಪೀಠದಲ್ಲಿ ನಡೆಯುವ ರಥಸಪ್ತಮಿ ಯಂದು ಛಲವಾದಿ ತಪ್ಪದೆ ಬಂದು ಸಲ್ಲಿಸುತ್ತಾನೆ. ೧೮ ಫಣಕಟ್ಟು ಆಚಾರಗಳು ಪೀಠದ ಎಲ್ಲಾ ಶಾಖಾಮಠಗಳಲ್ಲಿ ರೂಢಿಗಿರುವ ಪದ್ಧತಿ ಆಗಿದೆ. ಛಲವಾದಿಗಳ ಪೈಕಿಯಿಂದ ಆಯ್ದು, ಪೀಠದ ಗುರುಗಳು ಕೊಟ್ಟ ರುದ್ರಾಕ್ಷಿ ಧರಿಸಿದವರು ಮಾತ್ರ 'ಛಲವಾದಿ ಜಂಗಮ'ರೆನಿಸುತ್ತಾರೆ. ಹಾಗೆ ನಿಗದಿಗೊಳಿಸಿದವರು ಮಾತ್ರ ಅರ್ಹರಾಗುತ್ತಾರೆ. ಛಲವಾದಿ ಮದುವೆ ಇತ್ಯಾದಿ ಕಾರ್ಯಗಳನ್ನು ಅವರು ನೆರವೇರಿಸುತ್ತಾರೆ. (ಇಂಥ ಪದ್ಧತಿ ಹಾಸನ ಜಿಲ್ಲೆಯ ಹೆಗ್ಗಡಹಳ್ಳಿ, ಹಲ್ಮಿಡಿ ಗ್ರಾಮೀಣ ಪ್ರದೇಶದಲ್ಲಿ, ಕೊಡಗಿನ ಹುಲುಕೋಡು, ಅವರದಾಳು, ಗ್ರಾಮೀಣ ಪ್ರದೇಶದಲ್ಲಿ ಕಾಣಬರುತ್ತದೆ. ದಲಿತ ವರ್ಗಕ್ಕೆ ಸೇರಿದ 'ಕೂಟವಳಿ ಕಣಿಯ'ರೆಂದು ಅವರನ್ನು ಕರೆಯುತ್ತಾರೆ. ಈಗ ಕೇವಲ ಲಿಂಗದ ಕಾಯಿಕಟ್ಟಿಕೊಂಡು ಮದುವೆ ಕಾರ್ಯ, ಹಾಗು ಇತರ ಸಂಸ್ಕಾರಗಳನ್ನು ಮಾತ್ರ ನೆರವೇರಿಸುತ್ತಾರೆ. ಗಂಟೆ ಬಟ್ಟಲು ಅವರಲ್ಲಿ ಮಠದ ಯಾವ ಭಾಗದಲ್ಲೂ ಆರಿಗೆ ಪ್ರವೇಶವಿರುತ್ತದೆ). ಗಂಟಾಮುದ್ರೆ ಬಟ್ಟಲ ಮೇಲೆ ಸೂರ್ಯ, ಶಿವಲಿಂಗ, ಬಸವ, ಚಂದ್ರರ ಉಬ್ಬುಶಿಲ್ಪವಲ್ಲದೆ, ನೇಗಿಲು, ಕತ್ತರಿ, ತಕ್ಕಡಿ, ಏಣಿ, ಇತ್ಯಾದಿ ವೃತ್ತಿಸೂಚಕ ಚಿಹ್ನೆಗಳನ್ನು ಮೂಡಿಸಲಾಗಿರುತ್ತದೆ. ಉದ್ದರಣೆ ಸ್ವರೂಪದ ಬಟ್ಟಲಿಗೆ ಸರಪಳಿ ಗಂಟೆಯನ್ನು ಸೇರಿಸಲಾಗಿರುತ್ತದೆ. ಹಾಲಿ ಗೂಳೂರು ಛಲವಾದಿ ಓಬಳೇಶಪ್ಪನಲ್ಲಿರುವ ಗಂಟಾ ಮುದ್ರೆ ಬಟ್ಟಲಿನ ಮೇಲೆ ಮೂರಾಲ ಪಾಪಿ ಚಿಟ್ಟೆಗಾರಿ ಗೆರಿಟ ಶ ೧೬೧೧ ಎಂಬ ಲಿಖಿತವಿದೆ.

ಈ ಗಂಟೆ ಬಟ್ಟಲಿನ ಸಂಕೇತ ಹಾಗು ಇತರ ವಿವರಗಳನ್ನು ಗಮನಿಸಿದರೆ, ಪೀಠ ಯಾವುದೇ ವೃತ್ತಿ ಗೌರವವನ್ನು ಎತ್ತಿ ಹಿಡಿಯುವ ಮಾನವೀಯ ಸಂಬಂಧಗಳನ್ನು ಸಾಂಸ್ಕೃತಿಕ ನೆಲೆಯಲ್ಲಿ ಗುರುತಿಸುವ ಆದೇಶಿಸುವ ಹಕ್ಕು ಹಾಗು ಹೊಣೆ ಇದ್ದುದು ತಿಳಿಯುತ್ತದೆ. ಹಾಗೆಯೇ ಅದು ಇಂದಿಗೂ ನಡೆದುಕೊಂಡು ಬಂದಿದೆ.

ಇನ್ನು ವಿಜಯನಗರದರಸರಿಗೆ ಸಂಕಷ್ಟ ಸಮಯದಲ್ಲಿ ಪೀಠವು ನೆರವಾದ

ಸಂದರ್ಭವೂ ಕಾಣಬರುತ್ತದೆ. ವಿಜಯನಗರದ ಸದಾಶಿವರಾಯನ ಕಾಲದಲ್ಲಿ ಅಳಿಯ ರಾಮರಾಯನ (ಕ್ರಿ.ಶ. ೧೫೪೨-೬೫) ಪ್ರಾಬಲ್ಯವನ್ನು ಸಹಿಸದ ಕೋಶಾಧಿಕಾರಿ ಬೊಕ್ಕಸಂ ತಿಮ್ಮಯ್ಯ ಎಂಬುವನಿದ್ದ. ಅವನು ಸೈನ್ಯಬಲವನ್ನು ಸಂಚು ಮಾಡಿ ತನ್ನತ್ತ ಸೆಳೆದುಕೊಂಡು ಅಳಿಯ ರಾಮರಾಯನನ್ನು ಸೆರೆ ಇಡುವ ಹವಣಿಕೆಯಲ್ಲಿದ್ದ. ಆಗ ಪರಂಪರೆಯಲ್ಲಿ ಬಂದಂತೆ ರಾಜಗುರುವಾಗಿ ಪೀಠದ ಇಮ್ಮಡಿ ಕರಿಬಸವಸ್ವಾಮಿಗಳಿದ್ದರು. ರಾಮರಾಯನು ಅವರ ಬಳಿ ಬಂದು ಸಲಹೆ ಹಾಗು ಸಹಾಯಕ್ಕಾಗಿ ಪ್ರಾರ್ಥಿಸಿದ. ಪೀಠದ ನೆಚ್ಚಿನ ಶಿಷ್ಯನಾಗಿದ್ದ ಹಂಡೆ ವಂಶದ ಮೂಲ ಪುರುಷ ಹಂಡೆಕುರುಬ ಜಾತಿಯ ಬಾಲದ ಹನುಮಪ್ಪ ನಾಯಕ[೩೧] ಬಿಜಾಪುರದ ಮುತ್ತಗಿ ಎಂಬ ಗ್ರಾಮದ ಗೌಡಿಕೆಯಲ್ಲಿದ್ದ ಇವನು ಪೀಠದ ಗುರುಗಳ ಆದೇಶದ ಮೇರೆಗೆ ರಾಮರಾಯನ ನೆರವಿಗೆ ಹೋದ. ಅದರಿಂದ ತಿಮ್ಮಯ್ಯನ ಸಂಚು ವಿಫಲವಾಯಿತು. ರಾಮರಾಯನಿಗೆ ವಿಜಯನಗರ ಉಳಿಯಿತು. ಕ್ರಿ.ಶ. ೧೫೫೫-೬೦ರ ಸಮಯದಲ್ಲಿ ನಡೆದ ಈ ಘಟನೆಯ ನಂತರ ನಾಯಕನು ನಿಜಾಂ ಬಾದುಷಾಹನನ್ನು ಕೈಸರೆ ಮಾಡಿ ರಾಮರಾಯನಿಗೆ ಒಪ್ಪಿಸಿದ. ಇವನ ಶೌರ್ಯವನ್ನು ಮೆಚ್ಚಿ ರಾಮರಾಯನು ಬುಕ್ಕರಾಯಸಮುದ್ರ, ನಂದ್ಯಾಲ, ಬಳ್ಳಾರಿ, ಕುರುಗೋಡ ಇತ್ಯಾದಿ ಗ್ರಾಮಗಳನ್ನು ಉಂಬಳಿಯಾಗಿ ನೀಡಿದ. ಬಹುಶಃ ರಾಮರಾಯನ ಕಾಲದಲ್ಲಿ ಇವನು ತೋರಿದ ಶೌರ್ಯ ಬಿಜಾಪುರದ ಆದಿಲ್ ಶಹನ ಗಮನ ಸೆಳೆದ ಕಾರಣ, ಕ್ರಿ.ಶ. ೧೬೨೫-೫೬ರ ಸಮಯದಲ್ಲಿ ಆದಿಲ್‌ಶಹನ ಸೈನ್ಯದಲ್ಲಿ ವಜೀರ್‌ನಾಗಿದ್ದ.[೩೨] ಈ ಸಮಯದಲ್ಲಿಯೆ ತನ್ನ ಕುಲಗುರುವಾದ ಶ್ರೀ ನಿಡುಮಾಮಿಡಿ ಪೀಠದ ಜ॥ ಕರಿಬಸವ ದೇಶಿಕೇಂದ್ರ ಶಿವಾಚಾರ್ಯರನ್ನು ಆದಿಲ್‌ಶಹನಿಂದ ಗೌರವಿಸಲು ಬರಮಾಡಿಕೊಂಡ. ಅಲ್ಲಿ ನಡೆದ ವಾದದಲ್ಲಿ ಶ್ರೀ ಕರಿಬಸವ ದೇಶಿಕೇಂದ್ರರು ಗೆದ್ದು 'ಹಿಂದೂ ಫಕೀರ್' ಎಂಬ ಬಿರುದು ಪಡೆದು ಧರ್ಮದ ಸಾಂಗತ್ಯ ತೋರಿದರು. ಇದಲ್ಲದೆ ತಮ್ಮ ಶಿಷ್ಯ ಹಂಡೆ ಹನುಮಪ್ಪನಾಯಕನ ಮೊಮ್ಮಗ ಒಂದನೇ ಪವಾಡಪ್ಪ ನಾಯಕನೆನಿಸಿದ್ದ ಪ್ರಸನ್ನಪ್ಪನಾಯಕನ ಕುಷ್ಠರೋಗವನ್ನು ವೈದ್ಯಕೀಯ ಶುಶ್ರೂಷೆ ಮಾಡಿ ವಾಸಿಮಾಡಿದರು.[೩೩]

ಈಚೆಗಿನ ಶೋಧಗಳ ರೀತ್ಯಾ ಬುಕ್ಕರಾಯ ಚರಿತ್ರೆಯಲ್ಲಿ ಹಂಡೆ ಹನುಮಪ್ಪನಾಯಕನ ಮೊಮ್ಮಗ ಮಲಕಪ್ಪನಾಯಕ ಎಂದಿದ್ದಾರೆ. ಬಳ್ಳಾರಿ ಕುರುಗೋಡು ಕೈಫಿಯತ್ತುಗಳಲ್ಲಿ ಮಗನೆಂದು ಹೇಳಿದೆ.[೩೪] ಹೀಗಾಗಿ ಗುರುಗಳ ಸಂಬಂಧಗಳ ಕಾಲವೂ ವಿವೇಚನೆಗೊಳಗಾಗುತ್ತದೆ.

ಕ್ರಿ.ಶ. ೧೫೭೧-೧೬೦೦ರ ಸಮಯದಲ್ಲಿ ಪೀಠದ ಗುರುಗಳಾದ ಕಂಚಿ ಕರಿಬಸವಸ್ವಾಮಿಗಳು, ಕಂಚಿ ವರದರಾಜಸ್ವಾಮಿ ದೇಗುಲದ ಬಳಿ ಬಂದು ಬಾಗಿಲು ಹಾಕಿದ್ದುದನ್ನು ನೋಡಿ ಸ್ತುತಿಸಿದಾಗ ಬಾಗಿಲುಗಳು ತೆಗೆದುಕೊಂಡವಂತೆ.

ದರ್ಶನಾನಂತರ ದೇವರ ಪದಕವು ಅವರಿಗೆ ದೇವರಿಂದಲೇ ಧಾರಣವಾಯಿತಂತೆ. ಅದಕ್ಕೆ ಕಳ್ಳತನ ಆರೋಪವಾದಾಗ ಅಶರೀರವಾಣಿಯಾಗಿ ಅದು ನಿಗ್ರಹವಾಯಿತಂತೆ. ಕಂಚಿಯ ರಾಜನು, ಈ ಗುರುಮಹಿಮೆ ಕಂಡು, ಕಂಚಿಯಲ್ಲಿ ಮಠ ಕಟ್ಟಿಸಿಕೊಟ್ಟು ಕಂಚಿಕರಿಬಸವಸ್ವಾಮಿ ಎಂದು ಹೆಸರಾಗಲು ಕಾರಣನಾದನಂತೆ. ಇಲ್ಲಿ ಮಹಿಮೆ ಎನ್ನುವುದು ಸಂಕೇತ. ಸ್ವಾಮಿಗಳ ವರ್ಚಸ್ಸಿನಿಂದ ಮಠ ನಿರ್ಮಾಣವಾಯಿತು. ಎಂಬುದು ಮುಖ್ಯ. ಹೀಗೆಯೇ ಪೀಠದ ಗುರುಗಳು ಅರುಣಾಚಲದ ಸಿಂಧುಬಲ್ಲಾಳ ದೊರೆಯಿಂದ, ಪಾಂಡ್ಯಭೂಪಾಲನಿಂದ, ಮೈಸೂರರಸರಿಂದ, ಹೈದರ್‌ನಿಂದ ಸನ್ಮಾನಿತರಾಗಿದ್ದಾರೆ. ಪೆನುಗೊಂಡೆಯ ಶಿವಲಿಂಗಾರ್ಯರ ಪುತ್ರ ವೀರಣಾರ್ಯ ನಿಡುಮಾಮಿಡಿ ಪೀಠದ ಗುರುವರ್ಗದವರು. ಇವರ ಪೌತ್ರರಾದ ಶಾಂತವೀರದೇಶಿಕೇಂದ್ರರು ನಿಡುಮಾಮಿಡಿ ಪೀಠಾಧಿಪತಿಗಳಾದರು. 'ಶಿವಲಿಂಗ ಚಾರಿತ್ರ್ಯ' ಎಂಬ ಚಂಪೂ ಕಾವ್ಯ ಬರೆದರು. ಈ ವೀರಣಾರ್ಯ ಮಾಗಡಿ ಇಮ್ಮಡಿ ಕೆಂಪೇಗೌಡನಿಗೆ (ಕ್ರಿ.ಶ. ೧೫೮೫-೧೬೫೮) ಕುಲಗುರುವಾಗಿದ್ದವರು. ಬೆಂಗಳೂರಿನ ಗವಿಪುರಂ ಗುಟ್ಟಹಳ್ಳಿಯಲ್ಲಿ 'ನಿಲಯ ಹಿತ್ತಿಲ ಬಿತ್ತಿ ಮಹಾಕೂಪ ಸಹಿತನಾಗಿ ಮಠವನ್ನು ಕಟ್ಟಿಸಿಕೊಟ್ಟ'. ಇಂದು ಅದು ಗೌರಿಶಂಕರ ರಾಜರಾಜೇಶ್ವರಿ ದೇಗುಲವಾಗಿದೆ.

ಹಂಡೆವಂಶದ ಪ್ರಸನ್ನಪ್ಪನಾಯಕನ ಸೋದರ ಇಮ್ಮಡಿ ಪವಾಡಪ್ಪನಾಯಕನಾಗಿದ್ದ. ೧೭೨೦-೧೭೭೩. ಅನಂತಪುರ, ಕಡಬದ ನವಾಬರ ಆಳ್ವಿಕೆಗಿದ್ದ ಕಾರಣ, ಅನಂತಪುರದ ಈ ನಾಯಕ ನವಾಬನಿಗೆ ವಾರ್ಷಿಕ ಕಪ್ಪ ಕೊಡುತ್ತಿದ್ದ. ಇವನ ಆಸ್ಥಾನದ 'ರಮಾಜಿ' ಎಂಬ ಅಧಿಕಾರಿ, ನವಾಬರು ನಾಯಕನ ರಾಜ್ಯ ಕಬಳಿಸುವ ಸಂಚಿನಲ್ಲಿ ಪಾಲ್ಗೊಂಡಿದ್ದ. ನವಾಬರ ಸೈನ್ಯದಿಂದ ಪವಾಡಪ್ಪನ ಬಂಧನವಾಯಿತು. ಪವಾಡಪ್ಪನು ಭಾವಮೈದ ಚನ್ನಬಸಪ್ಪನ ಮೂಲಕ ರಾಜಗುರುಗಳಾಗಿದ್ದ ಪೀಠದ ಕರಿಬಸವರಾಜದೇಶಿಕೇಂದ್ರರಿಗೆ (ಕ್ರಿ.ಶ. ೧೭೩೧-೫೦ ರಲ್ಲಿದ್ದ ಶ್ರೀ ಕರಿಬಸವರಾಜಸ್ವಾಮಿ) ಸುದ್ದಿ ಕೊಟ್ಟು ತನ್ನನ್ನು ಪಾರುಮಾಡಲು ತಿಳಿಸಿದ. ಆಗ ಕೊತ್ತಚೆರುವು (ಹೊಸಕೆರೆ) ಶಾಖಾ ಮಠದಲ್ಲಿದ್ದ ಗುರುಗಳು ಅನಂತಪುರಕ್ಕೆ ಬಂದರು. ಅರಮನೆ ಪಕ್ಕದಲ್ಲಿ ಇದ್ದ ಅವರ ಶಾಖಾಮಠದ ಹಿಂದೆ ದಿಡ್ಡಿಬಾಗಿಲು ಇತ್ತು. ಅದರ ಮೂಲಕ ನಾಯಕನ ಸಿಪಾಯಿಗಳು ಹುಲ್ಲುಹೊರೆಗಳಲ್ಲಿ ಕತ್ತಿಕಠಾರಿ ಅಡಗಿಸಿ ಮಠಕ್ಕೆ ಬಂದು ಸೇರುವಂತೆ ಉಪಾಯ ಮಾಡಿದರು. ಊಟ ತೆಗೆದುಕೊಂಡು ಹೋಗುತ್ತಿದ್ದ ಸೇವಕಿಯ ಮೂಲಕ ಗುರುಗಳ ರಹಸ್ಯ ಸಂದೇಶ ಪವಾಡಪ್ಪನಿಗೆ ಹೋಯಿತು. ಅದರಂತೆ ನಾಯಕ ದಿಡ್ಡಿ ಬಾಗಿಲ ಮೂಲಕ ಬಂದು ಮಠದಲ್ಲಿ ಅಡಗಿಕೊಂಡ. ನವಾಬನ ಸೈನಿಕರನ್ನು ಮಠದಲ್ಲಿದ್ದ ನಾಯಕನ ಸೈನಿಕರು ಪ್ರಬಲವಾಗಿ ಹೋರಾಡಿ ಸೋಲಿಸಿ ಹಿಮ್ಮೆಟ್ಟಿಸಿದರು. ನವಾಬನ ಸೇನಾನಿಗಳು ಮಡಿದರು.

ನವಾಬನ ಸೈನ್ಯ ಪಲಾಯನ ಮಾಡಿತು. ಇದರಿಂದಾಗಿ ಪವಾಡಪ್ಪನಾಯಕ ತನ್ನ ಜೀವಾವಧಿ ಪೂರ್ತಿ ಶ್ರದ್ಧೆಯಿಂದ ಗುರುಗಳನ್ನು ಆರಾಧಿಸಿದ. ತಾನು ಲಿಂಗೈಕ್ಯನಾದ ಮೇಲೆ ತನ್ನ ಸಮಾಧಿಯನ್ನು ಕೊತ್ತಚೆರುವು ಶಾಖಾಮಠದಲ್ಲಿ ಮಾಡಬೇಕೆಂಬ ಅವನ ಇಚ್ಛೆಯಂತೆ ಕ್ರಿ. ಶ. ೧೭೩೭ ರಲ್ಲಿ ಅವನ ಸಮಾಧಿಯನ್ನು ಅಲ್ಲಿ ಮಾಡಿಸಲಾಗಿದೆ. ಈ ಅಂಶಗಳಿಂದ ಪೀಠದ ಗುರುಗಳು ರಾಜನ ಹಾಗು ನಾಡಿನ ಕಷ್ಟಕಾಲದಲ್ಲಿ ರಾಜಗುರುಗಳಂತೆ ರಾಜಕೀಯ ಮಾರ್ಗದರ್ಶನ, ಸಾಮಾಜಿಕ ಮಾರ್ಗದರ್ಶನ ಹಾಗು ಸೈನಿಕ ವ್ಯೂಹದ ಮಾರ್ಗದರ್ಶನ ನೀಡಿ ಕೌಶಲ್ಯಯುತ ಸಂಪನ್ಮೂಲ ವ್ಯಕ್ತಿಗಳಾಗಿದ್ದರು; ಹಾಗು ಸಾಂಸ್ಕೃತಿಕ ಮಣಿಹಗಳಿಗೆ ನಿರ್ದೇಶನ ನೀಡುತ್ತಿದ್ದರೆಂದು ತಿಳಿಯುತ್ತದೆ. ಜೊತೆಗೆ ಹಿಂದುಳಿದ ವರ್ಗವಾದ ಹಂಡೆವಂಶದ ಅರಸೊತ್ತಿಗೆಯನ್ನು ಕಾಪಾಡಿದ ನೈತಿಕ ಹೆಮ್ಮೆ ಈ ಪೀಠಕ್ಕಿದೆ.

ರನ್ನನು ತನ್ನ 'ಸಾಹಸ ಭೀಮವಿಜಯ' ಎಂಬ ಕಾವ್ಯದಲ್ಲಿ :

ತುರುಗೋಳೊಳ್ ಪೆಣ್ಬುಯ್ಯಲೋಳೆರೆವೆಸದೊಳ್ ನಂಟನೆಡರೊಳ್ ಊರಳಿವಿನೊಳಂ I

ತರಿಸಂದು ಗಂಡುತನಮನೆ ನೆರಪದವಂ ಗಂಡನಲ್ಲನೆಂತುಂ ಷಂಡಂ II

– ಎಂದಿದ್ದಾನೆ. ಹಸುವಿನ ಅಪಹರಣ, ಹೆಣ್ಣಿನ ಹುಯಿಲೆದ್ದಾಗ, ಬಂಧುಗಳಿಗೆ, ರಾಜನಿಗೆ ಕಷ್ಟವಾದಾಗ, ನಾಡಿನ ಮೇಲೆ ಯುದ್ಧವೆರಗಿದಾಗ ಮುಂದೆ ಬಂದು ಹೋರಾಡದಿದ್ದರೆ ಅಂಥವರು ಷಂಡರೆನಿಸುತ್ತಾರೆ ಎಂಬ ಮಾತಿದೆ. ಪೀಠದ ಗುರುಗಳು ಅಂತೇ ಸಾಮಯಿಕವಾಗಿ ಸ್ಪಂದಿಸಿರುವ ಮೇಲ್ಲೂಚಿತ ಉದಾಹರಣೆಗಳು ರನ್ನನ ಮಾತುಗಳಿಗೆ ಕಾಲಾಂತರದ ಸಾಕ್ಷಿಯಂತಿವೆ.

ಈ ಪೀಠದ ಮಣಿಹ ಎಲ್ಲ ಜನಾಂಗಗಳಿಗೆ ಸಲ್ಲುತ್ತಿದ್ದ ಬಗೆ ಕಂಡು ಮೈಸೂರಿನ ದೊರೆ ಚಿಕ್ಕದೇವರಾಜ ಒಡೆಯರು ಗುರು ಶ್ರೀ ಮರಿಕರಿಬಸವಸ್ವಾಮಿಗಳಿಗೆ (ಕ್ರಿ. ಶ. ೧೬೯೧–೧೭೧೦) ನಂಜನಗೂಡಿನಲ್ಲಿ ಮಠ ಕಟ್ಟಿಸಿಕೊಟ್ಟರು. ಹೈದರಾಲಿಯು ನಿಡುಮಾಮಿಡಿಯಲ್ಲಿ ರಹಸ್ಯನಿಧಿ ಇದೆ ಎಂದು ಪರೀಕ್ಷಿಸಲು ಮುಂದಾದ. ಆದರೆ ಪರೀಕ್ಷಿಸಿದಾಗ ಯಾವ ನಿಧಿ ನಿಕ್ಷೇಪವೂ ಇಲ್ಲದಿದ್ದುದನ್ನು ಕಂಡು, ಅಂದಿನ ಗುರುಗಳಾಗಿದ್ದ ಶ್ರೀ ಕರಿಬಸವದೇಶಿಕೇಂದ್ರರಲ್ಲಿ ತನ್ನ ಪಶ್ಚಾತ್ತಾಪವನ್ನು ವ್ಯಕ್ತಪಡಿಸಿದ. ಗುರುಗಳು ಅವನ ಪರಿವಾರಕ್ಕೆ ಸೋಂಕಿನಿಂದ ಉಂಟಾದ ಉದರ ಶೂಲೆಗೆ ವೈದ್ಯಕೀಯ ಚಿಕಿತ್ಸೆ ನೀಡಿ ಪರಿಹರಿಸಿದರು. ಹೈದರ್ ಅವರನ್ನು ಗೌರವಿಸಿ ಸನ್ಮಾನಿಸಿದ.

ಗುಯ್ಯಲೂರು ಪೀಠವು ಸ್ಥಿರ ನಿವಾಸವಾಗಿದ್ದರೂ, ೧೨ನೆಯ ಶತಮಾನದಲ್ಲಿ ನಿಡುಮಾಮಿಡಿಯಲ್ಲಿ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಸಂದರ್ಭಗಳಿಂದಾಗಿ ಉಪರಾಜಧಾನಿ ಪೆನುಗೊಂಡೆಯ ಸನಿಹದ ಕಾರಣವಾಗಿ, ಮಾಮಿಡಿ ಪವಾಡದ

ಅಂದಿನ ಪ್ರಸಿದ್ಧಿಯ ಕಾರಣವಾಗಿ ಚರಪಟ್ಟಾಧಿಕಾರದ ಆ ನೆಲೆಯಲ್ಲಿ ಹೆಚ್ಚಿನ ಕಾಲವನ್ನು ಪೀಠದ ಜಗದ್ಗುರುಗಳು ಮುಡಿಪಿಡಬೇಕಾಯಿತು. ೧೮ನೇ ಶತಮಾನದ ಸುಮಾರಿನವರೆಗೆ ಹೈಹಯವಂಶ ನಿಡುಗಲ್ಲು ಚೋಳ, ಕಾಕತೀಯ, ವಿಜಯನಗರ ಹಾಗು ಪೆನುಗೊಂಡೆ ಅರಸರ ರಾಜಗುರುಗಳಾಗಿ, ಈ ಪೀಠಾಧಿಪತಿಗಳು ನಿಡುಮಾಮಿಡಿಯಲ್ಲಿ ಪ್ರಸ್ಥಾನಗೊಂಡಿದ್ದರು. ನಂತರ ಪೂರ್ವನೆಲೆ ಗುಯ್ಯಲೂರಿಗೆ ಮುಮ್ಮಡಿ ಕೃಷ್ಣರಾಜಒಡೆಯರ ಕಾಲದಲ್ಲಿ (ಕ್ರಿ.ಶ.೧೭೭೫-೧೮೧೩) ಪೀಠದ ಜಗದ್ಗುರುಗಳು ವಾಸ್ತವ್ಯವಾದರು. ನಿಡುಮಾಮಿಡಿಯಲ್ಲಿನ ಮಠವು ಶಾಖಾಮಠವಾಗಿಯೆ ಉಳಿದು ಬಂದಿತು. ಇಲ್ಲಿಗೆ ಬಂದ ಮೇಲೆ ಸಾಮಾಜಿಕ, ಸಾಂಸ್ಕೃತಿಕ ಮಣಿಹಗಳಲ್ಲದೆ ಪ್ರಮುಖವಾಗಿ ಸಾಹಿತ್ಯಿಕ ಮಣಿಹಗಳು ತುಂಬಿಬಂದದ್ದು ೧೨-೬-೧೯೫೯ರಲ್ಲಿ ಪೀಠಾಧಿಪತಿಗಳಾಗಿ ಬಂದ ಶ್ರೀ ಜ॥ ಚನ್ನಬಸವರಾಜ ದೇಶಿಕೇಂದ್ರ ಶಿವಾಚಾರ್ಯ ಮಹಾಸನ್ನಿಧಿ (ಡಾ॥ ಶ್ರೀ ಜಚನಿ)ಯವರಿಂದಾಗಿ. ❍

ಡಾ॥ ಶ್ರೀ ಜಚನಿ

ಅಂಬಡಗಟ್ಟಿಯಲ್ಲಿರುವ ಹಿರೇಮಠದ ಪಟ್ಟದ ಗದ್ದುಗೆ ಗದುಗಯ್ಯನವರದು. ಮೊದಲಿಗೆ ಅಡ್ನೂರು ಹಿರೇಮಠದಲ್ಲಿದ್ದರು. ಗದುಗಯ್ಯನವರ ತಂದೆ ರಾಚಯ್ಯ ಹಿರೇಮಠ ಅವರನ್ನು ಕಿತ್ತೂರು ಸಂಸ್ಥಾನದ ಮಲ್ಲಸರ್ಜ ಕರೆದುಕೊಂಡು ಬಂದು ಅಂಬಡಗಟ್ಟಿಯಲ್ಲಿ ಜಮೀನು ಉಂಬಳ ಹಾಕಿ ಕ್ರಿ.ಶ. ೧೮೦೦ರ ಸುಮಾರಿನಲ್ಲಿ ಮಠ ಸ್ಥಾಪನೆ ಮಾಡಿ ನೇಮಕ ಮಾಡಿದ. ಅವರು ಹಿರೇಮಠವನ್ನು ಚೆನ್ನಾಗಿ ನಡೆಸಿಕೊಂಡು ಬಂದರು. ಮುಂದೆ ಗದುಗಯ್ಯನವರೂ ಮಠದ ಅಭಿವೃದ್ಧಿಗಾಗಿ ದುಡಿದು ಕೊನೆಗೆ ಅಲ್ಲಿಯೇ ಗದ್ದುಗೆಗೊಂಡರು. ಶ್ರೀ ಜಚನಿಯವರು ಬಾಲಕರಿದ್ದಾಗ ಈ ಮಠ ಚೆನ್ನಾಗಿಯೇ ಇತ್ತು. ಈ ಮಠದ ವಂಶದವರಲ್ಲಿ ಶ್ರೀ ಜಚನಿಯವರು ಬಂದವರಾಗಿದ್ದಾರೆ. ಒಂದು ರೀತಿಯಲ್ಲಿ ರಾಜಗುರು ವಂಶಿಕರಿವರು ಎನ್ನಬೇಕು. ಶ್ರೀ ಜಚನಿಯವರ ಪೂರ್ವಾಶ್ರಮದ ದ್ಯಾಮವ್ವ ಗುಡಿಯಲ್ಲಿ ನಡೆಯುತ್ತಿದ್ದ ಪ್ರಾಥಮಿಕ ಶಾಲೆಯ ಸಹಪಾಠಿ, ಸ್ವಾತಂತ್ರ್ಯ ಹೋರಾಟಗಾರ ಅಂಬಡಗಟ್ಟಿಯ ಶ್ರೀ ಕಲ್ಲಯ್ಯಗದುಗಯ್ಯ ಹಿರೇಮಠ(೯೦) ಅವರನ್ನು ನಾನು ೯-೧೨-೧೯೯೯ ರಲ್ಲಿ ಭೇಟಿಯಾದಾಗ ತಮ್ಮ ನೆನಪಿನ ಗಣಿಯಿಂದ ಅವರು ಹೆಕ್ಕಿ ಹೇಳಿದ ವಿಷಯವದು. ಗ್ರಾಮದೇವತೆ ದ್ಯಾಮವ್ವನ ಸಂಬಂಧದ ಜಾತ್ರೆ, ಹೊನ್ನಾಟ ಇತ್ಯಾದಿಗಳ ಜಾನಪದ ಪ್ರಭಾವವೂ ಶ್ರೀ ಜಚನಿಯವರ ಮೇಲೆ ಬಿದ್ದು ಅವರ ಸಾಹಿತ್ಯದಲ್ಲಿಯೂ ಅವು ಅನುರಣ ಗೊಂಡಿವೆ.

ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ಅಂಬಡಗಟ್ಟಿಯ ಹಿರೇಮಠದ ದುಂಡಯ್ಯ ತಾಯವ್ವೆ ದಂಪತಿಗಳ ಪುಣ್ಯಗರ್ಭದಲ್ಲಿ ೧೯೦೯ರ ಆಶ್ವಯುಜ ಶುದ್ಧಷಷ್ಠಿಯಂದು (೨೮-೯-೧೯೦೯) ಜನಿಸಿದ ಡಾ॥ ಶ್ರೀ ಜಚನಿ ಅವರ ಹುಟ್ಟು ಹೆಸರು ರಾಚಯ್ಯ. ಅಂಬಡಗಟ್ಟಿಯಲ್ಲಿ ಪ್ರಾಥಮಿಕ ನಾಲ್ಕನೇ ಇಯತ್ತೆಯಲ್ಲಿ ಓದುತ್ತಿರುವಾಗ ಧಾರವಾಡ ಜಿಲ್ಲೆ ನವಿಲುಗುಂದ ತಾಲ್ಲೂಕು ಅಣ್ಣಿಗೆರೆ ಬಳಿಯ ಅಡ್ನೂರು ಗ್ರಾಮದ ಗ್ರಾಮಾಧಿಕಾರಿ ಅಡ್ನೂರು ಮಲ್ಲಿಕಾರ್ಜುನ ಗೌಡರು, ತಮ್ಮ ಮಠಕ್ಕೆ ಗುರುವ್ಯಕ್ತಿಯನ್ನು ಆರಿಸಿಕೊಳ್ಳಲು ಅಂಬಡಗಟ್ಟಿಗೆ ಬಂದರು. ಅಡ್ನೂರು ಮಠದ ಗುರುಗಳು ಅಂಬುಡಗಟ್ಟಿಯಲ್ಲಿ ನೆಲೆಸಿಬಿಟ್ಟಿದ್ದುದೂ, ಅಂಬಡಗಟ್ಟಿಯನ್ನು ಅರಸಿ ಬರಲು ಅಡ್ನೂರು ಗೌಡರಿಗೆ ಒಂದು ಕಾರಣವಾಗಿತ್ತು. ಅವರು ಬಂದು ರಾಚಯ್ಯನನ್ನು ಕರೆದುಕೊಂಡು ಹೋಗಿ ನಾಲ್ಕನೇ ತರಗತಿಯನ್ನು ಪಾಸು ಮಾಡಲು ಅನುವಾದರು. ರಾಚಯ್ಯ ಮುಂದೆ ಹಾನಗಲ್ ಕುಮಾರಸ್ವಾಮಿಗಳ ಕೃಪೆಯಿಂದ ಶಿವಯೋಗಮಂದಿರಕ್ಕೆ ಹೋಗಿ ವಿದ್ಯಾರ್ಜನೆ ಮಾಡಿ ಗುರುದೀಕ್ಷೆ ಪಡೆದು 'ಚಂದ್ರಶೇಖರ ದೇವರು' ಎನಿಸಿದರು. ಅಲ್ಲಿ ಕನ್ನಡ, ಸಂಸ್ಕೃತ ಭಾಷೆಗಳ ಪರಿಣತಿ

ಪಡೆದು ಶಾಸ್ತ್ರ ಹಾಗು ಸಾಹಿತ್ಯಕ ಕ್ಷೇತ್ರಗಳ ಸಾಧನೆಯಲ್ಲಿ ತೊಡಗಿದರು. ೧೨ ವರ್ಷಗಳ ಕಾಲ ಶಿವಯೋಗಮಂದಿರದಲ್ಲಿ ಸಂಸ್ಕೃತಾಧ್ಯಯನ ನಡೆಸಿದರು. ಶಿವಯೋಗಮಂದಿರದವರು ಈಗಲೂ ಶ್ರೀ ಜಚನಿಯವರು ಓದಿನ ವಾಸ್ತವ್ಯಕ್ಕೆ ಇದ್ದ ಹಜಾರ ತೋರಿಸುತ್ತಾರೆ. ಅವರ ಸ್ಮರಣೆ ಇಂದಿಗೂ ಅಲ್ಲಿ ಜೀವಂತವಿದೆ. ಶಿವಯೋಗಮಂದಿರದ ಅಧ್ಯಯನದ ನಂತರ ಚಂದ್ರಶೇಖರದೇವರಿಗೆ ಕನ್ನಡದ ಹೆಚ್ಚಿನ ಓದಿನತ್ತ ಸೆಳೆತವಾಯಿತು. ಶಿವಯೋಗ ಮಂದಿರದಲ್ಲಿದ್ದಾಗಲೂ ಸ್ವಂತವಾಗಿ ಕನ್ನಡ ಓದಿದರು. ಕನ್ನಡ ಕಾವ್ಯದ ಅಧ್ಯಯನ, ರಚನೆ ನಡೆಸಿದ್ದರು. ೧೯೩೬ರ ಕೊನೆಯಲ್ಲಿ ಶಿವಯೋಗಮಂದಿರವನ್ನು ಬಿಟ್ಟರು. ನವಿಲುಗುಂದದ ಗವಿಮಠಾಧ್ಯಕ್ಷ ಶ್ರೀ ಬಸವಲಿಂಗಸ್ವಾಮಿಗಳ ಪರಿಚಯ ಪತ್ರದೊಂದಿಗೆ ೧೯೩೭ರಲ್ಲಿ ಬಂದು ಬೆಂಗಳೂರಿನ ಸರ್ಪಭೂಷಣ ಮಠದ ಶ್ರೀ ಮಹಾದೇವಸ್ವಾಮಿಗಳಲ್ಲಿ ಆಸರೆ ಪಡೆದರು. ಶಿವಯೋಗ ಮಂದಿರದಲ್ಲಿದ್ದಾಗ ಹೊರಡಿಸುತ್ತಿದ್ದ ಹಸ್ತಲಿಖಿತ ಮಾಸಿಕ 'ಸುಕುಮಾರ'ದಲ್ಲಿ (ಇಂದಿಗೆ ಮುದ್ರಣರೂಪದಲ್ಲಿ ಪ್ರಕಟವಾಗುತ್ತಿದೆ) ಸಾಗಿದ್ದ ಬರಹಗಳ ಅನುಭವ ಬೆಂಗಳೂರಿನಲ್ಲಿ ಹೊಸ ಆಯಾಮಗಳನ್ನು ಪಡೆಯಿತು. ಅಕ್ಕನ ಬಳಗವನ್ನು ರೂಪಿಸಿ, ಅಕ್ಕನಬಾಳು, ಅಕ್ಕನಲಾವಣಿ, ಅಕ್ಕನ ಅಮೃತವಾಣಿ ಇತ್ಯಾದಿ ಕೃತಿಗಳು ಹೊರಬರಲನುವಾಯಿತು. ೧೯೩೭-೫೯ ರವರೆಗೆ ಸರ್ಪಭೂಷಣ ಮಠದಲ್ಲಿ ತಂಗಿದ್ದ ಸಮಯದಲ್ಲಿ ಅವರ ಶಾಸ್ತ್ರ-ಸಾಹಿತ್ಯ-ಅಧ್ಯಯನ ಪ್ರಕಾರಗಳು ಪಕ್ವಗೊಂಡವು.

---

* ೧೯೧೯ರ ನವರಾತ್ರಿಯ ಸರಸ್ವತಿ ಹಬ್ಬದ ಮೂಲಾನಕ್ಷತ್ರದಲ್ಲಿ ಜನಿಸಿದೆವೆಂದು ಡಾ॥ ಶ್ರೀ ಜಚನಿಯವರು ತಿಳಿಸಿದ್ದರೆಂದು ಶಿವಾಚಾರಿಣಿ ಸಮಾಜದ ಅಧ್ಯಕ್ಷಿಣಿ ಶ್ರೀಮತಿ ಗೌರಮ್ಮ ವೀರಭದ್ರಯ್ಯ ಅವರು ಹೇಳುತ್ತಾರೆ.

ಶ್ರೀ ನಿಡುಮಾಮಿಡಿ ಪೀಠದ ಶ್ರೀ ಮರಿಕರಿಬಸವರಾಜ ದೇಶಿಕೇಂದ್ರ ಸ್ವಾಮಿಗಳು ೧೯೩೭ನೇ ಅಕ್ಟೋಬರ್ ೮ ರಂದು ಲಿಂಗೈಕ್ಯರಾದ ಮೇಲೆ ಉತ್ತರಾಧಿಕಾರಿಗಳ ನೇಮಕವಾಗಿರಲಿಲ್ಲ. ಕೊನೆಗೆ ಸರ್ಕಾರ ಹಾಗು ಅಡ್ವೈಸರಿ ಕಮಿಟಿಯವರು ಸೇರಿ ಶಿಷ್ಯ ಮಂಡಳಿಯ ಒಪ್ಪಿಗೆ ಪಡೆದು ಸರ್ಪಭೂಷಣ ಮಠದಲ್ಲಿದ್ದ ಚಂದ್ರಶೇಖರದೇವರು ಅವರನ್ನು ಪೀಠದ ಜಗದ್ಗುರು ಸ್ಥಾನಕ್ಕೆ ಆಯ್ಕೆ ಮಾಡಿದರು. ಶಾಲಿವಾಹನ ಶಕ ೧೮೬೧ಕ್ಕೆ ಸರಿಯಾದ ಶ್ರೀ ಪ್ರಮಾಥಿ ನಾಮ ಸಂವತ್ಸರ ಜೇಷ್ಠ ಬಹುಳ ದಶಮಿ ತಾ.೧೨-೬-೧೯೩೯ನೇ ಸೋಮವಾರದಂದು 'ಜಗದ್ಗುರು ಪಟ್ಟದ ಶ್ರೀ ಶ್ರೀ ಚನ್ನಬಸವರಾಜ ದೇಶಿಕೇಂದ್ರ ಸ್ವಾಮಿಗಳು' ಎಂಬ ನಾಮಕರಣದೊಡನೆ ಚಂದ್ರಶೇಕರದೇವರು ಪಟ್ಟಾಭಿಷೇಕವಾದರು. ಅವರಿಗೆ ಸಕ್ಕರಾಯಪಟ್ಟಣ ಮಠದ ಶ್ರೀ ಸದಾಶಿವ ಪಟ್ಟಾಧ್ಯಕ್ಷ ಶಿವಾಚಾರ್ಯರಿಂದ ಪಂಚಮುದ್ರಾಂಕನಗಳೊಡನೆ ಅಧಿಕಾರ

ಸೂತ್ರ ದತ್ತವಾಯಿತು. ಸರ್ಪಭೂಷಣಮಠದ ಮಠಾಧೀಶರಾದ ಶ್ರೀ ಮನ್ನಿರಂಜನ ಪ್ರಣವ ಸ್ವರೂಪಿ ಮಹದೇವಸ್ವಾಮಿಗಳವರಿಂದ ಅನುಗ್ರಹವು ದಯಾಪಾಲಿತವಾಯಿತು. ತಿಪಟೂರಿನ ವೇ॥ ವಿರೂಪಾಕ್ಷಶಾಸ್ತ್ರಿಗಳು, ಬೆಂಗಳೂರಿನ ವೇ॥ ಶರಣಯ್ಯ ಶಾಸ್ತ್ರಿಗಳು ಆಗಮ ಕರ್ತವ್ಯಗಳನ್ನು ನೆರವೇರಿಸಿದರು. ಸಿಂಹಾಸನಾರೋಹಣವು ಸಕಲ ಮರ್ಯಾದೆಯೊಡನೆ ನೆರವೇರಿದ ಸಂದರ್ಭದಲ್ಲಿ ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿ ಶ್ರೀ ಜಿ. ಸುಂದರರಾಯರು, ಚಿಕ್ಕಬಳ್ಳಾಪುರದ ಸಬ್ ಡಿವಿಷನ್ ಆಫೀಸರ್ ಶ್ರೀ ಆರ್.ಪಿ. ಮಲ್ಲಪ್ಪ, ಬಾಗೇಪಲ್ಲಿ ತಾಲ್ಲೂಕು ಅಮಲ್ದಾರ್ ಶ್ರೀ ಜಿ. ನರಸಿಂಹಯ್ಯ ಹಾಗು ಪೊಲೀಸ್ ಅಧಿಕಾರಿಗಳು ಇದ್ದರು. ಸ್ಥಳ ಪರಸ್ಥಳಗಳ ಶೆಟ್ಟರು, ಯಜಮಾನರು, ರೆಡ್ಡಿಗಳು, ಕರಣೀಕರು, ೧೮ ಫಣದ ಮುಖಂಡರು, ಸಲಹಾ ಸಮಿತಿ ಸದಸ್ಯರು, ವಕೀಲರು ಸಭೆಯನ್ನಲಂಕರಿಸಿದ್ದರು. ಮೂರು ಸಾವಿರಕ್ಕೂ ಮೀರಿ ಗುರುವರ್ಗ ಹಾಗು ಭಕ್ತಮಂಡಲಿಯೂ ನೆರೆದಿದ್ದ ಪೀಠಕ್ಕೆ ರಾಜಾಧಿರಾಜರಿಂದ ಅರ್ಪಿತವಿದ್ದ ೭೨ ಬಿರುದಾಂಕನ ವಾದ್ಯಘೋಷ, ನಂದಿಧ್ವಜ, ಲಿಂಗಧೀರರ ಉದ್ಘೋಷ, ಭಟ್ಟಂಗಿಗಳ ಹೊಗಳಿಕೆಯ ಧೀರ್ಘಧ್ವನಿ, ವೇದಘೋಷ ಇತ್ಯಾದಿಗಳು ನಡೆದ ಬಗ್ಗೆ. ವೇ॥ಎಂ.ಜಿ. ನಂಜುಂಡರಾಧ್ಯ ರಚಿತ ಸಂಸ್ಕೃತಪದ್ಯ ಮಾಲಿಕಾ ವಾಚನವೂ ನಡೆದ ಬಗ್ಗೆ ಅಡ್ವೈಸರಿ ಕಮಿಟಿ ಸದಸ್ಯ ಶಿಡ್ಲಘಟ್ಟದ ಶ್ರೀ ಎಸ್. ಹಂಪಯ್ಯ ಅವರು ಬರೆದ ಶ್ರೀ ನಿಡುಮಾಮಿಡಿ ಸ್ವಾಮಿಗಳ ಸಂಕ್ಷಿಪ್ತ ಚರಿತ್ರೆ ದ್ವಿತೀಯ ಮುದ್ರಣದಲ್ಲಿ ವರ್ಣಿತವಾಗಿದೆ.

ಡಾ॥ ಶ್ರೀ ಜಚನಿಯವರು ಪೀಠಾಧಿಕಾರ ವಹಿಸಿಕೊಂಡಾಗ ಸಂಸ್ಥಾನದ ಕಟ್ಟಡ ಹಾಗು ಆಥಿಕ ಸ್ಥಿತಿ ಸುಸ್ಥಿತಿಯಲ್ಲಿರಲಿಲ್ಲ. ಪ್ರಸಾದಕ್ಕೆ ಇದ್ದುದು ಕೇವಲ ನೆನೆಸಿದ ಕಡಲೆಕಾಳು. ಆಗ ಶಿಷ್ಯ ಸಂಘಟನೆ, ಸಂಚಾರಕಾರ್ಯದಲ್ಲಿ ತೊಡಗಿ ಪೀಠದ ಅಭಿವೃದ್ಧಿಗಾಗಿ ಶ್ರಮಿಸತೊಡಗಿದರು. ೨೦೦ ರೂ.ಗಳ ಚರಆಸ್ತಿ, ಸ್ವತಂತ್ರಗೊಂಡಿದ್ದ ೧೨೦ ಶಾಖಾಮಠಗಳು ಅವರ ಮುಂದಿದ್ದ ಸವಾಲಾಗಿ, ಎಲ್ಲವನ್ನು ನಿಭಾಯಿಸ ತೊಡಗಿದರು.

ಸಾಂಸ್ಕೃತಿಕ ಹಾಗು ಧಾರ್ಮಿಕ ಸಂಘಟನೆಗೆ ತೊಡಗಿ ಅಕ್ಕನಬಳಗ, ಭ್ರಮಾರಾಂಬಾ ಬಳಗ, ಮಲ್ಲಿಕಾಂಬಾ ಮಂಡಳಿ, ಮಹಿಳಾಮಂಡಳಿ; ಶಿವಾಚಾರಿಣಿಯರ ಸಮಾಜ ಇತ್ಯಾದಿ ಮಹಿಳಾ ಸಂಘಗಳನ್ನು ಸ್ಥಾಪಿಸಿ ಸಕ್ರಿಯಶೀಲ ಮಹಿಳೆಯರ ತಂಡವನ್ನು ರೂಪುಗೊಳಿಸಿದರು. ಅನೇಕ ಮಹಿಳಾ ವಚನಕಾರ್ತಿಯರನ್ನು ರೂಪಿಸಿದರು. ಅವರಲ್ಲಿ ಶ್ರೀಮತಿಯವರಾದ ಗೌರಮ್ಮ, ಓಂಕಾರಮ್ಮ, ಗು. ಶಂಕರಮ್ಮ, ಪ್ರಭಾವತಿ ಬೆಣಚಮರಡಿ ಅಂಬಡಗಟ್ಟಿ, ಶಿವಲಿಂಗಮ್ಮಕಟ್ಟಿ, ಕನಕಮ್ಮ, ಶಾರದಮ್ಮ, ಮಂಗಳಮ್ಮ, ಶಿವಲೀಲಾ ಹಂಡಿಗಿ, ಪುಟ್ಟಮ್ಮ ಮುಂತಾದವರು ವಚನಕಾರ್ತಿಯರಾಗಿ ಬೆಳಕಿಗೆ ಬಂದರು.

ವೀರಶೈವ ತತ್ತ್ವಪ್ರಚಾರ ಸಂಘ, ಭಾಷ್ಯಾಚಾರ್ಯರ್ ಸದಾಶಿವಾಚಾರ್ಯರ ಸಾಂಸ್ಕೃತಿಕ ಪ್ರತಿಷ್ಠಾನ, ಶ್ರೀ ಜಚನಿ ಅಧ್ಯಯನ ಪೀಠ ಮತ್ತು ಸಂಶೋಧನ ಸಂಸ್ಥೆಯನ್ನು ಸ್ಥಾಪಿಸಿದರು. ವೀರಶೈವ ತತ್ತ್ವಪ್ರಚಾರ ಸಂಘದ ವತಿಯಿಂದ, ಸರ್ವಶ್ರೀ ಎಂ. ರುದ್ರಪ್ಪ, ವಿಶ್ವನಾಥಪ್ಪ, ಡಿ.ಬಿ.ವೀರಣ್ಣ, ಎ.ಎನ್. ಬಸವರಾಜಪ್ಪ, ಎ.ಎನ್. ಚನ್ನಯ್ಯ, ಡಿ. ಚಂದ್ರಶೇಖರಯ್ಯ, ಎ.ಎನ್. ರಾಜಶೇಖರಪ್ಪ, ಡಾ॥ ಡಿ.ವಿ. ದೇವರಾಜ್, ಮುರುಗೇಂದ್ರಪ್ಪ, ಪರಮಶಿವಯ್ಯ ಮುಂತಾದವರು ಬೆಳಕಿಗೆ ಬಂದಿದ್ದಾರೆ. ನಿಡುಮಾಮಿಡಿಯ ವೀರಭದ್ರಸೇವಾ ಸಮಿತಿಯ ಮುಂದಾಳುಗಳಾಗಿ ಪ್ರಮುಖವಾಗಿ ಲಿಂ॥ ಕೆ.ಎಸ್.ಮಲ್ಲಪ್ಪನವರು, ಲಿಂ॥ ಎ.ಎನ್. ಬಸವರಾಜು, ಸರ್ವಶ್ರೀ ಸದಾಶಿವಪ್ಪ, ಎ.ಎನ್. ಮಹೇಶ್, ವಿಜಯಪುರದ ಶ್ರೀ ಸಿ.ಎಂ. ವೀರಣ್ಣ, ಶ್ರೀಮತಿ ಸುಮತಿ, ಶ್ರೀಮತಿ ಕಾಮಾಕ್ಷಮ್ಮ ಮತ್ತು ಬೆಂಗಳೂರಿನ ಶ್ರೀಮತಿ ಗೌರಮ್ಮ ಗಂಗಾಧರಯ್ಯ, ಶ್ರೀಮತಿ ರೇಣುಕಾಶಂಕರ್ ಮುಂತಾದವರು ಸೇವೆ ಸಲ್ಲಿಸಿದ್ದಾರೆ. ಇಂಥವರನ್ನೆಲ್ಲ ಶ್ರೀ ಜ.ಚ.ನಿ. ಅವರು ರೂಪಿಸಿದವರಾಗಿದ್ದಾರೆ.

ಶ್ರೀ ಜಚನಿ ಅವರು ಗೌರಿಬಿದನೂರಿನಲ್ಲಿ ಸಾರ್ವಜನಿಕ ವಿದ್ಯಾರ್ಥಿನಿಲಯ ತೆರೆದರು. ಬೂದಿಲಿಗ್ರಾಮದಲ್ಲಿ ಶಾಲಾಕಟ್ಟಡ ನಿರ್ಮಾಣಕ್ಕೆ ನೆರವಾದರು. ಆ ಶಾಲೆಯ ಹೆಸರು ಮಠದ ಹೆಸರಿನಲ್ಲಿಯೆ ಕೂಡಿಕೊಂಡಿದೆ.

ಕ್ರಿ.ಶ. ೧೯೪೮ರಲ್ಲಿ ಪೀಠದ ರಥೋತ್ಸವ ಸಮಯದಲ್ಲಿ ಪ್ರವೇಶವಿಲ್ಲದಿದ್ದ ದಲಿತರಿಗೆ ಮೊದಲಾಗಿ ಮಠದಲ್ಲಿ ಪ್ರವೇಶ ನೀಡಿದರು. ಅಂದಿನ ಸಮಾರಂಭದ ಅಧ್ಯಕ್ಷತೆಯನ್ನು ಮೈಸೂರು ರಾಜ್ಯದ ಮೊದಲ ಮುಖ್ಯಮಂತ್ರಿಗಳಾದ ಶ್ರೀ ಕೆ.ಸಿ. ರೆಡ್ಡಿಯವರು ವಹಿಸಿದ್ದರು. ಶ್ರೀ ಜಚನಿ ಅವರು ರಥಸಪ್ತಮಿಯುಂದು ಪೀಠದಲ್ಲಿ 'ನಾರಿಕೇಳಕರ್ಪೂರಾರತಿ' (ನಾರಿಕೇಳ ದೀಪೋತ್ಸವ)ವನ್ನು ಏರ್ಪಡಿಸುತ್ತಿದ್ದುದು ಜ॥ ಚಂದ್ರಗುಂಡರ ಪೀಠಾರೋಹಣ ಸಂಸ್ಮರಣೆಗಾಗಿಯೇ ಆಗಿರುತ್ತಿತ್ತು.

ಬೆಂಗಳೂರಿನಲ್ಲಿ ಜ॥ ನಿಡುಮಾಮಿಡಿ ನಿವಾಸವನ್ನೂ ರೂಪಿಸಿ ಧಾರ್ಮಿಕ, ಸಾಂಸ್ಕೃತಿಕ, ಸಾಹಿತ್ಯಕ ಸಂಘಟನೆ ಸಮ್ಮೇಳನಗಳನ್ನು ನಡೆಸಿದರು. ಹೀಗಾಗಿ ಪೀಠದ ಆಶ್ರಯದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನ, ಸರ್ವಧರ್ಮ ಸಮ್ಮೇಳನ, ಸೂಳ್ನುಡಿ ಸಾಹಿತ್ಯ ಸಮ್ಮೇಳನ, ಗಡಿನಾಡು ಕನ್ನಡ ಸಾಹಿತ್ಯ ಸಮ್ಮೇಳನ ಹೀಗೆ ಹಲವಾರು ಸಮ್ಮೇಳನಗಳು ನಡೆದು ಪೀಠದ ಸಾಹಿತ್ಯಕ, ಸಾಂಸ್ಕೃತಿಕ ದೇಣಿಗೆಗೆ ಅನುವಾಯಿತು. ಪೀಠದ ಸಾಹಿತ್ಯಕ– ಸಾಂಸ್ಕೃತಿಕ ಮುಖವಾಣಿಯಾಗಿ 'ಮಾಮಿಡಿ' ಎಂಬ ಮೂರ್ತಿಂಗಳೋಲೆಯನ್ನು (ತ್ರೈಮಾಸಿಕ)೧೯೮೦ ರಲ್ಲಿ ಸಂಸ್ಥಾಪಿಸಿ ಪ್ರಕಟಿಸಲಾರಂಭಿಸಿದರು. ಅದು ಸತತ ಹದಿನಾರು ವರ್ಷಗಳ ಕಾಲ ವಿಶೇಷಾಂಕಗಳನ್ನು ಸೇರಿಸಿಕೊಂಡಂತೆ ಪ್ರಕಟವಾಯಿತು. ಆರಂಭದ ಕೆಲವು ಸಂಚಿಕೆಗಳಿಗೆ ಡಾ॥ ಶ್ರೀ ಸಂಗಮೇಶ ಹಂಡಿಗಿ ಅವರು ಸಂಪಾದಕರಾಗಿ, ಸಂಪಾದಕ

ಮಂಡಳಿ ಸದಸ್ಯರಾಗಿ ಎಂ.ಜಿ.ನಾಗರಾಜ್, ಎಂ.ಜಿ. ನಂಜುಂಡಾರಾಧ್ಯ ಮುಂತಾದವರು ಕೆಲಸ ನಿರ್ವಹಿಸಿದರು. ನಂತರ ಎಂ.ಜಿ. ನಾಗರಾಜ್ ಅವರು 'ಮಾಮಿಡಿ'ಯ ಪ್ರಧಾನ ಸಂಪಾದಕರಾಗಿ, ಡಾ॥ ಡಿ.ವಿ. ದೇವರಾಜ್ ಅವರು ಸಂಪಾದಕರಾಗಿ ಕಾರ್ಯ ನಿರ್ವಹಿಸಿದರು. ಓರಿಯಂಟ್ ಪ್ರೆಸ್‌ನ ಮಾಲೀಕ ಶ್ರೀ ಜಿ.ಎಸ್. ಕುಮಾರಸ್ವಾಮಿಯವರು ಮೊದಲಿನಿಂದಲೂ ನಿರ್ವಾಹಕ ಸಂಪಾದಕರಾಗಿ ಕೆಲಸ ಮಾಡಿದರು.

ಸಾಹಿತ್ಯಿಕವಾಗಿ ನಾಲ್ಕು ಮಹಾಕಾವ್ಯಗಳನ್ನು ಪುರಾತನ ಕಥಾವಸ್ತುವಿನ ಚಂದ್ರಪ್ರಭಾದಿಂದ ಹಿಡಿದು ಸಮಕಾಲೀನ ಸಜ್ಜಲಗುಡ್ಡದ ಶರಣಮ್ಮೆಯರ ಕುರಿತಂತೆ ಬರೆಯಲಾಗಿದೆ. ಲಾಕ್ಷಣಿಕ ಕೃತಿಗಳೇ ಅಲ್ಲದೆ ಪ್ರಾಚೀನರಾದ ರುದ್ರ, ಭದ್ರರಿಂದ ಹಿಡಿದು ಪೀಠದ ಅದ್ಯರು. ಕಾರಣಿಕ ಹಾನುಗಲ್ಲು ಕುಮಾರಯೋಗಿಗಳ ವರೆಗೆ ಕೃತಿಗಳು ಹೊರಬಂದಿವೆ. ಆಗಮ ಸಂಶೋಧನಾ ಕೃತಿಗಳಾಗಿ ಶಿವರುದ್ರಾಗಮ, ವೀರಾಗಮ ಇತ್ಯಾದಿ ಎಂಟು ಕೃತಿಗಳನ್ನು ಹೊರತರಲಾಗಿದೆ. ವೀರಶೈವ ಸಿದ್ಧಾಂತ ಕುರಿತಂತೆ ಜೀವನಸಿದ್ಧಾಂತ ಹಾಗು ಶೂನ್ಯಸಂಪಾದನೆಯ ವಿಶಿಷ್ಟಮುಖಗಳನ್ನು ತೆರೆದಿಟ್ಟಿರುವ ಸಂಪಾದನೆಯ ಸೊಂಪು, ಶಿವಾದ್ವೈತ ದರ್ಶನಗಳು ಪ್ರಕಟವಾಗಿವೆ. ಸಿದ್ಧಾಂತ ಶಿಖಾಮಣಿಗೆ ಸಂಬಂಧಿಸಿದ ಹತ್ತಾರು ಕೃತಿಗಳು, ೧೫ಕ್ಕೂ ಮೀರಿದ ಕವನ ಸಂಕಲನಗಳು, ಜಾನಪದ ಕೃತಿಗಳು, ವಿಭೂತಿ, ದಾಸೋಹ, ದೇವರ ದಾಸಿಮಾರ್ಯ ಪ್ರಶಸ್ತಿ, ಶ್ರೀ ಶೈಲಪೀಠದರ್ಶನ ಇತ್ಯಾದಿ ಸಂಪಾದಿತ ಕೃತಿಗಳು ಹೊರಬಂದಿವೆ. ೨೦ನೆಯ ಶತಮಾನದ ಮುಖ್ಯ ವಚನಕಾರರಾಗಿ ಧರ್ಮ, ತತ್ತ್ವ ಸಾಹಿತ್ಯ, ರಾಜಕೀಯ, ವಿಜ್ಞಾನ, ವೈದ್ಯ, ದಲಿತರು, ಆಧುನಿಕ ಪ್ರಕ್ರಿಯೆಗಳು ಇತ್ಯಾದಿಗಳನ್ನು ಬಹುಸಮುಚಿತವಾಗಿ ವಚನ ಮಾಧ್ಯಮದಲ್ಲಿ ಬಳಸಿದ ಕಾರಣ ಶ್ರೀ ಜಚನಿ ವಚನ ಶೈಲಿ ಎಂದೇ ಪರಿಗಣಿತವಾಗುವಂತೆ ರಚಿಸಿದ್ದಾರೆ. ಕೆಲವಾರು ಕೃತಿಗಳೇ ಅಲ್ಲದೆ ಅವರ ವಚನಗಳೂ ಆಂಗ್ಲಭಾಷೆಗೆ ಅನುವಾದಗೊಂಡಿವೆ. ಅವರ ಕೆಲವು ವಚನಗಳನ್ನು ಎಂ.ಜಿ.ನಾಗರಾಜ್ ಅವರು ಆಂಗ್ಲಭಾಷೆಗೆ ಅನುವಾದಿಸಿ 'ಮಾಮಿಡಿ'ಯಲ್ಲಿ ಪ್ರಕಟಿಸಿದ್ದಾರೆ. ಇವೆಲ್ಲದರ ಪ್ರೇರಣೆಯಿಂದ 'ಶಿವಾಚಾರಿಣಿಯರ ಸೂಳ್ನುಡಿಗಳು' ಹಾಗು 'ಶಿವಾಚಾರಸ್ಥರ ಸೂಳ್ನುಡಿಗಳು' ಪ್ರಕಟವಾಗಿ ಪೀಠವು ನೂರಾರು ವಚನಕಾರರಲ್ಲಿ ರಚನಾಸಾಮರ್ಥ್ಯವನ್ನು ಬೆಳೆಸಿದೆ. 'ಶ್ರೀ ಜಚನಿ ವಚನ ಸಾಹಿತ್ಯ'ಕುರಿತಂತೆ ಡಾ. ಸಂಗಮೇಶ ಹಂಡಿಗಿ ಅವರು ಅಧ್ಯಯನ ಮಾಡಿ ಪಿಹೆಚ್.ಡಿ ಪಡೆದಿದ್ದಾರೆ. ಹೀಗೆ ಕಾವ್ಯ, ಕಾವ್ಯ ಮೀಮಾಂಸೆ, ಪೀಠದ ಆದ್ಯರ ಚರಿತ್ರೆ ಆಗಮ, ಸಂಶೋಧನೆ, ಕವನ, ನಾಟಕಗಳ ಜೊತೆಗೆ ಮಾದೇವಿ, ಚಂದ್ರಾವತಿ, ಶಾಂಭವಿ, ಭದ್ರ ಭವಾನಿ, ಸುಗ್ಗಳೆ, ದುಗ್ಗಳೆ ಮುಂತಾದ ಸ್ತ್ರೀ ವ್ಯಕ್ತಿತ್ವ ಕುರಿತ ಕೃತಿಗಳು ಹಾಗು ವಿಶಿಷ್ಟವಾದ ೧೨ನೆಯ ಶತಮಾನದ ಪೂರ್ವ ವೀರಶೈವ ಸೂಳ್ನುಡಿಕಾರರು, ಬಸವಗೀತೆ, ಇತ್ಯಾದಿಗಳು ಸೇರಿದಂತೆ ಸಂಖ್ಯೆಯಲ್ಲಿ ಸುಮಾರು ೩೦೦ ಕೃತಿಗಳನ್ನು

ಡಾ॥ ಶ್ರೀ ಜಚನಿ ಅವರು ಬರೆದು 'ಸಾಹಿತ್ಯ ಲೋಕಕ್ಕೆ' ಮಣಿಹ ಸಲ್ಲಿಸಿದ್ದಾರೆ. ಅಂತೇ 'ಸಾಹಿತ್ಯ ಲೋಕದ ಸೋಜಿಗ' ಎಂದು ಡಾ॥ ಸಿದ್ದಯ್ಯ ಪುರಾಣಿಕರು ನುಡಿದಿದ್ದಾರೆ.

ಡಾ॥ ಶ್ರೀ ಜಚನಿ ಅವರ ಸಾಹಿತ್ಯಕ ಮಣಿಹಗಳನ್ನು ಇನ್ನಷ್ಟು ವಿವರವಾಗಿ ವಿವೇಚಿಸಿ ಹೇಳಬಹುದು. ೧೯೨೪ ರಲ್ಲಿ ಶಿವಯೋಗ ಮಂದಿರಕ್ಕೆ ಬಂದ ಮೇಲೆ ಕವನ, ವಚನ ಲೇಖನಗಳನ್ನು ಬರೆಯಲಾರಂಭಿಸಿದರು. ೧೯೩೫ರಲ್ಲಿ 'ಸುಕುಮಾರ' ದ ಮೂರನೇ ಸಂಪುಟ, ಒಂದನೇ ಸಂಚಿಕೆಯಲ್ಲಿ ಅವರು ಬರೆದ ತಿಳಿನುಡಿಗಳು ವಚನ ರೂಪಕಗಳಾಗಿದ್ದವು. ಅವು ಇಂತಿವೆ.

ಜ್ಯೋತಿಯು ಕತ್ತಲೆಯನ್ನು ಕತ್ತರಿಸುವುದು
ಗಾಳಿಯು ಮೇಘಗಳನ್ನು ಚದುರಿಸುವುದು
ಜ್ಞಾನವು ಅಜ್ಞಾನವನ್ನು ಓಡಿಸುವುದು.

– ಮುಂದೆ ಶ್ರೀ ಜಚನಿ ಅವರು ವಚನ ರಚನೆಗೆ ಸಿದ್ಧಹಸ್ತರಾಗುವ ಸಂಕೇತವು ಈ ರೂಪದಲ್ಲಿ ದನಿಯಾಡಿದೆ ಎನ್ನಬೇಕು. ಪೀಠಾಧ್ಯಕ್ಷರಾಗಿ ೩೦ರ ಹರೆಯದಲ್ಲಿ ಬಂದ ಮೇಲೆ ವಚನಾ ರಚನಾ ಮಣಿಹ ಮುಂದುವರಿದು, ಚಿಂತನ, ಅಧ್ಯಯನ ಮತ್ತಷ್ಟು ಪಕ್ವವಾಗಿ ೧೯೪೯ ರಲ್ಲಿ ತಮ್ಮ ಚೊಚ್ಚಲ ವಚನಸಂಕಲನ 'ವಚನಾಂಜಲಿ' ಯನ್ನು ಪ್ರಕಟಿಸಿದರು. ಇದಕ್ಕೆ ಮೊದಲು ಅಕ್ಕಮಹಾದೇವಿ ಕುರಿತು ಅಕ್ಕನ ಅಮೃತವಾಣಿ, ಅಕ್ಕನಬಾಳು, ಅಕ್ಕನ ಯೋಗಾಂಗ ತ್ರಿವಿಧಿ, ಅಕ್ಕನ ಲಾವಣಿ ಇತ್ಯಾದಿ ಕೃತಿಗಳನ್ನು ಹೊರತಂದು ತಮ್ಮ ತಾಯಿಯ ಮಮತೆಯ ಮಡಿಲನ್ನು ಆದ್ಯ ಸ್ಮರಣೆ ಮಾಡಿ, ಈ ರೀತಿ ಶರಣೆಯರ ಹಾಗು ಮಾತಾ ಋಣವನ್ನು ತೀರಿಸಿದರು. ಧಾರ್ಮಿಕ ಅಂಗಳದಲ್ಲಿದ್ದೂ ಸರಸ್ವತಿಯ ಮಡಿಲಿಗೆ ತುಂಬಿದ ಭಾವ ವಾತ್ಸಲ್ಯದ ಬಾಗಿನಗಳಿವಾದುವು. ಈ ಬಾಗಿನದ ಘಟಕವಾಗಿಯೆ ೧೩ ವಚನ ಸಂಕಲನಗಳಲ್ಲಿ ಸುಮಾರು ಎಂಟು ಸಾವಿರಕ್ಕೂ ಮೀರಿ ವಚನಗಳನ್ನು ನೀಡಿದರು. ಅವರ ವಚನ ರಚನೆಗೆ ಅಕ್ಕನ ವಚನಗಳೇ ಆದ್ಯ ಪ್ರೇರಣೆ ಎನ್ನಬಹುದು. 'ವಚನಾಂಜಲಿ'ಯಿಂದ ಹಿಡಿದು 'ಶ್ರೀ ರುದ್ರಸೂಳ್ನುಡಿಗಳು'ವರೆಗೆ ಪರಂಪರೆಗೆ ನಿರಂತರ ಎಳೆದ ರಂಗವಲ್ಲಿಯಂತೆ ಸೊಬಗಾಗಿ ಅವು ಮೂಡಿ ಬಂದವು. ವಚನಗಳಲ್ಲಿ ಪ್ರಾಗೈತಿಹಾಸಿಕ, ಐತಿಹಾಸಿಕ, ಆಧುನಿಕ ಕಾಲದವರೆಗಿನ ಸಾಮಾಜಿಕ, ಸಾಂಸ್ಕೃತಿಕ, ವೈಜ್ಞಾನಿಕ ವಿಷಯಗಳೆಲ್ಲ ವಸ್ತುವಾಗಿ ಬಂದುವು. 'ವಚನಾಂಜಲಿ'ಯಲ್ಲಿ ಹಾನಗಲ್ಲು ಕುಮಾರಸ್ವಾಮಿಗಳ ಅದ್ವಿತೀಯ ವ್ಯಕ್ತಿತ್ವಕ್ಕೆ ಮಾರು ಹೋಗಿ ೧೧ ಮೀಸಲು ವಚನಗಳನ್ನು ಬರೆದು, ಒಟ್ಟಾರೆ ೧೭೭ ವಚನಗಳನ್ನು ಸಮರ್ಪಿಸಿ 'ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯಸಿಂಹಾಸನಾಧೀಶವಾಸ ಕುಮಾರೇಶ್ವರ'ಎಂಬ ದೀರ್ಘ ವಚನಾಂಕಿತವಿಟ್ಟು ಕೊಂಡಿದ್ದರು. ಈ ಸಂಕಲನದ ನಂತರ ವಚನಾಂಕಿತವನ್ನು

'ಶ್ರೀ ನಿಡುಮಾಮಿಡಿ ಶ್ರೀ ಗಿರಿ ಸೂರ್ಯಸಿಂಹಾಸನಾಧೀಶ್ವರ' ಎಂದು ಮುಂದುವರಿಸಿದರು. ೧೯೫೬ರಲ್ಲಿ ಬಂದ 'ವಚನಮಂಜರಿ'ಯಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿ ಬಗೆಗಿನ ವಸ್ತುವನ್ನು ಅಡಕಮಾಡಿ ಹೇಳಿದ ಪರಿ ಹೊಸಬಗೆದಾಗಿತ್ತು. ಜ॥ ಪಂಡಿತಾರಾಧ್ಯರಿಂದ ಆರಂಭಿಸಿ ಕರಿಬಸವೇಂದ್ರರವರೆಗೆ ಗುರುವಾರಾಧನೆಯನ್ನು ಮಿಡಿದಿದ್ದಾರೆ. ಪಿಂಡ-ಪಿಂಡಜ್ಞಾನದ ಮೂಲವನ್ನು:

ದಾರುಯುಗಕೆ ಮುನ್ನ I ಲೋಹಯುಗಕೆ ಮುನ್ನ I ತಾಮ್ರ ಯುಗಕೆ ಮುನ್ನI

ಶಿಲಾಯುಗಕೆ ಮುನ್ನ ಶ್ರೀ ನಿಡುಮಾಮಿಡಿ ಶ್ರೀಗಿರಿ ಸೂರ್ಯಸಿಂಹಾಸನಾಧೀಶ್ವರ

ನೀವಿರ್ದಿರಿ ಮುನ್ನ ಮುನ್ನ

- ಎಂದು ಜಗದಾದಿ ಚೈತನ್ಯವಾಗಿ ಪರಿಭಾವಿಸಿದ್ದಾರೆ.

ಹೀಗೆಯೆ 'ವಚನವಲ್ಲರಿ ಭಾಗ ೧ ಮತ್ತು ೨ ರಲ್ಲಿ ಆಧ್ಯಾತ್ಮ ಹಾಗು ವಿಜ್ಞಾನ ವಿಷಯಗಳ ಸಮನ್ವಯ ಸೇತುವಾಗಿ ವಚನಗಳನ್ನು ರಚಿಸಿದ್ದಾರೆ. 'ಮಣಿವಚನ' ಸಂಕಲನದಲ್ಲಿ ಏಕೋತ್ತರ ಶತಸ್ಥಲದ ಪ್ರತಿಪಾದನೆ: 'ಯುಗವಚನ ಹಾಗು ಸೊಗವಚನ' ಮಿಡಿವಚನ, ದುಡಿವಚನ' ಸಂಕಲನಗಳಲ್ಲಿ ಸಾಮಾಜಿಕ, ಅಧುನಿಕ, ವೈಜ್ಞಾನಿಕ ವಿಷಯವಲ್ಲದೆ, ಸ್ವಯಂ ಜೀವನ ದರ್ಶನ, ಜಾಗತಿಕ ಜನಜೀವನವನ್ನು ವರ್ಣಿಸಿದ್ದಾರೆ. 'ಸದಾಶಿವ ಸೂಳ್ನುಡಿ' : ಶ್ರೀ ಜಚನಿ ಅವರ ದೀಕ್ಷಾಗುರು ಶ್ರೀ ಸದಾಶಿವ ಶಿವಾಚಾರ್ಯರ ಸ್ಮರಣೆಗಾಗಿ ಬರೆದ ವಚನ ಸಂಕಲನವಾಗಿದೆ. 'ವಚನ ವಿಭಾವ' ೧೧೮೩ ವಚನಗಳ ಸುದೀರ್ಘ ಸಂಖ್ಯೆಯ ಸಂಕಲನವಾಗಿ ಅದರಲ್ಲಿ ವಿಷಯ ವೈವಿಧ್ಯತೆ ವಿಪುಲವಾಗಿದೆ. 'ವಿಶ್ವ ಶಿವಾತ್ಮಭಾವದ ಗೌರಘನತೆ'ವಚನ ಸಂಕಲನದಲ್ಲಿ ಶ್ರೀ ಗುರುವಿನ ಮಹತ್ತಿನ ವರ್ಣನೆ ಇದ್ದರೆ, 'ಶ್ರೀ ರುದ್ರಸೂಳ್ನುಡಿಗಳು (೧೯೯೨) ಎಂಬ ಅವರ ಕೊನೆಯ ವಚನ ಸಂಕಲದಲ್ಲಿ ರುದ್ರ-ವೀರಭದ್ರ ಕುರಿತ ಚಾರಿತ್ರಿಕ ಚಿಂತನೆಯನ್ನು ಹಾಗು ದಟ್ಟ ಸಾಂಸ್ಕೃತಿಕ ಸ್ಪರ್ಶವನ್ನು ತೋರಿಸಿದ್ದಾರೆ.

ಮಹಾಕಾವ್ಯ-ಖಂಡಕಾವ್ಯಗಳ ಪೈಕಿ 'ಚಂದ್ರಪ್ರಭಾ'ದ ಕಾವ್ಯವಸ್ತು ಕಠೋಪನಿಷತ್ತಿನದು. ನಚಿಕೇತನ ತಾಯಿ ಚಂದ್ರಪ್ರಭೆಯ ಪಾತ್ರವನ್ನು ಮೈತುಂಬಿ ಕಡೆದಿದ್ದಾರೆ; 'ಸದಾಶಿವರುದ್ರಂ'ನಲ್ಲಿ ಅವರ ದೀಕ್ಷಾಗುರುವಿನ ಸಮಕಾಲೀನ ವ್ಯಕ್ತಿತ್ವವನ್ನು ನೇಯ್ದಿದ್ದಾರೆ; 'ಸಜ್ಜಲಶರಣವ್ವೆ'ಯಲ್ಲಿ ಆಧುನಿಕಯುಗದ ಶರಣಶಕ್ತಿಯಾದ ಶತಾಯು ಕುರುಂಬರ ಸಿದ್ಧಮ್ಮನ ಚಾರಿತ್ರ್ಯವನ್ನು ವಿವರಿಸಿದ್ದಾರೆ: 'ಚಂದ್ರಾವತಿ'ಕೃತಿಯಲ್ಲಿ ಶಾಸನವೊಂದರ ಐತಿಹಾಸಿಕ ಕತೆಯನ್ನು ಆಧರಿಸಿ ಬರೆದ ಆಸ್ತಿಕ ಹೃದಯಕ್ಕೆ ಮುಟ್ಟುವಂತಹ ಲಲಿತವಹ ಕಾವ್ಯ ಮಂಡಿತವಾಗಿದೆ. 'ಮಣಿಮಕುರಂ'ಎಂಬ ಕಾವ್ಯದಲ್ಲಿ ಶಿವಯೋಗಿ ಶಿವಾಚಾರ್ಯರ ಸಿದ್ಧಾಂತ ಶಿಖಾಮಣಿಯನ್ನು ಭಾವಾನುವಾದ ಮಾಡಿ ತಾತ್ತ್ವಿಕ ದರ್ಶನದ ವೈವಿಧ್ಯವನ್ನು ತೋರಿದ್ದಾರೆ. ಇದೇ

ಹಾದಿಯಲ್ಲಿ ಮಣಿಕಾಂತಿ, ಮಣಿವಚನ, ರೇಣುಕಗೀತೆಯ ರಸದರ್ಶನ ಇತ್ಯಾದಿ ಮೂವತ್ತಾರು ಕೃತಿಗಳು ಅನುಭವ-ಅನುಭಾವದ ಪ್ರಭೆ ಬೆರೆಸಿ ಅದನ್ನೆಲ್ಲ ಹೇಳಿವೆ; 'ಪರ್ವತಪೀಠಪ್ರಭಾವಂ' ಎಂಬ ವಾರ್ಧಿಕಷಟ್ಪದಿಯ ಕಾವ್ಯವು ಪೀಠದ ಚರಿತ್ರೆಯನ್ನು ಅಡಕ ಮಾಡಿ ಹೇಳಿರುವ ಶಿವಪರ ಕಾವ್ಯವಾಗಿದೆ; 'ಕರಿಬಸವ ಕ್ರಾಂತಿಲೀಲೆ'(೧೯೯೯) ಯಲ್ಲಿ ಪೀಠದ ಜಗದ್ಗುರು ಪರಂಪರೆಯಲ್ಲಿ ಬರುವ ಕರಿಬಸವೇಂದ್ರ ನಾಮದ ಗುರುಗಳ ಮಣಿಹದ ವಿಷಯವನ್ನು ವಾರ್ಧಕಷಟ್ಪದಿಯಲ್ಲಿ ಮಂಡಿಸಲಾಗಿದೆ. ಒಟ್ಟಾರೆ ಶಾಸ್ತ್ರ-ಕಾವ್ಯ-ಸಿದ್ಧಾಂತಗಳ ದರ್ಶನವನ್ನು ಅವರ ಕಾವ್ಯಗಳು ನೀಡಿವೆ ಎನ್ನಬೇಕು.

ಕವನ ಸಂಕಲನಗಳ ಪೈಕಿ ೧೯೫೨ರಲ್ಲಿ 'ಹೊನ್ನು ಹಕ್ಕಿ'ಯಿಂದ ಆರಂಭಿಸಿ ೧೯೯೦ರ 'ಕವನ ಕೇತನ'ದ ವರೆಗೆ ೧೮ ಕವನ ಸಂಕಲನಗಳು ಬಂದವು. ಅವರ ಕವನಗಳು ಕಂದ, ಷಟ್ಪದಿ, ದ್ವಿಪದಿ ಛಂದಸ್ಸಿನಲ್ಲಿ ಹೆಚ್ಚು ಕಾಣಿಸಿಕೊಂಡು ವಸ್ತು, ರೂಪ, ಲಯಗಾರಿಕೆಯಲ್ಲಿ ವೈವಿಧ್ಯಗಳನ್ನು ಕೂಡಿಕೊಂಡು ಬಂದಿವೆ. ವಸ್ತು ಹಾಗು ಶೀರ್ಷಿಕೆಗಳು ತೀವ್ರ ಕನ್ನಡ ನಿಷ್ಠೆಯ ಸಂಕೇತವಾಗಿ ಬರುತ್ತವೆ. ಪ್ರಕೃತಿ, ಪರಂಪರೆ, ಗುರುಗಣ, ಶಿಕ್ಷಣ, ಬದುಕು, ನಾಡು-ನುಡಿ, ಭಾವೈಕ್ಯತೆ, ನೋವು-ನಲಿವು, ಸಾಮಾಜಿಕ ಶೋಷಣೆ, ದಲಿತರು ಇತ್ಯಾದಿ ಸಮಕಾಲೀನ ಸಂಗತಿಗಳನ್ನು ಅಡಕ ಮಾಡಿ ಕವನಗಳಲ್ಲಿ ವೈಶಿಷ್ಟ್ಯ ತೋರಿದ್ದಾರೆ. ಹೀಗಾಗಿ ಅವರ ಕಾವ್ಯ ಸಾಹಿತ್ಯ, ಆಧ್ಯಾತ್ಮಿಕ ಸಂದರ್ಶನದಲ್ಲಿ ಸಾಗಿ ಕಾವ್ಯಾನುಭವ ದರ್ಶನದೊಡನೆ ಸಮರಸವಾಗಿ ಕಂಡುಬರುತ್ತದೆ.

ಕಾವ್ಯಮೀಮಾಂಸಾಕ್ಷೇತ್ರದಲ್ಲಿ 'ಕಾವ್ಯ', ಧ್ವನಿ', 'ರಸ','ಸೌಂದರ್ಯ ದರ್ಶನ', 'ದೃಷ್ಟಿದರ್ಶನ', 'ಶೀಲಸೌಂದರ್ಯ', ಶೀಲಶೈಲಿ.ಇತ್ಯಾದಿ ಕೃತಿಗಳ ಮೂಲಕ ಅಲಂಕಾರಿಕರ ಸಿದ್ಧಾಂತವನ್ನು ಅಧ್ಯಯನ ಮಾಡಿ ಅನುಭಾವದ ನೆಲೆಯಲ್ಲಿ ವಿಮರ್ಶಿಸಿದ್ದಾರೆ. ಅಂದರೆ ಕಾವ್ಯಾನುಭವಗಳ ಮಂಡನೆಯನ್ನು ಅನುಭಾವಿಕ ನೆಲೆಯಲ್ಲಿ ದರ್ಶನವಾಗಿ ಮಂಡಿಸಿದ್ದಾರೆ ಎನ್ನಬೇಕು.

ಸಂಶೋಧನ ಕೃತಿಗಳು ಹಾಗು ಸೈದ್ಧಾಂತಿಕ ಕೃತಿಗಳು : ರುದ್ರ-ಭದ್ರರ ಇತಿಹಾಸವನ್ನು ಸೈಂಧವ ಸಂಸ್ಕೃತಿಯ ಕಾಲದಿಂದ ಹೆಕ್ಕಿ 'ಚಿಗುರಿಟ್ಟ ಚಿಂತನ' 'ಅಚ್ಚಾಳು ವೀರಭದ್ರ', 'ವಿಶ್ವಜ್ಯೋತಿವೀರಭದ್ರ', 'ರುದ್ರ-ಭದ್ರ-ರೇಣುಕ' ಇತ್ಯಾದಿ ಕೃತಿಗಳಲ್ಲಿ ಮಂಡಿಸಿದ್ದಾರೆ. ಅವುಗಳಿಗೆ ಅಗಮ ಉಪನಿಷತ್ತಿನ ಆಕರಗಳನ್ನು ಆಧುನಿಕ ಸಂಶೋಧನೆಗಳನ್ನು ಬಳಸಿಕೊಂಡಿದ್ದಾರೆ.

'ಜೀವನ ಸಿದ್ಧಾಂತ' ಕೃತಿಯ ಒಂದು ಷಟ್‌ಸ್ಥಲ ಸಂಪುಟಗಳ ಮಾಲಿಕೆಯಾಗಿ ಆರು ಸಂಪುಟಗಳಲ್ಲಿ ಐದು ಸಾವಿರ ಪುಟಗಳಿಗೂ ಮೀರಿದ ಹೊತ್ತಗೆಗಳಾಗಿ

ಬಂದಿದೆ. ಇದು ಅವರ ದಾರ್ಶನಿಕ ಮೇರುಕೃತಿಯಾಗಿದೆ. ಈ ರಚನಾಸಿದ್ಧಿಯ ಕಾರಣವೋ ಎಂಬಂತೆ ಮೈಸೂರು ವಿಶ್ವವಿದ್ಯಾನಿಲಯವು ೧೯೭೨ರಲ್ಲಿ ಶ್ರೀಗಳವರಿಗೆ ಡಿ.ಲಿಟ್, ಪದವಿಯನ್ನು ನೀಡಿ ಗೌರವಿಸಿತು.

'ಸಂಪಾದನೆಯ ಸೊಂಪು' ಎಂಬ ಅವರ ಕೃತಿಯು ಶೂನ್ಯಸಂಪಾದನೆಯ ಸಮಗ್ರ ವಿವೇಚನೆಯನ್ನು ತಲಸ್ಪರ್ಶಿಯಾಗಿ ಮಾಡಿದಂತಹ ಕೃತಿ ಆಗಿದೆ.

'ಕೈವಲ್ಯಪದ್ಧತಿ ಪ್ರದೀಪಿಕೆ' (ಪ್ರಕಟಿತ ೧೯೭೭) ನಿಜಗುಣ ಶಿವಯೋಗಿಗಳ ಕೈವಲ್ಯಪದ್ಧತಿಯ ಶಿವಾದ್ವೈತ ಪರವಾದ ವಾಖ್ಯಾನವನ್ನು ಶ್ರೀ ಜ.ಚ.ನಿ. ಯವರು (೧೯೮೬) ರಲ್ಲಿ ಬರೆದದ್ದು) ಮೊದಲಾಗಿ ಬರೆದು ಸೈದ್ಧಾಂತಿಕ ಸಾಹಿತ್ಯಿಕ ಮಣಿಹವನ್ನು ಮಾಡಿದ್ದಾರೆ. ಇದಲ್ಲದೆ ಜಾನಪದ ಸಾಹಿತ್ಯ ಪ್ರಾಕಾರದಲ್ಲಿ 'ಕೊರವಂಜಿ ಸಾಹಿತ್ಯ'ವನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಮಂಟೆತ್ತುಗಳ ಜಾನಪದ ಹಬ್ಬದ ಕುರಿತಾಗಿ 'ವೃಷಭ ಸಂಸ್ಕೃತಿ'ಎಂಬ ಕೃತಿಯನ್ನು ಪ್ರಕಟಿಸಿದ್ದಾರೆ.

ಡಾ॥ ಶ್ರೀ ಜಚನಿ ಅವರು ಕನ್ನಡ ಶಬ್ದ ಭಂಡಾರಕ್ಕೆ, ನುಡಿಗಡಣ (ಭಾಷಣ), ನಡೆಯಣಿ (ಕಾರ್ಯಕ್ರಮ), ನುಡಿಯಣಿ (ಪರಿವಿಡಿ), ನಲ್ವರಕೆ (ಶುಭಾಶಯ), ತೆರೆದ ಅಂಚೆ (ಬುಕ್‌ಪೋಸ್ಟ್), ಕಿರಿಯೋಲೆ (ಕಾರ್ಡ್), ಹದುಳ ಬನ್ನಿ (ಸ್ವಾಗತ), ಹೂಬೊಗಸೆ (ಪುಷ್ಪಾಂಜಲಿ), ಹದುಳಮನೆ (ಆಸ್ಪತ್ರೆ), ಹಾಲುಂಡೆ (ಪೇಡ), ಇತ್ಯಾದಿ ಅಚ್ಚಗನ್ನಡ ಹೊಸ ಶಬ್ದಗಳನ್ನು ಸಲ್ಲಿಸಿದ್ದಾರೆ. ಇವಲ್ಲದೆ ಕನ್ನಡ ನಿಘಂಟುಗಳಲ್ಲಿ ಕಾಣಬರದಿರುವ ವಚನಕಾರರು ಬಳಸಿರುವ ಹೊಸ ನುಡಿ-ಶಬ್ದಗಳಾದ ಪಡೆನುಡಿಗಳನ್ನು ಸಂಕಲಿಸಿ ಆಧ್ಯಾತ್ಮಿಕ ಅರ್ಥ ನಿಷ್ಪತ್ತಿಗಳನ್ನು ನೀಡಿದ್ದಾರೆ. ಉದಾಹರಣೆಗೆ 'ಅವಗವ' ಎಂದರೆ ಅನುಗ್ರಹ; ಪಣರತನಾದದ್ದು 'ರಪಣ'ಎಂಬ ಶಬ್ದವು ಕಾಯಕಸೂಚಿ; 'ನಿರಂಥ'ಎಂದರೆ ಮಹಾಜ್ಯೋತಿ ಅಥವಾ ಪರಂಜ್ಯೋತಿ ಎಂದು. ಅಕ್ಕಮಹಾದೇವಿ ಮತ್ತು ಚನ್ನಬಸವಣ್ಣನ ವಚನಗಳಲ್ಲಿನ ಶಬ್ದಗಳಿಗೆ ವಚನ ಮುಖಿ ಅರ್ಥಗಳನ್ನು ಹೇಳಿದ್ದಾರೆ. ಇವೆಲ್ಲಾ ಮಾಮಿಡಿ ತ್ರೈಮಾಸಿಕದಲ್ಲಿ ಪ್ರಕಟವಾಗಿವೆ. ಹೀಗೆಲ್ಲ ನಾಡು, ನುಡಿ, ಪೀಠದ ಸೇವೆ ಸಲ್ಲಿಸಿ ಡಾ॥ ಜಚನಿಯವರು ತಮ್ಮ ೮೭ನೆಯ ವಯಸ್ಸಿನಲ್ಲಿ ಅಂದರೆ ೫-೧೧-೧೯೯೬ ರ ರಾತ್ರಿ ೧೧ ಗಂಟೆ ಸುಮಾರಿನಲ್ಲಿ ಲಿಂಗದೊಳಗಾದರು.

ಈ ಪೀಠದ ಕೊಡುಗೆಯ ಇತಿಹಾಸವನ್ನೂ ಸೇರಿದಂತೆ ಕೃತಿ ಹಾಗು ಲೇಖನಗಳನ್ನು ಬರೆದವರಲ್ಲಿ ಡಾ॥ ಜಚನಿ, ವಿರೂಪಾಕ್ಷಪಂಡಿತ, ಸಂಪಾದನೆಯ ಸಿದ್ಧನಂಜೇಶ, ಶಿವಲಿಂಗ ಕವಿ, ಶಾಂತವೀರದೇಶಿಕ, ಪುಲ್ಲಕವಿ, ಇಡಗೂರು ರುದ್ರಕವಿ, ಅಪ್ಪಪ್ಪ ಕವಿ, ಕೊಟ್ಟೂರು ಬಸವರಾಜ, ಪಂಡಿತಾರಾಧ್ಯ, ಭದ್ರಗಿರಿ ಶಿವಕವಿ, ಚೌದಾಪುರಿ ಶಾಂತವೀರ ಶಿವಾಚಾರ್ಯರು, ಸಿರೀಪಿ ಆಂಜನೇಯಲು, ಆಂಧ್ರ ಶೇಷಗಿರಿರಾವ್, ನಾಗಸಂದ್ರಂ ವಾಸುದೇವರಾವ್, ಟಿ.ಹೆಚ್.ಎಂ. ಸದಾಶಿವಯ್ಯ,

ಅಕ್ಕುಲಯ್ಯ ದೀಕ್ಷಿತರು, ಬುದ್ಧಯ್ಯ ಪುರಾಣಿಕರು, ಡಾ॥ ಎಸ್. ಶ್ರೀಕಂಠಶಾಸ್ತ್ರಿ, ಮಂ. ಗೋವಿಂದಪೈ, ಫ.ಗು. ಹಳಕಟ್ಟಿ, ಅ.ನ.ಕೃಷ್ಣರಾವ್, ಬಂಡಾರು ತಮ್ಮಯ್ಯ, ಕಾಶೀನಾಥಶಾಸ್ತ್ರಿಗಳು, ಎಸ್. ಹಂಪಯ್ಯ, ಶ್ರೀನಿವಾಸರಾವ್ ಕೊರಟಿ, ಎಂ.ಜಿ. ನಂಜುಂಡಾರಾಧ್ಯ, ಎಸ್.ಕೆ.ರಾಮಚಂದ್ರರಾವ್, ಚ ಸುಂದರೇಶನ್, ಡಾ॥ ಬಿ.ನಂ. ಚಂದ್ರಯ್ಯ, ಎಂ.ಜಿ.ನಾಗರಾಜ್, ಡಾ॥ ಸಂಗಮೇಶ ಹಂಡಿಗಿ ಮುಂತಾದವರು ಸೇರಿದ್ದಾರೆ. ಇದಲ್ಲದೆ ಶ್ರೀ ಸದಾಶಿವ ಒಡೆಯರ್ ಹಾಗು ಶ್ರೀ ಚನ್ನವೀರಕಣವಿ ಅವರು ಸಂಪಾದಿಸಿರುವ ಶ್ರೀ ಜಚನಿ ಷಷ್ಟ್ಯಬ್ದಿ ಸಮಾರಂಭ ಸ್ಮಾರಕ ಸಂಪುಟ, 'ಜೀವನಸಿದ್ಧಿ', ಹಾಗು ಶ್ರೀ ಗೊ.ರು. ಚೆನ್ನಬಸಪ್ಪನವರ ಸಂಚಾಲಕತ್ವದಲ್ಲಿ ಹೊರಬಂದ 'ದಾಸೋಹ', 'ವಿಭೂತಿ' ಸಂಪುಟಗಳು, ಡಾ॥ ಸಾ.ಶಿ.ಮರುಳಯ್ಯ ಮತ್ತು ಡಾ॥ ಎಸ್. ವಿದ್ಯಾಶಂಕರ್ ಸಂಪಾದಿತ 'ನೂತನ ಚೇತನ' ಸಂಸ್ಕರಣ ಸಂಪುಟಗಳು ಈ ಪೀಠದ ವಿವಿಧ ಮಣಿಹ ಹಾಗು ಕೊಡುಗೆಗಳ ಚಿತ್ರಣವನ್ನು ಸಾಕಷ್ಟು ನೀಡುತ್ತವೆ. ಕಾವ್ಯ, ವಚನ, ಸಾಹಿತ್ಯ ಹಾಗು ಅನುಭಾವಕ್ಷೇತ್ರಕ್ಕೆ ನೀಡಿದ ಮಹತ್ತರ ಕೊಡುಗೆಗಾಗಿ ರಾಜ್ಯೋತ್ಸವ ಪ್ರಶಸ್ತಿಯನ್ನು ರಾಜ್ಯ ಸರ್ಕಾರವು ಡಾ॥ ಜಚನಿ ಅವರಿಗೆ ನೀಡಿದ್ದು ಪೀಠಕ್ಕೂ ಸಂದ ಗೌರವವಾಗಿದೆ. ○

ಶ್ರೀ ವೀರಭದ್ರ ಚನ್ನಮಲ್ಲ ಮಹಾಸ್ವಾಮಿಗಳು

ಶ್ರೀ ಜಚನಿಯವರು ಸಾಹಿತ್ಯಕವಾಗಿ ಶ್ರೇಷ್ಠ ಕೊಡುಗೆ ನೀಡಿದಂತೆ ತಮ್ಮ ಉತ್ತರಾಧಿಕಾರಿಗಳಾಗಿ ಶ್ರೀ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಮಹಾಸ್ವಾಮಿಗಳವರನ್ನು ಪೀಠಕ್ಕೆ ತರುವ ಮೂಲಕ ಮತ್ತೊಂದು ವಿಶಿಷ್ಟ ಕೊಡುಗೆ ನೀಡಿದ್ದಾರೆ. ಶ್ರೀ ವೀರಭದ್ರ ಚನ್ನಮಲ್ಲ ಮಹಾಸ್ವಾಮೀಜಿಯವರು ಕ್ರಾಂತಿಕಾರಿಗಳು, ಸಿಡಿಲ ಸನ್ಯಾಸಿಗಳು ಎಂದು ನಾಡಿನಲ್ಲಿ ಪ್ರಸಿದ್ಧರಾಗಿದ್ದಾರೆ.

ಪೂಜ್ಯರು ೧೯೬೦ರಲ್ಲಿ ಚಿತ್ರದುರ್ಗದಲ್ಲಿ ಜನಿಸಿದರು. ಅಲ್ಲಿಯೇ ಪ್ರಾಥಮಿಕ ಅಭ್ಯಾಸ ನಡೆಯಿತು. ೫ ರಿಂದ ೯ನೇ ತರಗತಿಯವರೆಗೆ ಬಳ್ಳಾರಿ ಜಿಲ್ಲೆ ಕೂಡ್ಲಿಗಿ ತಾಲ್ಲೂಕು ಕಾನಾಮಡುಗಿನ ಶ್ರೀ ದಾಸೋಹಮಠದಲ್ಲಿ ವ್ಯಾಸಂಗ; ೧೦ನೇ ತರಗತಿಯ ಅಭ್ಯಾಸ ದಾವಣಗೆರೆ ತಾಲ್ಲೂಕು ಹೆಬ್ಬಾಳು ಶ್ರೀ ರುದ್ರಸ್ವಾಮಿ ಮಠದಲ್ಲಿ; ಪಿ.ಯು.ಸಿ. ಶಿಕ್ಷಣ ಬೆಂಗಳೂರಿನಲ್ಲಿ; ಪದವಿ ಶಿಕ್ಷಣ ಚಿತ್ರದುರ್ಗದ ಶ್ರೀ ಸಾರಂಗಮಠದಲ್ಲಿ; ಮುಂದೆ ಮೈಸೂರಿನ ಜೆ.ಎಸ್.ಎಸ್. ಹಾಸ್ಟಲ್ ನಲ್ಲಿ ೪ ವರ್ಷಗಳ ವ್ಯಾಸಂಗ. ೧೯೮೪ರಲ್ಲಿ ಸ್ನಾತಕೋತ್ತರ ಪದವಿ, ಚಿನ್ನದ ಪದಕದೊಂದಿಗೆ ಪ್ರಥಮ ದರ್ಜೆಯಲ್ಲಿ ತೇರ್ಗಡೆ. ನಂತರ ಬುದ್ಧ ಮತ್ತು ಬಸವೇಶ್ವರರ ಬಗ್ಗೆ ಎರಡು ವರ್ಷಗಳ ಸಂಶೋಧನಾ ವ್ಯಾಸಂಗ. ಮೈಸೂರಿನ ರಾಮಕೃಷ್ಣಾಶ್ರಮದ ಕಾಲೇಜಿನಲ್ಲಿ ೧೯೮೫ರಲ್ಲಿ ಗೌರವ ಅಧ್ಯಾಪಕರಾಗಿ ಸೇವೆ. ೧೯೮೬ ರಿಂದ ೧೯೯೦ ರವರೆಗೆ ಚಿತ್ರದುರ್ಗ ಎಸ್.ಜೆ.ಎಂ. ಮಹಿಳಾ ಪ್ರಥಮ ದರ್ಜೆ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿ ಸೇವೆ. ಅಧ್ಯಾಪಕ ವೃತ್ತಿಗೆ ರಾಜೀನಾಮೆ ನೀಡಿ ೨೭-೧೨-೧೯೯೦ ರಂದು ಡಾ॥ ಜಚನಿ ಮಹಾಸನ್ನಿಧಿಯವರ ಉತ್ತರಾಧಿಕಾರಿಗಳಾಗಿ ಶ್ರೀ ನಿಡುಮಾಮಿಡಿ ಜಗದ್ಗುರು ಪೀಠಾರೋಹಣ- ಇವೆಲ್ಲ ನಡೆಯಿತು. ಡಾ॥ ಶ್ರೀ ಜಚನಿ ಅವರು ೨೭-೧೨-೧೯೯೦ ರಂದು ಶ್ರೀ ವೀರಭದ್ರ ಚನ್ನಮಲ್ಲ ಮಹಾಸ್ವಾಮಿಗಳೆಂದು ನಾಮಾಂಕಿತವಿತ್ತು ತಮ್ಮ ಉತ್ತರಾಧಿಕಾರಿಯನ್ನಾಗಿ ಮಾಡಿದರು. ಅವರು ದೇಶಿಕೇಂದ್ರ ಪೀಠದ ಮಣಿಹಗಳಿಗೆ ಹೊಸ ಆಯಾಮವನ್ನು ತಂದು, ಯಾರೇ ಮನುಷ್ಯ ಇನ್ನೊಬ್ಬನನ್ನು ಮನುಷ್ಯನನ್ನಾಗಿ ಮಾನವೀಯವಾಗಿ ನೋಡುವುದು ಮಾನವಧರ್ಮ ಎಂಬ ಆಶಯದೊಡನೆ 'ಮಾನವಧರ್ಮಪೀಠ' ಎಂದು ಗೂಳೂರಿನ ಧರ್ಮಗುರು ಪೀಠವಾದ ಶ್ರೀ ನಿಡುಮಾಮಿಡಿ ಮಹಾಸಂಸ್ಥಾನ ಪೀಠಕ್ಕೆ ಪರ್ಯಾಯ ಹೆಸರನ್ನು ಚಾಲ್ತಿಗೊಳಿಸುತ್ತಿದ್ದಾರೆ. ಡಾ॥ ಶ್ರೀ ಜಚನಿ ರಾಷ್ಟ್ರೀಯ ಸೇವಾ ಪೀಠ ಎಂಬ ಟ್ರಸ್ಟನ್ನು ೧೯೯೧ರಲ್ಲಿ ಸ್ಥಾಪಿಸಿ ಈವರೆಗೂ ಶಿಶುಪಾಲನಾ ಕೇಂದ್ರಗಳು ೨; ಪ್ರಾಥಮಿಕ ಶಾಲೆಗಳು ೬೦, ಕಾನ್ವೆಂಟ್‌ಗಳು ೫, ವಸತಿ ಸಹಿತ ಶಾಲೆಗಳು ೪; ಪದವಿಪೂರ್ವ ಕಾಲೇಜುಗಳು ೩; ಪದವಿಕಾಲೇಜು ೧; ಡಾ॥ ಶ್ರೀ

ಜಚನಿ ಶಿಕ್ಷಕರ ತರಬೇತಿ ಕೇಂದ್ರ ೧; ಧರ್ಮಗುರು ಬಿ.ಎಡ್. ಕಾಲೇಜು ಬಾಗೇಪಲ್ಲಿ ೧; ಶ್ರೀಶೈಲ ಸಾರಂಗಮಠ ಪರಮಶಿವರಾಜ ದೇಶಿಕೇಂದ್ರ ಮಹಾಸ್ವಾಮೀಜಿ ಎಸ್.ಟಿ. (ಪರಿಶಿಷ್ಟ ಪಂಗಡ)ಆಶ್ರಮ ಶಾಲೆ; ೫೦ ಜನರಿರುವ ಧರ್ಮಗುರು ವೃದ್ಧಾಶ್ರಮ; ಸ್ವಾಮಿ ವಿವೇಕಾನಂದ ಅನಾಥಾಲಯ ೧; ಮದರ್ ಥೆರೇಸಾ ಅನಾಥಾಶ್ರಮ೧; ಜಗತ್‌ಜ್ಯೋತಿ ಬಸವೇಶ್ವರ ಅಂಗವಿಕಲರ ವೃತ್ತಿ ತರಬೇತಿ ಕೇಂದ್ರ, ೧ ಇತ್ಯಾದಿ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಅನ್ಯಾಕ್ರಮಿತವಾಗಿದ್ದ ಪೀಠದ ಭೂ ಆಸ್ತಿಗಳನ್ನು ಸೌಹಾರ್ದವಾಗಿ ತೆರವು ಮಾಡಿಸಲಾಗಿದೆ. ಆಂಧ್ರಪ್ರದೇಶದ ಭೂಮಿಯನ್ನು ಅಲ್ಲಿನ ಸರಕಾರದಿಂದ ಬಿಡಿಸಿಕೊಳ್ಳಲಾಗಿದೆ. ಶಾಖಾ ಮಠಗಳ ಆಸ್ತಿಯನ್ನು ಉಳಿಸಿಕೊಳ್ಳಲು ಯತ್ನಿಸಲಾಗಿದೆ. ಪ್ರಮುಖ ಮಠಗಳ ಜೀರ್ಣೋದ್ಧಾರ ಕಾರ್ಯ ಕೈಗೊಂಡಿದೆ. ಮಹಾಸಂಸ್ಥಾನ ಮಠದ ಪುನರುಜ್ಜೀವನ, ವಿಶ್ವಗೃಹದ ನಿರ್ಮಾಣ ೮೦ ಸಾವಿರ ಲೀಟರಿನ ನೀರಿನ ಬೃಹತ್ ತೊಟ್ಟಿ, ಶ್ರೀ ನಿಡುಮಾಮಿಡಿ ನರ್ಸರಿ ಇತ್ಯಾದಿಗಳು ಸ್ಥಾಪಿತಗೊಂಡಿವೆ. ಪೀಠದ ಪರಿಸರದಲ್ಲಿ ಸುಂದರ ಹಸಿರು ವಲಯ ನಿರ್ಮಾಣಗೊಂಡಿದೆ. ಹಸಿರು ವಲಯದ ನಿರ್ಮಾಣದಲ್ಲಿ ರಾಜ್ಯದ ನಿವೃತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಾದ ಶ್ರೀ ಪರಮೇಶ್ವರಪ್ಪನವರೂ ನೆರವಾಗಿದ್ದಾರೆ; ಡಾ॥ ಶ್ರೀ ಜಚನಿ ಗದ್ದುಗೆ ಹಾಗು ದೇಗುಲ ನಿರ್ಮಾಣ ಕಾರ್ಯದಲ್ಲಿ ರಾಜ್ಯ ಪುರಾತತ್ವ ಇಲಾಖೆಯ ಮಾಜಿ ನಿರ್ದೇಶಕ ಡಾ. ಡಿ.ವಿ. ದೇವರಾಜ್ ಅವರು ನೆರವಾಗಿದ್ದಾರೆ. ಕ.ರಾ.ಕೃಷಿ ಉತ್ಪನ್ನ ಮಾರುಕಟ್ಟೆಯ ಹೆಚ್ಚುವರಿ ನಿರ್ದೇಶಕರಾಗಿದ್ದ ಶೀ ಬಿ.ಎಂ. ಪಾಟೀಲರು ಮಾರುಕಟ್ಟೆ ಸ್ಥಾಪನೆಗೆ ಕಾರಣರಾಗಿದ್ದಾರೆ. ಬಾಗೇಪಲ್ಲಿ ನರೇಂದ್ರ, ಬೆಂಗಳೂರು ನಿಡುಮಾಮಿಡಿಯಲ್ಲೂ ಶೈಕ್ಷಣಿಕ ಸಂಸ್ಥೆಗಳು ಈಗ ನಡೆಯುತ್ತಿವೆ. ಶ್ರೀಶೈಲ ಸಾರಂಗಮಠದ ಜಗದ್ಗುರು ಶ್ರೀ ಪರಮಶಿವರಾಜದೇಶಿಕೇಂದ್ರ ಮಹಾಸ್ವಾಮಿಗಳಿಗೆ ಡಾ॥ ಶ್ರೀ ಜಚನಿಯವರು ಮಾರ್ಗದರ್ಶಕರಾಗಿದ್ದರು. ಸಾರಂಗಮಠದ ಶ್ರೀಗಳು (ಈಗ ಲಿಂಗೈಕ್ಯ) ಅಷ್ಟೇ ಪ್ರೀತಿ ಗೌರವದಿಂದ ಈ ಮಹಾಸಂಸ್ಥಾನಕ್ಕೆ ನೆರವಾದರು. ಪೀಠದ ವತಿಯಿಂದ ವಾರ್ಷಿಕವಾಗಿ ಡಾ॥ ಶ್ರೀ ಜಚನಿ ಪ್ರಶಸ್ತಿಯನ್ನು ಸಾಂಸ್ಕೃತಿಕ, ವೈಚಾರಿಕ ಸೇವೆ ಸಲ್ಲಿಸಿದ ಮಹನೀಯರನ್ನು ಆಯ್ಕೆ ಮಾಡಿ ಇತ್ತೀಚಿನವರೆಗೆ ನೀಡುತ್ತ ಬರಲಾಗಿದೆ. ಹೀಗೆಯೇ ಅಡ್ನೂರಿನ ಮಠದ ಶ್ರೀಗಳು ಡಾ॥ ಶ್ರೀ ಜಚನಿ ಪ್ರಶಸ್ತಿಯನ್ನು ವಾರ್ಷಿಕವಾಗಿ ವಿದ್ವಾಂಸರಿಗೆ ನೀಡುತ್ತಿದ್ದಾರೆ. ಬಿಜಾಪುರದ ಶ್ರೀ ಶಾಂತೇಶ ಹಿರೇಮಠ ಜಚನಿ ಪ್ರತಿಷ್ಠಾನವನ್ನು ನಿರ್ವಹಿಸುತ್ತಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶ್ರೀಮತಿ ಗೌರಮ್ಮ ಗಂಗಾಧರಯ್ಯ ಮತ್ತು ಮಕ್ಕಳು ಡಾ॥ ಶ್ರೀ ಜಚನಿ ದತ್ತಿಯನ್ನು ಸ್ಥಾಪಿಸಿರುವ ಕಾರಣ ಪ್ರತಿ ವರ್ಷ ನವೆಂಬರ್ ೫ ರಂದು ದತ್ತಿ ಉಪನ್ಯಾಸ ಕಾರ್ಯಕ್ರಮ ನಡೆಯುತ್ತ ಬಂದಿದೆ.

ಸಾಹಿತ್ಯಕ ಮಣಿಹ

ಸಾಹಿತ್ಯದ ವೈಚಾರಿಕ, ತಾತ್ತ್ವಿಕ ಮಂಥನವನ್ನು ಸಾಮಾಜಿಕ ಕುರುಡು ಶ್ರದ್ಧೆಗಳು

ಸುಳ್ಳು ಸೃಷ್ಟಿಗಳನ್ನು ಬಯಲಿಗೆಳೆಯುವ ಪ್ರಯತ್ನವನ್ನು ಭಾಷಣಗಳಂತೆ ತಮ್ಮ ಗ್ರಂಥಗಳ ಮೂಲಕವೂ ಮಾಡುತ್ತಿದ್ದಾರೆ ಕಿರಿಯ ಶ್ರೀಗಳವರು. ಇವರ ಒಟ್ಟು ಕೃತಿಗಳು; ಕನ್ನಡದ ಬನ (ಹನಿಗವನಗಳು), ವಚನಾಂಜಲಿ (ವಚನಗಳು), ವ್ಯಾಸಂಗ (ಪ್ರಬಂಧಗಳು), ಅಂತರ (ಕವನಗಳು), ಚಿಂತನ ಚೇತನ (ಉಪನ್ಯಾಸಗಳು) ಇವು ಪೂರ್ವಾಶ್ರಮದ ರಚನೆಗಳು, ಸುಳ್ಳು ಸೃಷ್ಟಿಗಳು (ಕವನಗಳು), ಒಲವು-ನಿಲುವು (ಪತ್ರಗಳು), ಮಣ್ಣು ಮುಗಿಲು (ಕವನಗಳು), ಸಹಜ ಜೀವಿಗಳು (ಲಘು ಪ್ರಬಂಧಗಳು) ಮಠಾಧೀಶರ ಮರ್ಮ (ವೈಚಾರಿಕ) ಮುಂತಾದವು ಪೀಠಕ್ಕೆ ಬಂದ ಮೇಲೆ ರಚಿಸಿ ಪ್ರಕಟಿಸಿದ ಕೃತಿಗಳಾಗಿವೆ. ಸಾಹಿತ್ಯ ಸೂರ್ಯ ಜಚನಿ, Jachani- A literary luminary, ನೆನಹು ನಮನ, ಶಿವಸಂಸ್ಕೃತಿ; ಒಂದು ಚಿಂತನೆ, ಹೋರಾಟದ ಹೆಜ್ಜೆಗಳು, ಗುರುಚೈತನ್ಯ-ಕೃತಿಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಶ್ರೀಗಳ ಹತ್ತಕ್ಕೂ ಹೆಚ್ಚು ಅಪ್ರಕಟಿತ ಕೃತಿಗಳು ಪ್ರಕಟವಾಗಬೇಕಾಗಿದೆ. ಶ್ರೀಗಳ ದ್ವಾದಶ ಪೀಠಾರೋಹಣದ ನೆನಪಿಗೆ 'ಗರಿಕೆ' ಗ್ರಂಥವನ್ನು ಪ್ರಕಟಿಸಲಾಗಿದೆ. ಡಾ॥ ಎಸ್. ವಿದ್ಯಾಶಂಕರ ಮತ್ತು ಡಾ॥ ಡಿ.ವಿ.ದೇವರಾಜ್ ಅವರು ನಾಡಿನ ಪ್ರಾಜ್ಞರ ಅಭಿಪ್ರಾಯಗಳನ್ನು ಈ ಕೃತಿಯಲ್ಲಿ ಸಂಗ್ರಹಿಸಿದ್ದಾರೆ.

ಶ್ರೀ ವೀರಭದ್ರ ಚನ್ನಮಲ್ಲ ಮಹಾ ಸ್ವಾಮಿಗಳ ಕೃತಿಬಾಹುಳ್ಯದಲ್ಲಿ 'ಚಿಂತನ ಚೇತನ' 'ಸುಳ್ಳು ಸೃಷ್ಟಿಗಳು' ಹಾಗು 'ಮಣ್ಣು ಮುಗಿಲು' ಎದ್ದು ಕಾಣುತ್ತವೆ. 'ಸುಳ್ಳುಸೃಷ್ಟಿಗಳು' ಕೃತಿಯಲ್ಲಿ ವರ್ತಮಾನದ ಬದುಕಿನ ವೈರುಧ್ಯವನ್ನು ವಿಚಾರಗಳ ಅಮಲನ್ನು ಕುರುಡುಧಾವಂತಿಕೆಯನ್ನು ಕಂಡು ಮಂಥನ ಮಾಡಿ ಎದೆಯ ನುಡಿಗಳನ್ನು ಬಿಚ್ಚಿಡುವ, ಮನ-ಮೆದುಳನ್ನು ಚಿಂತನೆಗೀಡುಮಾಡುವ ದಿಟ್ಟ ಹಾಗು ದಟ್ಟ ತರುಣ ಚೈತನ್ಯ ಮೈದುಂಬಿ ಬಂದಿದೆ. ಪರಂಪರೆಯಲ್ಲಿ ಬಂದ ಕೆಲವಾರು ಅರ್ಥಹೀನ ಮೌಲ್ಯಗಳನ್ನು ಝುಂಕಿಸುವ ಎದೆಗಾರಿಕೆ ಇಲ್ಲಿ ಇದೆ. ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಆತ್ಮೀಯ ತುಡಿತವಿದೆ. ಮನುಜರನ್ನು ಪ್ರಶ್ನಿಸುವಂತೆಯೆ ದೇವರನ್ನು ಪ್ರಶ್ನಿಸುವ ಸವಾಲುಗಳಿವೆ. ಸಮಜಾಯಿಷಿಗಾಗಿ ಕೇಳುವ ನೈತಿಕ ಹುರುಡುಗಳಿವೆ. ಈ ಕೃತಿಯಲ್ಲಿ ಕಾಣುವ ಸಾಂಸ್ಕೃತಿಕ ಎಚ್ಚರದ, ವಿಕಾಸದ ಭಾವ, ಸಿಡಿಲುಗಳ ನಡುವೆ ಇಳಿವ ಮಾನವತೆಯ ಮೋಡಗಳ ಭರ್ಜರಿ ವರ್ಷಧಾರೆಯಂತೆ ಕಾಣುತ್ತವೆ. ವರ್ತಮಾನದ ಹೊಸ ಬೆಳೆಗೆ ಸುರಿವ ವರ್ಷಧಾರೆಯಂತೆ ಆಸೆಗಳನ್ನು ನಿರೀಕ್ಷೆಗಳನ್ನು ಮಂಡಿಸುತ್ತವೆ.

'ಮಣ್ಣುಮುಗಿಲು' ಕೃತಿಯಲ್ಲಿ ಹತ್ತು ವರ್ಷಗಳ ಪೀಠಾಧಿಕಾರದಲ್ಲಿ ಭಾವನೆಗೊಂಡ ಒಲವು ನಿಲುವುಗಳು, ಸಾಮಾಜಿಕ, ಸಾಂಘರ್ಷಿಕ ಸಂದರ್ಭಗಳ ಮಂಥನದಲ್ಲಿ ಮಿಗಿಲೆನಿಸಿ ಬಂದಿವೆ. ಜೀವನಕ್ಕೆ ಬೇಕಾದ ಹಾಡು, ಅರ್ಥಪೂರ್ಣ ಬದುಕು, ಶೀಲದ ವೈರುಧ್ಯ, ಅಂತರಂಗದ ಹೆಣಗಾಟ, ಬಾಳಿನನೇಯ್ಗೆ, ಒಳಗಿನ ತುಮುಲ,

ನಲಿಯಬೇಕಾದ ಜನ, ದೇವರೆನ್ನಿಸುವವನ ಚರ್ಯೆ, ಸತ್ತವರಿಗಿದ್ದ ಬದುಕಿನಾಸೆ, ಜಗತ್ತಿನ ವಾಸ್ತವಗಳು, ದಲಿತರೊಳಗಿನ ಅಂತರಂಗ, ಮಠದ ತೋರಿಕೆಗಳು, ಜೀವನದ ಬೆಸುಗೆ, ಹಾರೈಕೆಗಾಗಿ ಕಾತುರ, ಇವೆಲ್ಲದರ ಒಂದು ಒಳನೋಟದ ಮರ್ಮ ಕಾಣುತ್ತದೆ. ಐಡೆಂಟಿಟಿಯ-ಅಸ್ತಿತ್ವದ ಆತಂಕ, ಸಂಘರ್ಷದ ಸಂಕಟಕ್ಕೆ ಒಳಗಾಗುವ ಬದಲು ಮುಖಾಮುಖಿಯಾಗಿ ನಿಲ್ಲುವಲ್ಲಿ, ವಿಕಸಿತ ಹೆಜ್ಜೆಯ ದನಿಗಳು ಇಲ್ಲಿ ಕಾಣುತ್ತವೆ.

ಶ್ರೀಗಳವರ ಎಲ್ಲ ಕೃತಿಗಳನ್ನು ಪರಿಚಯಿಸಲು ಇಲ್ಲಿ ಅವಕಾಶವಿಲ್ಲ. ಸಂಕ್ಷಿಪ್ತ ಬರಹವಾಗಿಸಬೇಕಾದ ಸಮಯದ ಕಾರಣ ಸದ್ಯ ಎರಡು ಕೃತಿಗಳು ಅವರ ಜೀವನದರ್ಶನದ ಮುಖಪುಟವಾಗಿ ಕಂಡದ್ದರಿಂದ ಇಷ್ಟು ಮಾತ್ರ ಬರೆಯಲಾಗಿದೆ. ಅವರ ಸಾಹಿತ್ಯಕ ಮಣಿಹದ ಮುಖ್ಯಗುರಿ, ವಿಚಾರವಂತಿಕೆಯ ವೇದಿಕೆಯಲ್ಲಿ ಸಾಂಸ್ಕೃತಿಕ ಹಂಬಲಗಳ ನೇರವಾಣಿಯು ಘೋಷವಾಗುವಂತೆ ಇದೆ. ಅದೇ ಇರುವಂತಿಕೆ; ಜೀವಧ್ವನಿಯ, ಜೀವನಧ್ವನಿಯ ಇರುವಂತಿಕೆ. ಪೀಠದ ಸಾಹಿತ್ಯಕ್ಕೆ ಮಣಿಹಕ್ಕೆ ವೈಚಾರಿಕ ರೂವಾರಿಯಾಗಿ ಹದುಳಗೊಳ್ಳಲಿ ಎಂಬುದೇ ನಮ್ಮೆಲ್ಲರ ಸದಾಶಯ.

ಸಾಮಾಜಿಕ ಮಣಿಹ

ನುಡಿಗೆ ತಕ್ಕಂತೆ ನಡೆಯಾಗಿ ಜಾತಿ ಮತ ಭೇದವಿಲ್ಲದೆ ೫೦೦ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಉಚಿತ ಜ್ಞಾನಾನ್ನ ದಾಸೋಹವನ್ನು ಏರ್ಪಡಿಸಿದ್ದಾರೆ. ಸಂಸ್ಕಾರ ನೀಡಿ ದಲಿತ ಸಮುದಾಯಕ್ಕೆ ಸೇರಿದ ಅರ್ಚಕರನ್ನು ವೀರಭದ್ರಸ್ವಾಮಿ ಗುಡಿಗೆ ನೇಮಿಸಿ, ದಲಿತರನ್ನು ಗೌರವಿಸಲಾಗಿದೆ. ಪ್ರತಿಯೊಬ್ಬರೂ ಗರ್ಭಗುಡಿ ಪ್ರವೇಶಿಸಿ, ಮೂರ್ತಿಯನ್ನು ಮುಟ್ಟಿ ಪೂಜಿಸುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ದಾಸೋಹದ ಮನೆಯಲ್ಲಿ ದಲಿತ ಹಿಂದುಳಿದ ಸಮುದಾಯಕ್ಕೆ ಸೇರಿದವರು ಕೆಲಸ ನಿರ್ವಹಿಸುತ್ತಿದ್ದಾರೆ. ಶಿಕ್ಷಣ ಸಂಸ್ಥೆಗಳಲ್ಲಿ ಶೇ.೭೫ ರಷ್ಟು ಕೆಲಸಗಳನ್ನು ದಲಿತ-ಹಿಂದುಳಿದವರಿಗೆ ವಹಿಸಲಾಗಿದೆ. ಸಮಾನತೆ, ಸಾಮಾಜಿಕ ನ್ಯಾಯದ ಪ್ರಬಲ ಪ್ರತಿಪಾದಕರಾಗಿರುವ ಶ್ರೀಗಳು ನಾಡಿನಾದ್ಯಂತ ಸಂಚರಿಸಿ ಜನಜಾಗೃತಿ ಮಾಡುತ್ತಿದ್ದಾರೆ. ಒಂದೇ ಒಂದು ಜಾತಿ ಮಾನವಜಾತಿ; ಒಂದೇ ಒಂದು ಧರ್ಮ ಮಾನವಧರ್ಮ ಎಂಬ ಧ್ಯೇಯವಾಕ್ಯಕ್ಕೆ ಅನುಗುಣವಾಗಿ ಮಾನವೀಯತೆಯನ್ನು ಎತ್ತಿ ಹಿಡಿಯುತ್ತಿದ್ದಾರೆ. ಕರ್ನಾಟಕದ ಎಲ್ಲಾ ಜನಪರ, ಪ್ರಗತಿಪರ ಹೋರಾಟಗಳಿಗೆ ಸ್ಫೂರ್ತಿಯಾಗಿದ್ದಾರೆ. ಕಳೆದ ೧೩ ವರ್ಷಗಳಲ್ಲಿ ಪೀಠಕ್ಕೆ, ಸಮಾಜಕ್ಕೆ, ನಾಡಿಗೆ ನಿಸ್ವಾರ್ಥದಿಂದ ಸೇವೆ ಸಲ್ಲಿಸಿದ್ದಾರೆ. ೦

ಧರ್ಮಗುರು ಪೀಠ, ಶ್ರೀ ನಿಡುಮಾಮಿಡಿ ಮಹಾಸಂಸ್ಥಾನದಲ್ಲಿನ ವೀರಭದ್ರ ಶಿಲ್ಪಗಳು

ಈ ಪೀಠದಲ್ಲಿರುವ ಗವಿಯಲ್ಲಿ ಬೋರು ಬಂಡೆಯ ಮೇಲೆ ವೀರಭದ್ರ ಹಾಗು ಮಠದ ದೇಗುಲದಲ್ಲಿ ಮತ್ತು ಸ್ತಂಭಗಳಲ್ಲಿ ವೀರಭದ್ರ ಹಾಗು ಭದ್ರಕಾಳಿಯರ ಶಿಲ್ಪಗಳಿವೆ. ಈ ಸಂಸ್ಥಾನ ಮಠದ ಮುಖ್ಯ ದೇವತೆಗಳು ಚಂದ್ರಮೌಳೀಶ್ವರ, ಗುಂಡು ವೀರಭದ್ರ, ಕುಮಾರ ವೀರಭದ್ರ ಹಾಗು ಮಹಾವೃಷಭ ಶಿಲ್ಪ.

ಗುಂಡು ವೀರಭದ್ರ : ಗವಿಯೊಳಗಿನ ಬೋರು ಬಂಡೆಯ ಈ ಮೂರ್ತಿ ಅಸ್ಪಷ್ಟವೆಂದರೂ ಅದರ ಚಹರೆಗಳನ್ನು ಹೆಕ್ಕಬಹುದಾಗಿದೆ. ಆಸ್ತಿಕ ಮನಸ್ಸಿಗೆ ಇದು ಸ್ವಯಂಭೂ ವೀರಭದ್ರ. ಉದ್ಭವ ವೀರಭದ್ರ ಎನಿಸುವುದು ಸಾಮಾನ್ಯ. ಅಲಂಕರಣ ಹಾಗು ವಿಭಾಗಗಳು ಮೇಲುನೋಟಕ್ಕೆ ಕಾಣಿಸುವುದಿಲ್ಲ. ದಿಟ, ಸೂಕ್ಷ್ಮವಾಗಿ ಅವಲೋಕಿಸಿದರೆ ಇದು ದ್ವಿಭುಜ ಸ್ಥಾನಕ ವೀರಭದ್ರನ ಉಬ್ಬುಶಿಲ್ಪವಾಗಿದೆ. ಬಹು ಪ್ರಾಚೀನ ಎನಿಸುವಂತೆ ಭಾಗಗಳು ಸವೆದಂತೆ ಕಾಣುತ್ತವೆ. ಬಲಗೈಯನ್ನು ತುಸು ದೀರ್ಘ ವೃತ್ತಾಕಾರವಾಗಿ ಮಡಿಸಿ ದಪ್ಪವಿಲ್ಲದ ನೀಳಗತ್ತಿಯನ್ನು ಭುಜಕ್ಕೆ ಆನಿಸಿಕೊಂಡಿರುವುದು ಕಾಣಬರುತ್ತದೆ. ಎಡಗೈಯನ್ನು ತುಸು ಅಗಲ ಹಾಗು ತಪ್ಪನಾದ ತೊಡೆಮಟ್ಟದಿಂದ ಪಾದದ ಮಟ್ಟದವರೆಗೆ ಬಾಗಿರುವ ಥಾಲುವಿನ ಮೇಲೆ ಇಟ್ಟಿರುವುದು ಗಮನಕ್ಕೆ ಬರುತ್ತದೆ. ಬಲಭುಜ ಎಡಭುಜಕ್ಕಿಂತ ಸ್ವಲ್ಪ ಸಣ್ಣಗಾತ್ರದ್ದಾಗಿ ಹಾಗು ತುಸು ತಗ್ಗಿದಂತೆ ಕಾಣುವುದನ್ನು ಗಮನಿಸಿದರೆ ಈ ಮೂರ್ತಿ ದ್ವಿಭಂಗದಲ್ಲಿ ನಿಂತಿದ್ದಾನೆ ಎಂದು ಗೋಚರವಾಗುತ್ತದೆ. ನಡುಬಂಧವಿದ್ದು ಇಳಿಕುಚ್ಚು ಕೂಡ ಇರುವುದು ತಿಳಿಯುತ್ತದೆ. ಆದರೆ ಈ ಭಾಗ ತೀರ ಸವೆದಂತಿದ್ದು, ಕೆಲವು ಮಣಿ ರಚನೆಗಳನ್ನೂ ಬಂಧದ ಸುತ್ತುವರಿಯಲ್ಲಿ ಕಾಣಬಹುದಾದ್ದರಿಂದ, ಮೇಲಿನತಿಳಿವಿಗೆ ಸಾಧ್ಯವಾಗುತ್ತದೆ. ಎಡಭುಜದಿಂದ ರುಂಡಮಾಲೆ ಸೊಂಟದವರೆಗೆ ಇಳಿದು ಬಂದಿರುವುದೂ ಗೋಚರಕ್ಕೆ ಸಂಭಾವ್ಯವಿದೆ. ಬಲಗೈ ಕೆಳಗೆ ಮಂಡಿಪಾರ್ಶ್ವದಲ್ಲಿ ಇರುವ ಉಬ್ಬುಗೆತ್ತನೆ ನಿಖರವಾಗಿ ದಕ್ಷನದು ಎಂದು ಹೇಳಲು ಬಾರದಿದ್ದರೂ ಆ ಸೂಚನೆಯ ಸಾಧ್ಯತೆ ಇದೆ. ಇಲ್ಲಿ ಭದ್ರಕಾಳಿಯ ಶಿಲ್ಪದ ಪ್ರಶ್ನೆ ಇಲ್ಲ. ದೇವರ ಹೊಸಹಳ್ಳಿಯಲ್ಲಿ ದ್ವಿಭುಜ ವೀರಭದ್ರ ಶಿಲ್ಪ ವೀರಭದ್ರನ ಬಾಲ್ಯದ ರೂಪಿನದು ಎಂಬ ಪರಂಪರೆಯ ನಂಬುಗೆ ಇರುವಂತೆ ಇಲ್ಲಿ ಅನ್ವಯಿಸಿದರೆ ಭದ್ರಕಾಳಿ ಇರುವುದಾಗುವುದಿಲ್ಲ. ಈ ಸಂಸ್ಥಾನದ ಕುಮಾರ ವೀರಭದ್ರನಿಗೂ ಭದ್ರಕಾಳಿಯ ಸಹಯೋಗ ಶಿಲ್ಪವಿಲ್ಲ. (ಪೌರಾಣಿಕವಾಗಿ ವೀರಭದ್ರ ಜನಿಸಿದಾಗ ಪಾರ್ವತಿಯಿಂದ ಭದ್ರಕಾಳಿಯು ಸೃಷ್ಟಿಗೊಂಡು ಮದುವೆ ಮಾಡಿಸಿದ ಕತೆ ಕಾಲಾಂತರದಲ್ಲಿ ಸೃಷ್ಟಿಗೊಂಡ ಕತೆ. ಅದು ಬೇರೆವೊಂದು ಕಾವ್ಯ ಈರ್ವರು ಒಬ್ಬರಾದ

ಮೇಲೆ ಜನಿಸಿದ ಬಗ್ಗೆ ಹೇಳಿದೆ) ಹೀಗಾಗಿ ಇದು ಅರ್ಧನಾರೀಶ್ವರ ಮೂರ್ತಿಗೆ ಸಾದೃಶ್ಯವಾಗಿದೆ ಎಂಬ ಮಾತಿಗೆ ಬೆಂಬಲ ದೊರಕುವಂತಿಲ್ಲ. ಆದರೆ ಈ ದುಂಡು ಮೊಗದ ಮೂರ್ತಿಯು ಶಿರವು ಯತಿಗಳಂತೆ ಮುಂಡಿತವಾಗಿರುವುದು ಗಮನಾರ್ಹವಾಗಿದೆ. ಆದರೆ ಶಿಲ್ಪದ ಸವಕಳಿ ಹಾಗು ಪೀಠ ಇತಿಹಾಸವನ್ನು ಗಮನಿಸಿದರೆ ಈ ಶಿಲ್ಪದ ಕಾಲವು ೧೧ನೇ ಶತಮಾನದ್ದೆನ್ನಲು ಬಾಧಕವಿಲ್ಲ. ಜನಪದೀಯ ಆಚರಣೆಯಾಗಿ ಮಳೆಯಾಗದಿದ್ದ ಸಮಯದಲ್ಲಿ ೧೦೧ ಕೊಡ ನೀರನ್ನು ಈ ಗುಂಡು ವೀರಭದ್ರನ ಮೇಲೆ ಹಾಕಿ ಹರಕೆ ಕಟ್ಟಿಕೊಳ್ಳುವ, ಗೌರಿಹಬ್ಬ ಹಾಗು ನವರಾತ್ರಿಯಲ್ಲಿ ವೀಳ್ಯ ಸಲ್ಲಿಸುವ ಪದ್ಧತಿ ಇದ್ದ ಬಗ್ಗೆ ಜನಪದರು ಹೇಳುತ್ತಾರೆ.

ಕುಮಾರವೀರಭದ್ರ: ಪೀಠದೊಳಗಿನ ದೇಗುಲದಲ್ಲಿ ಸಾಂಪ್ರದಾಯಿಕ ವೀರಭದ್ರ ಲಕ್ಷಣಗಳನ್ನು ಹೊಂದಿದ ಸ್ಥಾನಕ ಟಗರುದಲೆಯ ದಕ್ಷನ ಸಹಿತನಾದ ಮೂರ್ತಿ ಇದಾಗಿದೆ. ಗಮನಾರ್ಹವಾದುದೆಂದರೆ, ತೊಡೆಯ ಮೇಲೆ ಇರುವ ಐದು ರುಂಡಗಳ ಮಾಲೆಯ ಶೈಲಿ, ಕರಂಡ ಮಕುಟ, ಅದಕ್ಕಿಂತ ಮುಖ್ಯವಾಗಿ ಎದ್ದು ಕಾಣುವ, ಹುರಿ ಮೀಸೆಯ ಶೈಲಿ, ಹಂಪೆಯ ಮತಂಗ ವೀರಭದ್ರನನ್ನು ಹೋಲುವುದಾಗಿದೆ. ಇವನು ಕುಮಾರ ವೀರಭದ್ರನಾದ ಕಾರಣ ಭದ್ರ ಕಾಳಿಯ ಸಹಯೋಗವಿಲ್ಲ. ಇವನಿರುವ ದೇಗುಲ ಭಾಗದಲ್ಲಿ, ಗರ್ಭಗೃಹ, ಸುಖನಾಸಿ, ನವರಂಗ ಮಂಟಪ, ಮುಖ ಮಂಟಪಗಳಿವೆ. ಮಂಟಪದ ಸ್ತಂಭಗಳು ಸಾಶ್ರಯ ಸ್ತಂಭಗಳಾಗಿವೆ. ಪೀಠದ ಪೂರ್ವ ಗುರುಗಳ ಶಿಲ್ಪಗಳು, ದೇವಶಿಲ್ಪಗಳು ದ್ವಿಭುಜ ಮತ್ತು ಚತುರ್ಭುಜ ವೀರಭದ್ರ ಶಿಲ್ಪಗಳು. ಭದ್ರಕಾಳಿಯ ವೀರಭದ್ರಾಯುಧ ಧಾರಣೆ ಸಹಿತವಾದ ಶಿಲ್ಪಗಳು ಕೆತ್ತನೆಗೊಂಡಿವೆ. ವಿಮಾನಗೋಪುರವು ದ್ರಾವಿಡ ಶೈಲಿಯದಾಗಿದೆ. ದೇವಾಲಯದಲ್ಲಿ ವೀರಭದ್ರ-ಭದ್ರಕಾಳಿಯವರ ಉತ್ಸವ ವಿಗ್ರಹಗಳೂ ಇವೆ. ಈ ವೀರಭದ್ರ, ವಿಜಯನಗರ ಶೈಲಿಯನ್ನು ಹೋಲುತ್ತಾನೆ. ಈ ಪೀಠಕ್ಕೆ ವಿಜಯನಗರದ ಸಂಬಂಧವು ಜ॥ ಕಾಶಿವಿಲಾಸ ಕ್ರಿಯಾಶಕ್ತಿ ಹಾಗು ಜ॥ ಚಂದ್ರಭೂಷಣದೇವ ಒಡೆಯರ ರಾಜಗುರುತ್ವದಿಂದಾಗಿ ಇರುವುದರಿಂದ ಜೀರ್ಣೋದ್ಧಾರ ಸಮಯದಲ್ಲಿ ವಿಜಯನಗರ ಶೈಲಿಯನ್ನು ಅಳವಡಿಸಿಕೊಂಡ ಶಿಲ್ಪಗಳು, ಗದ್ದುಗೆ ಮಂಟಪಗಳೂ ಇಲ್ಲಿವೆ.

ಇವುಗಳಲ್ಲಿ ಮುಖ್ಯವಾಗಿ ಸರ್ವಾಂಗಲಿಂಗ ಹಾಗು ಪೂರ್ವಾಚಾರ್ಯರ ಮೂರು ಗದ್ದುಗೆ ಮಂಟಪದ ಸ್ತಂಭದ ಮೇಲೆ ವಿಜಯನಗರದ ಆರಂಭದ ಕಾಲದ ಲಾಂಛನವಾಗಿದ್ದ ಬಾಕು, ಚಂದ್ರ, ಸೂರ್ಯರ ಸಂಯುಕ್ತ ಶಿಲ್ಪ ಬಡಾವಣೆ ಆಗಿರುವುದು ಗಮನಕ್ಕೆ ಬರುತ್ತದೆ. ಸರ್ವಾಂಗಲಿಂಗ ಶಿಲ್ಪ ಈಗಿರುವುದು ಮೊದಲಿನ ಶಿಲ್ಪ ಭಿನ್ನವಾದ ಮೇಲೆ ಕೆಲವು ದಶಕಗಳ ಹಿಂದೆ ಮತ್ತೆ ಮಾಡಿಸಿದ ಶಿಲ್ಪವಾಗಿದೆ. ಅದನ್ನು ಈ ಮಂಟಪದ ಮಧ್ಯ ಗದ್ದುಗೆಯ ಮೇಲೆ ಇಟ್ಟುಕೊಂಡು ಬರಲಾಗುತ್ತಿತ್ತು. ಅನಂತಪುರ ಜಿಲ್ಲಾ ಗೆಜೆಟಿಯರ್ ರೀತ್ಯಾ (ಪು. ೮೮೬) ಪೆನುಕೊಂಡೆಯನ್ನು

ಸ್ಥಾಪಿಸಿದವನು ಕಾಶೀವಿಲಾಸ ಕ್ರಿಯಾಶಕ್ತಿ ಆಗಿದ್ದಾನೆ. ಕ್ರಿ.ಶ. ೧೪೫೨ ಪೆನುಕೊಂಡೆಯ ಚೆನ್ನ ವೀರಭದ್ರ ದೇವರ ದೇಗುಲದ ಶಾಸನದಲ್ಲಿ ದೇಗುಲ ಬಾಗಿಲಗೋಪುರ ಮಾಡಿಸಿದ ಕುಮಾರ ಮಯಿಲಪ್ಪನು.

ಮೂಲಗುರು ಶ್ರೀ (ಪಂಡಿತಾರಾಧ್ಯ ಪ್ರಸಾದ) ಎಂದು ಹೇಳಿ, ಒಪ್ಪಹಾಕಿ ಶಾಸನದ ಕೊನೆಯಲ್ಲಿ ಸೂರ್ಯ ಚಂದ್ರ ಹಾಗು ಬಾಕುವಿನ ಶಿಲ್ಪವನ್ನು ಮಾತ್ರ ಕೆತ್ತಿಸಿದ್ದಾನೆ. ವಿಜಯನಗರದ ಇಮ್ಮಡಿ ಹರಿಹರನ ಹಾಗು ೧ನೇ ದೇವರಾಯನ ತಾಮ್ರದ ನಾಣ್ಯಗಳ ಮೇಲೆ ಬಸವ, ಚಂದ್ರ ಹಾಗು ಬಾಕುಗಳ ಚಿಹ್ನೆ ಮಾತ್ರ ಕಾಣಬರುವಲ್ಲಿ ಶಾಸನದ ಶಿಲ್ಪಗಳು, ಸದ್ಯದ ಮಂಟಪದಲ್ಲಿನ ತದನುಗುಣ ಶಿಲ್ಪಗಳು ವಿಜಯನಗರದರಸರಲ್ಲಿ ಕುಲಗುರುತ್ವ, ರಾಜಗುರುತ್ವದ ವಿಷಯವನ್ನು ಈ ಪೀಠಸಂಬಂಧಿಯಾಗಿ ತಿಳಿಸುವಂತಿದೆ. ಇಮ್ಮಡಿ ಹರಿಹರನ ಕಾಲದಲ್ಲೂ ಕಾಶೀವಿಲಾಸ ಕ್ರಿಯಾಶಕ್ತಿ ಬದುಕಿದ್ದುದು ಇತಿಹಾಸದಿಂದ ವ್ಯಕ್ತ. ಅಲ್ಲದೆ ಕಾಶೀವಿಲಾಸ ಕ್ರಿಯಾಶಕ್ತಿಯು (ಈ ಪೀಠದ ಜಗದ್ಗುರುವಾಗಿ) ವಿಜಯನಗರ ರಾಜಗುರುವಾಗಿದ್ದ ಬಗ್ಗೆ ಈಗಾಗಲೇ ತಿಳಿಸಿದೆ. ಹೀಗಾಗಿ ಗದ್ದುಗೆಯ ಸ್ತಂಭದ ಮೇಲೆ ಆರಂಭ ಕಾಲಕ್ಕೆ ಇದ್ದ ರಾಜಲಾಂಛನವನ್ನು ರಾಜಗುರುವಾಗಿದ್ದ ಕಾರಣ ಇಲ್ಲಿಯೂ ಬಳಸಿ ಅವನು ಲಿಂಗೈಕ್ಯನಾದ ಮೇಲೆ ಕೆತ್ತಿಸಿರಬಹುದೇ? ಗದ್ದುಗೆಯ ಮೇಲೆ ಸರ್ವಾಂಗಲಿಂಗ ವಿಡುತ್ತಿದ್ದ ಪರಂಪರೆಯನ್ನು ಗಮನಿಸಿದರೆ ಬಹುಶಃ ಈ ಗದ್ದುಗೆ ಕಾಶೀವಿಲಾಸ ಕ್ರಿಯಾಶಕ್ತಿಯದಾಗಿರಬಹುದೇ? ಎನಿಸುತ್ತದೆ. ಜೊತೆಗೆ ಈ ಗದ್ದುಗೆ ಮಂಟಪದ ಶಿಲ್ಪ, ಗೋಪುರ ವಿಜಯನಗರ ಶೈಲಿಯನ್ನು ಹೋಲುವುದು ಗಮನಾರ್ಹ. ಹೀಗಾಗಿ ಇಲ್ಲಿನ ವೀರಭದ್ರರುಗಳಿಗೂ ಐತಿಹಾಸಿಕ ಮಹತ್ವಗಳು ಜೊತೆಗೂಡಿ ಬಂದಿವೆ ಎನ್ನಬೇಕು. ಪೀಠದ ಆವರಣದಲ್ಲಿ ಹಿಂಬದಿ ಬಂಡೆಯ ಮೇಲೆ ಸುಂದರ ಉಮಾಮಹೇಶ್ವರನ ಉಬ್ಬು ಶಿಲ್ಪವಿದೆ. ಕೆಳಗೆ ವೀರಶಿಲ್ಪಗಳಿರುವಂತಿದೆ. ಪರಿಶೀಲಿಸಬೇಕಿದೆ.

೧೯ನೆಯ ಶತಮಾನದ ಕೊನೆಯವರೆಗೂ ಈ ವೀರಭದ್ರರಿಗೆ ತೇರು ಹಾಗು ಅಗ್ನಿಕೊಂಡೋತ್ಸವ ಕಲ್ಯಾಣೋತ್ಸವಗಳು ನಡೆಯುತ್ತಿದ್ದ ಬಗ್ಗೆ ತಿಳಿದುಬರುತ್ತದೆ. ರಥಸಪ್ತಮಿ ಹಬ್ಬವೂ ಇಲ್ಲಿ ನಿರಂತರವಾಗಿ ನಡೆದು ಬಂದಿದೆ

ಕ್ರಿ.ಶ. ೧೮೮೯ರ ಬಾಗೇಪಲ್ಲಿಯ ದಾನ ಶಾಸನದಲ್ಲಿ (ಎ.ಕ್.ಅ.ಸಂ. ೧೭ ಅನುಬಂಧ, ೧೯೬೮, ಕೋಲಾರ ಜಿಲ್ಲೆ, ಬಾಗೇಪಲ್ಲಿ ೯೭) ನಿಡುಮಾಮಿಡಿಯ ಮಠ ಹಾಗು ವೀರಭದ್ರ ಸ್ವಾಮಿಯ ಉಲ್ಲೇಖ ಬರುತ್ತದೆ. ಈ ವೀರಭದ್ರನ ಜನಪ್ರಿಯತೆ, ಭಕ್ತಿ ಗೌರವದ ಚಿತ್ರವೂ ದೊರಕುತ್ತದೆ.

೧. ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿ

೨. ವಾಹನ ಶಕೆ ೧೭೭೧ ಆನೆ ಸವುಮ್ಯ ಸಂ
೩. ಆಶ್ವಿಜ ಬ ೬ ಭಾನುವಾರಂ ಶ್ರೀಮನ್ ನಿ
೪. ಡುಮಾಮಿಡಿ ಸ್ವಾಮುಲವಾರಿ ಮಠಮೂಲೊ
೫. ಶ್ರೀ ವೀರಭದ್ರಸ್ವಾಮಿ ಸಂನ್ನಿಧಿಲೊ ಆ
೬. ಖಂಡ ದೀಪಾರಾಧನ ನಡಿ ಚೇಟಂದುಕು
೭. ಗೂಡೂರು ತಾಡಿಪರ್ತ್ತಿ ಕುಮಾರಡು
೮. ವೀರಂಣ ಯೀ ಶಿಲಾಗಾಣ ಚೇ ಯೀಂ
೯. ಚ್ಚಿ ಯಿಚ್ಚಿನ ಯೀ ಶಾವ ಯೀಶ್ವರಾರ್ಪಣಮು

ತೆಲುಗು ಭಾಷೆಯ ಈ ಶಾಸನದ ರೀತ್ಯಾ, ನಿಡುಮಾಮಿಡಿಯ ವೀರಭದ್ರ ಸ್ವಾಮಿಗೆ ಅಖಂಡ ದೀಪಾರಾಧನೆಗಾಗಿ ಗೂಡೂರಿನ ತಾಡಪರ್ತ್ತಿಯ ಕುಮಾರ ವೀರಣ್ಣನು ಎಣ್ಣೆ ಸರಬರಾಜಿಗಾಗಿ ಶಿಲಾ ಗಾಣವನ್ನು ಅರ್ಪಿಸಿದ ಸಂಗತಿ ಇದೆ.

ಗೂಳೂರು ಗ್ರಾಮದ ವೀರಭದ್ರ–ಭದ್ರಕಾಳಿ: ಈ ಗ್ರಾಮದ ವೀರಭದ್ರ ದೇಗುಲದಲ್ಲಿ, ವೀರಭದ್ರ, ಭದ್ರಕಾಳಿಯರ ಪಾದ ಶಿಲ್ಪ ಹಾಗು ಭದ್ರಕಾಳಿಯ ವಿಗ್ರಹಗಳು ಎಂದಿನ ಸಾಂಪ್ರದಾಯಿಕ ನಿರೂಪಣೆಯಿಂದ ಕೂಡಿವೆ. ವಿಶೇಷವಾಗಿ ಭದ್ರಕಾಳಿಯ ವಿಗ್ರಹದಲ್ಲಿ ಅಲಂಕರಣವು ಬಹಳ ಚೆಲುವಿನಿಂದ ಕೂಡಿದೆ; ಮಂಡಿ ಮಟ್ಟದಲ್ಲಿ ಹಾಗು ಮಂಡಿಯ ಕೆಳಗಣ ಕಾಲುಗಳ ಮೇಲೆ ಎರಡೆರೆಡು ರುಂಡಮಾಲೆಗಳಿರುವುದು ಗಮನಾರ್ಹ. ಈ ಗುಡಿಯಲಿ ಶಿರಸ್ತಮ್ಮ ವಿಗ್ರಹವೂ ಇದೆ. ಗುಡಿಯ ನವರಂಗ ಸ್ತಂಭಗಳಲ್ಲಿ ವೀರಭದ್ರ ಹಾಗು ಶಿವಗಣ ದೇವತೆಗಳ, ವ್ಯಾಳಿಗಳ ಉಬ್ಬುಶಿಲ್ಪಗಳಿದ್ದು ಸಾಶ್ರಯ ಸ್ತಂಭಗಳೆನಿಸಿವೆ. ದ್ರಾವಿಡ ಶೈಲಿಯ ವಿಮಾನ ಗೋಪುರವಿದೆ. ಈ ಗುಡಿಯ ಹಾದಿಯಲ್ಲಿ ಮಾರುತಿಯ ಶಿಲ್ಪವಿದೆ. ಕಾರ್ತಿಕದಲ್ಲಿ ವೀರಭದ್ರ ಭದ್ರಕಾಳಿಗೆ ದೀಪೋತ್ಸವ, ಪರದ ಆಚರಣೆ ಇದೆ. ಗುಡಿಯ ಹೊರಗೆ ಮಾರುತಿ ಬಂಡೆ ಶಿಲ್ಪದ ಫಲಕದ ವೇದಿಕೆಯ ಬಳಿ ಸುದೂರದಲ್ಲಿ ಶಿರಸ್ಸು ಮಾತ್ರವಿರುವ ಪ್ರಾಚೀನ ವಿಗ್ರಹವಿದೆ. ಒಂದು ವಿಜಯನಗರ ಕಾಲದ ಅಪ್ರಕಟಿತ ಶಾಸನವು ಗುಡಿಯ ಹೊಲದಲ್ಲಿ ಬಿದ್ದಿದೆ. ಈ ವೀರಭದ್ರ–ಭದ್ರಕಾಳಿಯವರಿಗೆ ಪೀಠದ ಶಿಷ್ಯರಾದ ಅಕ್ಕಂ ಹಾಗು ದುರ್ಗಂ ಮನೆತನದವರು ನಡೆದುಕೊಳ್ಳುತ್ತಾರೆ.

ಧರ್ಮಗುರು ಪೀಠ, ಶ್ರೀ ನಿಡುಮಾಮಿಡಿ ಮಹಾಸಂಸ್ಥಾನದ ಶಾಖಮಠಗಳಲ್ಲಿಯ ಶಿಲ್ಪ ಕಲೆ ಹಾಗು ಇತಿಹಾಸ ೧೮ನೇ ಶತಮಾನದ ಶ್ರೀ ಮಲ್ಲಕವಿ ಪ್ರಣಿತಂಚೈನ ಪಂಡಿತಾರಾಧ್ಯ ಚರಿತ್ರಮು ಕೃತಿಯ ಅನುಬಂಧದಲ್ಲಿ ಪಟ್ಟಿ ಮಾಡಿರುವ ಶಾಖಾ ಮಠಗಳ ಹೆಸರುಗಳಲ್ಲಿ ಆಂಧ್ರ, ಕರ್ನಾಟಕ, ಹಾಗು ತಮಿಳುನಾಡಿನ ಶಾಖಾ ಮಠಗಳ ಹೆಸರೂ ಸೇರಿದೆ.

ನಿಡಿಮಾಮಿಡಿ ವೀರಭದ್ರ : ಪೀಠದ ಶಾಖಾಮಠವಾದ, ಆಂಧ್ರಪ್ರದೇಶದಲ್ಲಿನ ಪೆನುಗೊಂಡೆಗೆ ಏಳು ಮೈಲು ದೂರದಲ್ಲಿರುವ ನಿಡಿಮಾಮಿಡಿ ಗ್ರಾಮದಲ್ಲಿರುವ ಮಠದಲ್ಲಿನ ದೇಗುಲದಲ್ಲಿ ಸುಂದರ ವೀರಶೈಲಿಯ ವೀರಭದ್ರ ಶಿಲ್ಪವಿದೆ. ಕರಂಡ ಮಕುಟನಾದ ಈ ಮೂರ್ತಿಗೆ ವೀರಭದ್ರ ಶಿಲ್ಪದ ಎಂದಿನ ನಿರೂಪಣೆ ಇದೆ. ಬಿಲ್ಲುಬಾಣ ಹಿಂಗೈಗಳಲ್ಲಿವೆ. ಮೂರ್ತಿಗೆ ಮೀಸೆ ಇಲ್ಲ. ಕೋರೆ ಹಲ್ಲಿಲ್ಲ. ಇಲ್ಲಿರುವ ಸ್ಥಾನಕ ಪ್ರಣಾಮ ಭಂಗಿಯ ದಕ್ಷನ ಶಿರದಲ್ಲಿ ಕೋಡುಗಳು ಕಿವಿಗೆ ಅಂಟಿಕೊಂಡಂತಿರುವುದು ಗಮನಾರ್ಹ.

ಈ ಶಿಲ್ಪವಲ್ಲದೆ ಭದ್ರಕಾಳಿಯ ಅಸೀನ ಶಿಲ್ಪಗಳು, ಆಟಿಕೆ ಸ್ವರೂಪದ ಕಿರು ಶಿಲಾಫಲಕದ ಮೇಲಿನ ಆಟಿಕೆ ವೀರಭದ್ರ ಶಿಲ್ಪ ಬಹಳ ಆಕರ್ಷಕವಾಗಿದೆ. ತ್ರಿಶೂಲ ಹಾಗು ಡಮರು ಹಿಂಗೈಗಳಲ್ಲಿ ಇವೆ. ಆದರೆ ರುಂಡ ಮಾಲೆ ಕಾಣಬರದು. ಡಾಲು ಒಂದು ರೀತಿ ಗದಾದಂಡದಂತಿದೆ. ಬಲ ಸೊಂಟದ ಮಟ್ಟದಲ್ಲಿ ಸ್ಥಾನಿಕ ಭಂಗಿಯಲ್ಲಿ ಬಾಗಿಸಿದ ಮಂಡಿಯ ಅರೆ ಸ್ಥಾನಕ ಪ್ರಣಾಮ ಭಂಗಿಯಲ್ಲಿ ದಕ್ಷನಿರುವುದು ವಿಶೇಷ. ಬಹುಶಃ ಶಿಲ್ಪದಲ್ಲಿ ಜಾಗ ಸಾಲದೆ ಹೀಗೆ ಮೂಡಿಸಿದ್ದರೂ ಅದು ವಿಶೇಷವೆ. ಇನ್ನು ಸೊಂಟದಲ್ಲಿ ಮಣಿಸರದಂತೆ ಕಾಣುವ ಉಡಿಬಂಧವಿದೆ. ಕಾಲುಗಳ ನಡುವೆ ಸಾಲು ದುಂಡುಮಣಿಗಳ ಗೋಪುರಾಕೃತಿ ಕಾಣುತ್ತದೆ. ರುಂಡಮಾಲೆಯನ್ನು ಮೇಲೆ ಬಿಡಿಸಲಾಗದೆ ಕಾಲಿನ ಅಡಿಭಾಗದವರೆಗೆ ಈ ರೂಪದಲ್ಲಿ ಬಿಡಿಸಿರಬಹುದೇ? ಎನಿಸುತ್ತದೆ.

ದೇಗುಲದಲ್ಲಿ ಉತ್ತರಮುಖಿಯಾಗಿ ವೀರಭದ್ರನಿದ್ದು, ಪೂರ್ವಬದಿಗಿರುವ ಮೊದಲಿನ ನವರಂಗದಲ್ಲಿ ಸಾಶ್ರಯ ಸ್ತಂಭಗಳಿದ್ದು, ಅವುಗಳಲ್ಲಿ ದ್ವಿಭುಜ ವೀರಭದ್ರ ಶಿಲ್ಪಗಳಿವೆ ಹಾಗು ಕಿರೀಟ, ಮಕುಟ, ಕರಂಡ ಮಕುಟರಹಿತವಾದ ಶಿರದಿಂದ ಇಬ್ಬದಿಯಲ್ಲಿ ಇಳಿಬಿದ್ದ ಜಟೆಯು ಮಾತ್ರ ಕಾಣುತ್ತ ಇಲ್ಲಿರುವ ಒಂದು ದ್ವಿಭುಜ ವೀರಭದ್ರ ಶಿಲ್ಪ ಗುಂಡು ವೀರಭದ್ರನನ್ನು ನೆನಪಿಗೆ ತರುತ್ತದೆ.

ನಿಡಿಮಾಮಿಡಿ ಶ್ರೀ ವೀರಭದ್ರ ಸೇವಾ ಸಮಿತಿಯವರು ವಾರ್ಷಿಕವಾಗಿ ತಪ್ಪದೆ ಈ ವೀರಭದ್ರ ದೇವರಿಗೆ ಕಾರ್ತಿಕ ಮೂರನೇ ಭಾನುವಾರದಂದು ಕಾರ್ತಿಕ ದೀಪೋತ್ಸವ, ಸೊಮವಾರದಂದು ರುದ್ರಾಭಿಷೇಕ, ಎಲೆಪೂಜೆಯನ್ನು ನಡೆಸಿ ದಾಸೋಹವಿಡುತ್ತಾರೆ. ಸೋಮವಾರ ಬೆಳಿಗ್ಗೆ ಭದ್ರಕಾಳಿ, ಚೌಡೇಶ್ವರಿ ಮೂರ್ತಿಗಳಿಗೆ (ಅಂಗಳದಲ್ಲಿಯೇ) ಕಳಶ ಪೂಜೆಯನ್ನು ಸೀರೆ ಕುಪ್ಪುಸವಿಟ್ಟು ಹೆಂಗಳೆಯರು ದಂಪತಿ ಸಮೇತರಾಗಿ ಸಲ್ಲಿಸುತ್ತಾರೆ.

ಧರ್ಮಾವರಂ ಮಠ: ಆಂಧ್ರದಲ್ಲಿರುವ ಈ ಶಾಖಾ ಮಠವು ಐತಿಹಾಸಿಕವಾಗಿ ಪ್ರಾಮುಖ್ಯವನ್ನು ಪಡೆದಿದ್ದು ಗೂಳೂರು ಪೀಠದ ಶಾಖಾ ಮಠವೆನಿಸಿದೆ. ವಿಜಯನಗರ

ಸ್ಥಾಪಕರಾದ ಸಂಗಮ ವಂಶದರಸರ ರಾಜಗುರು ಹಾಗು ಕುಲಗುರುವಾದ ಕಾಶೀವಿಲಾಸ ಕ್ರಿಯಾಶಕ್ತಿದೇವ ಒಡೆಯನು ವಿಜಯನಗರ ಸಾಮ್ರಾಜ್ಯದ ಉಗಮಕ್ಕೆ ಕಾರಣವಾಗಿ, ಆ ಒಡೆಯರ ಸಾಮ್ರಾಜ್ಯ ಸ್ಥಾಪನೆಗೆ ನೆರವಾಗಿದ್ದವನಾಗಿದ್ದಾನೆ. ಆ ಕ್ರಿಯಾಶಕ್ತಿದೇವ ಒಡೆಯನು ಶ್ರೀ ನಿಡುಮಾಮಿಡಿ ಪೀಠದ ಮುಖ್ಯಸ್ಥನಾಗಿ ಜಗದ್ಗುರುವೆನಿಸಿದ್ದವ. ಅವನು ತನ್ನ ತಾಯಿಯ ಹೆಸರಿನಲ್ಲಿ ಧರ್ಮಾವರಂ ಕೆರೆಯನ್ನು ಕಟ್ಟಿಸಿದ. ಆನೆಗೊಂದಿಯಲ್ಲಿದ್ದ ಚನ್ನಕೇಶವನ ವಿಗ್ರಹಗಳನ್ನು ಸಂರಕ್ಷಿಸಿ, ಧರ್ಮಾವರಂನಲ್ಲಿ ಅವುಗಳನ್ನು ಪ್ರತಿಷ್ಠಾಪಿಸಿದ. (ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಪರಿಷ್ಕೃತ ಗೆಜೆಟಿಯರ್‌ನಲ್ಲಿ ಇದು ಉಕ್ತವಾಗಿದೆ).

ಧರ್ಮಪುರಿಯಲ್ಲಿನ ಶಾಖಾ ಮಠ, ಲಕ್ಷ್ಮೀ ಚನ್ನಕೇಶವ ದೇಗುಲ ಹಾಗು ಧರ್ಮಾಂಬುಧಿ ಕೆರೆ ಈ ಮೂರು ನೆಲೆ ಬಿಂದುಗಳು ತ್ರಿಭುಜಾಕಾರ ವ್ಯೂಹವನ್ನು ಹೊಂದಿದ್ದು ಸನಿಹ ಸನಿಹಕ್ಕಿದ್ದು ಗಮನಾರ್ಹವಾಗಿದೆ. ಇದು ತ್ರಿಯಂಬಕ (ತ್ರಿನೇತ್ರ: ಮೂವರು ಮಾತೆಯರ ಪುತ್ರ, ಎಂದು ತನ್ನ ರಾಜಗುರು ಒಪ್ಪಹಾಕುತ್ತಿದ್ದ ರಾಜಗುರು ಕ್ರಿಯಾಶಕ್ತಿದೇವ ಒಡೆಯನಿಗೆ ತ್ರೈಕೂಟ (ಮುಕ್ಕೂಟ) ಸಂಬಂಧವು ಅವನ ತಾತ್ವಿಕ ದರ್ಶನದ ಸಂಕೇತವಾಗಿ ಕಾಣುತ್ತದೆ.

ಧರ್ಮಾವರಂನ ಸ್ಥಾಪಕ ಒಡೆಯರ್ (ಬುಕ್ಕನ ಕ್ರಿ.ಶ. ೧೩೬೪ ರ ಪ್ರಧಾನಿ) ಎಂಬ ಮಾತು ಸ್ಥಳೀಯ ಕೆಲವು ಹಿರಿಯರಲ್ಲಿ ಪ್ರಚಲಿತವಿದ್ದರೂ ಅದು ಅವನು ಧರ್ಮಾವರಂ ಅನ್ನು ಅಭಿವೃದ್ಧಿಗೊಳಿಸಿರಬಹುದಾದ ಕಾರಣ ಹಾಗೆ ಆರೋಪವಾಗಿರಬೇಕು. ಹಂಡೆ ಹನುಮಪ್ಪನಾಯಕನಿಗೆ ಅಳಿಯ ರಾಮರಾಯ ನಿಂದ ದೊರೆತ ಸಕಾಲಿಕ ನೆರವಿನ ಕಾರಣ ಕೊಟ್ಟ ಐದು ಗ್ರಾಮಗಳಲ್ಲಿ ಧರ್ಮಾವರಂ ಕೂಡ ಒಂದಾಗಿತ್ತು ಎಂದು ಬುಕ್ಕರಾಯ ಚರಿತ್ರೆ ತಿಳಿಸುತ್ತದೆ. ವಿಜಯನಗರ ಕೊನೆಗಾಲದ ವೇಳೆಯಲ್ಲಿ ಧರ್ಮಾವರಂ ಒಂದು ಗ್ರಾಮವಾಗಿತ್ತು ಎಂಬ ಸೂಚನೆ ದೊರೆಯುತ್ತದೆ. ಕ್ರಿಯಾಶಕ್ತಿದೇವ ಒಡೆಯನ ಕಾಲದಲ್ಲಿ ರೂಪುಗೊಂಡ ಧರ್ಮಪುರಿ ಮಠದ ಅಸ್ತಿತ್ವದಲ್ಲಿತ್ತು. ಹಾಗು ಈ ಗುರು ಮಠದ ಮೂಲಕ ವಿಜಯನಗರದ ರಾಮರಾಯನ ಗಮನಕ್ಕೆ ನಾಯಕನು ಬಂದ ಕಾರಣ (ಹಂಡೆ ಹನುಮಪ್ಪ ನಾಯಕನಿಗೆ ಈ ಗುರುಮಠದ ಮೇಲಣ ಭಕ್ತಿಯೂ ಅಪರಿಮಿತ, ಆರ ಆಶಯವೂ ಸ್ಥಾನಗೌರವವೂ ಈ ದಾನದಲ್ಲಿ ಅಡಕವಾದಂತಿದೆ. ಇವನ ವಂಶಿಕ ಪವಾಡಪ್ಪ ನಾಯಕನ ಗದ್ದುಗೆಯೂ (ಕೊತ್ತಚೆರುವಿನಲ್ಲಿದ್ದು) ವಂಶಿಕ ಭಕ್ತಿ ಗೌರವ ಶ್ರೀ ನಿಡುಮಾಮಿಡಿ ಪೀಠಕ್ಕೆ ಸಲ್ಲುತ್ತಿದ್ದ ಮುಂದಿನ ಸಾಕ್ಷಿಯಾಗಿ ಈ ಚರ್ಯೆಗಳು ಕಾಣಬರುವಂತಿದೆ.

ಅಳಿಯ ರಾಮರಾಯನ ಕಾಲಕ್ಕೆ ಬೊಕ್ಕಸಂ ತಿಮ್ಮಯ್ಯನು ಮಹಾತ್ವಾಕಾಂಕ್ಷೆಯ ಪಿತೂರಿ ಮಾಡಿದ್ದ. ಆಗ ರಾಮರಾಯನ ಪ್ರಾರ್ಥನೆಯ ಮೇರೆಗೆ ಪೀಠಾಧ್ಯಕ್ಷರಾದ

ರಾಜಗುರು ಇಮ್ಮಡಿ ಕರಿಬಸವಸ್ವಾಮಿಗಳು (ಕ್ರಿ.ಶ.೧೫೪೨-೬೫) ಪೀಠದ ನೆಚ್ಚಿನ ಶಿಷ್ಯ ವೀರನಾದ ಹಂಡೇವಂಶದ ಮೂಲಪುರುಷ ಬಾಲದ ಹನುಮಪ್ಪ ನಾಯಕನನ್ನು ನೆರವಿಗೆ ಕಳುಹಿಸಿದರು. ಅವನು ಬಿಜಾಪುರದ ಮುತ್ತಗಿ ಎಂಬ ಗ್ರಾಮದ ಗೌಡಿಕೆಯಲ್ಲಿದ್ದ ಇವನನ್ನು ಗುರುಗಳು ಕಳುಹಿಸಲು ತಿಮ್ಮಯ್ಯನ ಸಂಚು ವಿಫಲವಾಗಿ ರಾಮರಾಯನಿಗೆ ವಿಜಯನಗರ ಉಳಿಯಿತು. ಕ್ರಿ.ಶ. ೧೫೫೫-೬೦ರ ಸಮಯದಲ್ಲಿ ನಡೆದ ಈ ಘಟನೆಯ ನಂತರ ನಾಯಕನು ಬಾದುಷಾಹವನ್ನು ಕೈಸೆರೆ ಮಾಡಿ ರಾಮರಾಯನಿಗೆ ಒಪ್ಪಿಸಿದ. ಈ ಶೌರ್ಯದ ಕಾರಣವಾಗಿಯೇ ಧರ್ಮಾವರಂ ಗ್ರಾಮವನ್ನು ಉಂಬಳಿಯಾಗಿ ನೀಡಿದ. ಇವನ ಶೌರ್ಯದ ಬಗ್ಗೆ ತಿಳಿದುಕೊಂಡ ಬಿಜಾಪುರದ ಆದಿಲ್‌ಷಹನು ಸೈನ್ಯದಲ್ಲಿ ವಜೀರನನ್ನಾಗಿ (ಕ್ರಿ.ಶ. ೧೬೨೫-೫೬) ಮಾಡಿದ ಬಗ್ಗೆ ಕರ್ನಾಟಕದ ಕೈಫಿಯತ್ತುಗಳು ತಿಳಿಸುತ್ತದೆ. ಬುಕ್ಕರಾಯ ಚರಿತ್ರೆಯು ಹನುಮಪ್ಪ ನಾಯಕನ ಮೊಮ್ಮಗ ಮಲಕಪ್ಪ ನಾಯಕನಿಗೆ ಇದನ್ನು ಅನ್ವಯಿಸಿ ಹೇಳಿದೆ. ಆದರೆ ಪೀಠದ ಚರಿತ್ರೆಯ ರೀತ್ಯಾ ಆದಿಲ್‌ಶಹನ ಸೈನ್ಯದಲ್ಲಿ ವಜೀರನಾಗಿದ್ದ ಸಮಯದಲ್ಲಿ ಪೀಠದ ಜಗದ್ಗುರು ಕರಿಬಸವ ದೇಶಿಕೇಂದ್ರ ಶಿವಾಚಾರ್ಯರನ್ನು ಗೌರವಿಸಲು ಬರಮಾಡಿಕೊಂಡ. ಅಲ್ಲಿ ನಡೆದ ವಾದದಲ್ಲಿ ಶ್ರೀ ಕರಿಬಸವ ದೇಶಿಕೇಂದ್ರರು ಗೆದ್ದು 'ಹಿಂದೂ ಫಕೀರ್' ಎಂಬ ಬಿರುದು ಪಡೆದರು. ಇದಲ್ಲದೆ ಹಂಡೆ ಹನುಮಪ್ಪನ ಮೊಮ್ಮಗ ೧ನೇ ಪವಾಡಪ್ಪನಾಯಕನ ಕುಷ್ಠರೋಗವನ್ನು ವೈದ್ಯಕೀಯ ಶುಶ್ರೂಷೆ ಮಾಡಿ ವಾಸಿಮಾಡಿದ ಬಗ್ಗೆ ಪುಲ್ಲಕವಿಯ ಪಂಡಿತಾರಾಧ್ಯ ಚರಿತ್ರಮು (ಆಶ್ವಾಸ ೫, ಪದ್ಮ ೬೮) ಕೃತಿಯಲ್ಲಿ ಬರುತ್ತದೆ. ಈ ಹಿನ್ನೆಲೆಗಳನ್ನು ಗಮನಿಸಿದರೆ ಹಂಡೆ ಹನುಮಪ್ಪನಾಯಕ ಬಹುದೀರ್ಘ ಕಾಲ ಬದುಕಿದ್ದು ಬಹುಶಃ ಆದಿಲ್‌ಷಹನ ಸೈನ್ಯಕ್ಕೆ ಭೀಷ್ಮನಂತೆ ಹಿರಿಯನಾಗಿ ಮಾರ್ಗದರ್ಶಕನಾಗಿದ್ದಿರುವಂತಿದೆ. ಶೌರ್ಯದ ಸಂದರ್ಭವು ಮಲಕಪ್ಪನಾಯಕನಿಗಿಂತ ಹಂಡೆ ಹನುಮಪ್ಪನಾಯಕನಿಗೆ ಹೆಚ್ಚು ಅನ್ವಯವಾಗಿ ತನ್ನ ಗುರುಗಳನ್ನು ಆಸ್ಥಾನಕ್ಕೆ ಕರೆಸಿ ಗೌರವಿಸುವ ವ್ಯವಸ್ಥೆ ಮಾಡಿದುದೂ ಪೋಷಕ ಸಾಕ್ಷವಾಗಿ ಕಾಣುತ್ತದೆ. ಅಲ್ಲದೆ ೧ನೇ ಪವಾಡಪ್ಪನಾಯಕನ ಮೊಮ್ಮಗನಾದ ಇಮ್ಮಡಿ ಪವಾಡಪ್ಪನಾಯಕನ ಸೈನ್ಯದಲ್ಲಿದ್ದ ಸಂದರ್ಭದಲ್ಲಿಯೂ ಪೀಠವು ಸೈನಿಕ ನೆರವು ನೀಡಿದ ಸಂಗತಿ ಇದೆ. ಅವನ ಗದ್ದುಗೆ ಪೀಠದ ಆಂಧ್ರದಲ್ಲಿನ ಶಾಖಾ ಮಠವಾದ ಕೊತ್ತಚೆರುವು ನಲ್ಲಿದೆ; ಪೀಠದ ಗುರುಗಳ ವೈದ್ಯಕೀಯ ಪಾಂಡಿತ್ಯ ಹಾಗು ವೈಧ್ಯಕೀಯ ಶುಶ್ರೂಷಾ ವ್ಯವಸ್ಥೆಯೂ ಇಲ್ಲಿ ಗಮನಕ್ಕೆ ಬರುತ್ತದೆ. ಹೀಗಾಗಿ ಧರ್ಮಾವರಂ ಊರು ಹಾಗು ಶಾಖಾಮಠದ ಅಭಿವೃದ್ಧಿಗೆ ಗುರುಭಕ್ತ ಹಂದೆ ಹನುಮಪ್ಪನಾಯಕರೂ ಪಾಲುದಾರನಾಗಿ ಕಾಣಬರುತ್ತಾನೆ. ಅಂದರೆ ಪೀಠದ ಗುರುಗಳು ಹಾಗು ರಾಜವಂಶಿಕ ಭಕ್ತರು ಧರ್ಮಾವರದ ಸಾಂಸ್ಕೃತಿಕ ಹಾಗು ರಾಜಕೀಯ ಶಕ್ತಿಯಾಗಿ ಕಾಣಿಸಿಕೊಂಡಿರುವುದು ಗಮನಾರ್ಹ.

ಧರ್ಮಾವರ ಮಠವು ಆಯುತಾಕಾರದ ಕಟ್ಟಡವಾಗಿದ್ದು, ಪ್ರಸ್ತರ ಭಾಗದ ಮೇಲೆ ಇಂಡೋ ಇಸ್ಲಾಮಿಕ್ (ಆದಿಲ್ ಶಾಹಿ) ಶೈಲಿಯ ಗಾರೆಯ ಕೋನಾಕಾರದ ಸಾಲು ಕೆತ್ತನೆಗಳನ್ನು ಹೊಂದಿದೆ. ಇದರಲ್ಲಿ ಎರಡು ಗರ್ಭಗೃಹ ಗದ್ದುಗೆಗಳಿದ್ದು, ನಡುವೆ ತೆರೆದ ಅಂತರಕೋಷ್ಠವಿದೆ. ಈ ಗದ್ದುಗೆ ಮಂಟಪಕ್ಕೆ ಹೊಂದಿಕೊಂಡಂತೆ ಗೋಡೆಗೆ ಅಂಟಿದ ಪತ್ತಿ ಕಂಬಗಳಿವೆ. ಮುಂಬದಿಯಲ್ಲಿ ಬ್ರಹ್ಮಕಾಂತ ಶೈಲಿಯ (ಚತುರ್ಮುಖ) ನಾಲ್ಕು ಶಿಲಾ ಸ್ತಂಭಗಳನ್ನು ಹೊಂದಿ ಮುಖಮಂಟಪದಂತಹ ರಚನೆ ಆಗಿದೆ. ಈ ಮುಖಮಂಟಪ ಹಾಗು ವಿಸ್ತರಿಸಿದ ತೆರೆದ ಮಂಟಪದ ದ್ವಾರದಲ್ಲಿನ ಸ್ತಂಭಗಳು ವಿಜಯನಗರ ಶೈಲಿಯ ದ್ವಾರಸ್ತಂಭಗಳಂತಿವೆ.

ಗದ್ದುಗೆ ಮಂಟಪದ ಪ್ರಸ್ತರ ಭಾಗದ ಮೇಲೆ ನಾಲ್ದಿಸೆಯ ಕೋನ ಅಂಚುಗಳಲ್ಲಿ ದ್ವಯದೇಹಿ ಏಕಮುಖ ಬಸವನ ಗಾರೆಯಚ್ಚಿನ ಶಿಲ್ಪಗಳಿವೆ. ಬಲಗಡೆ ಇರುವ ಗದ್ದುಗೆ ಗರ್ಭಗೃಹದಲ್ಲಿರುವ ನಂದಿಯನ್ನು ೧೯೫೦ರ ಸುಮಾರಿನಲ್ಲಿ ಸ್ಥಾಪಿಸಲಾಯಿತೆನ್ನುವುದಿದ್ದರೂ, ಬಹುಶಃ ಈ ನೆಲೆಯಲ್ಲಿ ಈ ಶಾಖಾ ಮಠದಲ್ಲಿಯೇ ಹಿಂದಿನ ಗುರುಗಳೊಬ್ಬರ ಗದ್ದುಗೆಯೊಂದು ಇದ್ದಿರಲು ಸಾಕು. ಈ ಬಸವಣ್ಣ ಗದ್ದುಗೆಯ ಎಡಬದಿಗೆ ಮುಂಬದಿ ತೆರೆದ ಅಂತರಕೋಷ್ಠವಿದೆ. ಅನಂತರದ ಗದ್ದುಗೆ ಗರ್ಭಗೃಹದಲ್ಲಿ ಮಾನವ ಶಿರದ ಹೋಲಿಕೆಯ ಲಿಂಗದಾಕೃತಿಯು ಇದ್ದು ಅದನ್ನು ಸದ್ಯಕ್ಕೆ ಕಾಲಭೈರವನೆಂದು ಕರೆಯುತ್ತಾರೆ. ಆ ಲಿಂಗರೂಪವು ಗದ್ದುಗೆಯಿಂದ ಶಿಲಾ ಪೀಠದ ಮೇಲಿದೆ. ಅದಕ್ಕೆ ಮಾನವನಿಗಿರುವಂತೆ ಕಣ್ಣು, ಮೀಸೆ, ತುಟಿ, ಕಿವಿಯನ್ನೆಲ್ಲ ಬಿಡಿಸಲಾಗಿದೆ. ವಾಸ್ತವದಲ್ಲಿ ಮೆಲ್ನೋಟಕ್ಕೆ ಅದೊಂದು ನೀಳ ಬಾಣಲಿಂಗದ ಸ್ವರೂಪದಲ್ಲಿದೆ. ಸೂಕ್ಷ್ಮವಾಗಿ ಗಮನಿಸಿದರೆ ಕೇಶಮಂಡನದ ಗುರುಶಿರವೆಂಬಂತೆ ಭಾವವನ್ನು ತಂದುಕೊಡುತ್ತದೆ. ಅಂದರೆ ಈ ಶಾಖಾ ಮಠದಲ್ಲಿದ್ದ ಪ್ರಸಿದ್ಧ ಗುರುಗಳೊಬ್ಬರ ಗದ್ದುಗೆಯಾಗಿದ್ದು ಅವರ ಶಿರಸೂಚಕ ಪ್ರತಿಮೆ ಆಗಿದ್ದಿರಬಹುದೇ ಎನಿಸುತ್ತದೆ. ಕಾಲಭೈರವೇಶ್ವರ ಲಿಂಗ ಎಂದು ಇದು ಕರೆಸಿ ಕೊಳ್ಳುತ್ತಿರುವಲ್ಲಿ ಅದು, ಈ ಮಠಕ್ಕೆ ತಾಂತ್ರಿಕ ಪದ್ಧತಿಯೂ ಅಳವಡಿಸಿದುದ್ದರ ಹಾಗು ಕ್ರಿಯಾಶಕ್ತಿ ಪ್ರತಿಷ್ಠಾಪಿತ ವಿಜಯನಗರ ಕಾಲದ ಲಿಂಗವಾಗಿದ್ದಿರಬಹುದೆ? ಎನಿಸುತ್ತದೆ. ಕಾರಣ ಕ್ರಿಯಾಶಕ್ತಿಯು ಶಿವಶ್ರೀಚಕ್ರ ತ್ರಿಯಂಬಕ ಆರಾಧನೆಯ ಹಿನ್ನೆಲೆಯುಳ್ಳವನಾಗಿದ್ದುದೂ ಶಾಸನ ಹಾಗು ಶಿಲ್ಪ ಮೂಲಗಳಿಂದ ತಿಳಿದುಬರುತ್ತದೆ. ಅವನ ಒಪ್ಪವೂ ತ್ರಿಯಂಬಕ ಎಂದಿದ್ದುದೂ ಶಾಸನೋಕ್ತ.

ಮೂರು ಪಟ್ಟಿಕೆಯ ಘಟ್ಟಕ (prism) ಸ್ವರೂಪದ ಮೂರು ಮುಖದ ಶಿರವನ್ನು ಗೋಳಾಕಾರದ ಭಾಗವಾಗಿ ಪಡೆದ ಲಿಂಗವನ್ನು 'ಸರ್ವಾಲಿಂಗ' ಎಂದು ಕರೆಯಲಾಗುತ್ತದೆ. ಆ ಶಿರಭಾಗದಲ್ಲಿ ೩೬ ಕಿರು ಲಿಂಗದ ಬಾಣಭಾಗ ಮಾತ್ರ ಇದ್ದು, ಮುಮ್ಮೈಯಲ್ಲಿ ಪದ್ಮದಳಾವೃತ ಆವರಣ, ಶಿವಲಿಂಗದ ತೆಳು

ಉಬ್ಬುಶಿಲ್ಪಗಳನ್ನೂ ಹೊಂದಿದ್ದು, ಸರ್ವಾಂಗಲಿಂಗವು ತಾಂತ್ರಿಕ ಶೈಲಿಯನ್ನು ಹೊಂದಿರುವಂಥದ್ದಾಗಿದೆ.

ತಾಂತ್ರಿಕ ದೃಷ್ಟಿಯಿಂದ ಇದನ್ನು ಶಿವ ಶ್ರೀಚಕ್ರ ಅರ್ಥಾತ್ 'ಶಿವಶಕ್ತಿಚಕ್ರ' ವೆಂದು ಪರಿಭಾವಿಸಬಹುದು. ಇದನ್ನು ರೂಪಿಸಿದವನು ಕಾಶೀವಿಲಾಸ ಕ್ರಿಯಾಶಕ್ತಿ ಎನ್ನಲಾಗಿದೆ. ವಿರೂಪಾಕ್ಷ ಪಂಡಿತನು ವೀರಶೈವ ಸಿದ್ಧಾಂತವನ್ನು ಹಂಪಿಯಲ್ಲಿ ಶಿಷ್ಯರಿಗೆ, ಭಕ್ತರಿಗೆ ಬೋಧಿಸಲು ಈ ಶಿಲ್ಪ ಮಾದರಿಯನ್ನು ಬಳಸುತ್ತಿದ್ದನಂತೆ. ಶ್ರೀ ನಿಡುಮಾಮಿಡಿ ಪೀಠವು ಈ ಸರ್ವಾಂಗಲಿಂಗ ಶಿಲ್ಪವನ್ನು ಪಾರಂಪರಿಕವಾಗಿ ಹೊಂದಿತ್ತು. ಹಳೆಯದು ಭಗ್ನವಾಗಲಾಗಿ, ೧೯೬೪ ರಲ್ಲಿ ಡಾ. ಶ್ರೀ ಜಚನಿ ಅವರು ಕೊಪ್ಪಳದ ಸಂಗಪ್ಪ ಶೆಟ್ಟರ ದಾನನಿಧಿಯಿಂದ ಹೊಸ ಶಿಲ್ಪವನ್ನು ಮಾಡಿಸಿದರು. ಈಗ ಈ ಶಿಲ್ಪವು ಡಾ. ಶ್ರೀ ಜಚನಿ ಅವರ ಗದ್ದುಗೆಯ ಮೇಲೆ ಪ್ರತಿಷ್ಠಾಪಿತಗೊಂಡಿದೆ. ವೀರಶೈವವನ್ನು ತಾಂತ್ರಿಕ ವೈದಿಕವೆನ್ನುವುದುಂಟು. ಈ ಪರಂಪರೆಯನ್ನು ಕಾಶೀವಿಲಾಸ ಕ್ರಿಯಾಶಕ್ತಿಯು ಧರ್ಮಾವರಂನಲ್ಲಿಯೂ ಬೆಳೆಸಿದುದು ಅವನು ನಡೆಸಿದ ಮಣಿಹದಿಂದ ತಿಳಿಯುತ್ತದೆ. ಇದಕ್ಕೆ ಪೂರಕವೆಂಬಂತೆ ಧರ್ಮಾವರಂನಲ್ಲಿಯ ಧರ್ಮಾಂಬುಧಿ ಕೆರೆಯ ದಂಡೆಯ ಮೇಲೆ ಕಾಶಿವಿಶ್ವೇಶ್ವರ (ಲಿಂಗ) ದೇಗುಲವಿದ್ದು ಗರ್ಭಗೃಹದ ಆ ಲಿಂಗದ ಮುಂದೆ ಶಿವ-ಶ್ರೀಚಕ್ರ ದ ಘನಕೀರ್ತಿಯು ಪ್ರತಿಷ್ಠಾನವಾಗಿರುವುದು ಕಾಣಬರುತ್ತದೆ. ಕಾಶಿವಿಲಾಸ ಕ್ರಿಯಾಶಕ್ತಿಯು ತಾಯಿಯ ಹೆಸರಿನಲ್ಲಿ ಧರ್ಮಾಂಬುದಿ ಕೆರೆಯನ್ನು ಕಟ್ಟಿಸಿದನೆಂದು ಆಂಧ್ರದ ಅನಂತಪುರ ಗೆಜೆಟಿಯರ್ ತಿಳಿಸುತ್ತದೆ.

ಈ ಶಿವಾಲಯದ ಶಿವಲಿಂಗವು ಒಂದು ಮುಷ್ಟಿಗಾತ್ರದಷ್ಟಿದೆ. ಇದರ ಮುಂದಿರುವ ಶ್ರೀಚಕ್ರ (ಶಿವಶ್ರೀಚಕ್ರ)ವನ್ನು ಶಿವ ಶ್ರೀಚಕ್ರವೆನ್ನುವುದಾಗಿದೆ. ಶ್ರೀಚಕ್ರದಲ್ಲಿ ನಾಲ್ಕು ಶಿವಚಕ್ರಗಳು, ಐದು ಶಕ್ತಿಚಕ್ರಗಳು ಸಂಯುಕ್ತಗೊಂಡಿವೆ. ನಾಲ್ಕು ಶಿವಚಕ್ರಗಳಲ್ಲಿ ನಾಲ್ಕು ತ್ರಿಭುಜಗಳಿದ್ದು, ಅವುಗಳ ಮೇಲ್ಮುಖಿಗಳನ್ನು ಶ್ರೀಕಂಠರು ಎನ್ನುತ್ತಾರೆ; ಐದು ಶಕ್ತಿಚಕ್ರಗಳನ್ನು ವೃತ್ತದೊಳಗೆ ಅಡಕಮಾಡಿ ಅವನ್ನು ಶಿವಯುವತಿ ಎನ್ನುತ್ತಾರೆ. ಶಿವನನ್ನು ಬಿಂದುವಿನಿಂದ ಸೂಚಿಸಿದರೆ ಶಕ್ತಿಯನ್ನು ತ್ರಿಭುಜದಿಂದ ಸಂಕೇತಿಸುತ್ತಾರೆ. ಶ್ರೀಚಕ್ರದ ಮಧ್ಯಬಿಂದುವನ್ನು ಸರ್ವಾನಂದಮಯ ಶ್ರೀಲಲಿತಾಂಬಿಕೆಯ ಸಂಜ್ಞೆ ಎನ್ನುವುದುಂಟು. ಅಂದರೆ ಶಿವ-ಶಕ್ತಿಯರಲ್ಲಿ ಅವಿಭಾಜ್ಯ ಸಂಬಂಧದ ಸಂಕೇತವಿದಾಗಿರುವಂತೆ ಕಾಣುತ್ತದೆ. ಯತ್ರ ಜೀವ ತತ್ರ ಶಿವ ಎಂಬಂತೆ ಯತ್ರ ಶಿವ ತತ್ರ ಶಿವೆ ಎನ್ನುವಂತಾಗುತ್ತದೆ; ಹಾಗು ಯತ್ರ ಜೀವ ತತ್ರ ಶಿವೆ ಎಂಬ ಮಾತು ಆಗ ಸಿದ್ಧಿಸುತ್ತದೆ. ಇಡೀ ಸಾಂಕೇತಿಕ ಸಾವಯುವ ಅಳವಡಿಕೆಯನ್ನೇ, ಸಂಗಮವನ್ನೇ, ಪಾರ್ವತಿ ಪರಮೇಶ್ವರ ಎಂದು ಪರಿಗಣಿಸಲಾಗುತ್ತದೆ. ಶ್ರೀಚಕ್ರ ಮತ್ತು ಮಂತ್ರದ ಸಂಯುಕ್ತಾರೋಪವನ್ನು ಅಸ್ತಿತ್ವದ ಐಕ್ಯಾನುಸಂಧಾನಮಾಡಿ,

ಪೂಜಿಸಲಾಗುತ್ತದೆ. ಅದಾಗಿ ಶ್ಲೋಕವು ಇಂತಿದೆ.

ಚತುರ್ಭಿಶ್ಶಿವ ಚಕ್ರೈಶೇಷ ಪಂಚಭಿ:
ನವಚಕ್ರ ಇಶೇಷ ಸಂಸಿದ್ಧಂ ಶ್ರೀಚಕ್ರಮ್ ಶಿವಯೋರ್‌ರ್ಪುರ್:

ಶಕ್ತಿಸಹಿತನಾದ ಶಿವನಿಗೆ ಮಾತ್ರ ಭಕ್ತಿ ಗೌರವ ಮೀಸಲು, ಲಿಂಗದ ಪರಿಕಲ್ಪನೆಯಲ್ಲಿಯೇ ಇದು ಅಡಗಿದೆ. ಅಂತೇ ಇದು ಅರ್ಧನಾರೀಶ್ವರ ಪ್ರತಿಷ್ಠ ಆಧ್ಯಾತ್ಮಿಕ ಹಾಗು ಸೈದ್ಧಾಂತಿಕ ನೆಲಯಲ್ಲಿ ಶಿವ ಮತ್ತು ಶಕ್ತಿಯರ ಸಾವಯುವ ಸಂಯುಕ್ತ ಪ್ರತೀಕವೇ ಶ್ರೀಚಕ್ರವಾಗಿದೆ. ಈ ಹಿನ್ನೆಲೆಯಲ್ಲಿ ಮುಮ್ಮುಖದಲ್ಲಿ ಕಮಲಗಳ ತೆಳು ಉಬ್ಬುಶಿಲ್ಪಗಳನ್ನು ಹೊಂದಿ, ಶಿರಭಾಗದಲ್ಲಿ ೩೬ ಗೋಳ ಸ್ವರೂಪದ ಲಿಂಗಾಕೃತಿಗಳನ್ನು ಹೊಂದಿರುವ ಸರ್ವಾಲಿಂಗವು ತೌಲನಿಕವಾಗಿ ಗಮನಕ್ಕೆ ಬರುತ್ತದೆ. ಒಂದು ರೀತಿಯಲ್ಲಿ ಮುಮ್ಮುಖ ಶ್ರೀಚಕ್ರ ಶಿವಲಿಂಗ ಎಂದರೂ ನಡೆದೀತು. ಈ ಸರ್ವಾಂಗಲಿಂಗವು ಸೈದ್ಧಾಂತಿಕ ಉತ್ಸೇಧವಾಗಿ ಕಾಶೀವಿಲಾಸ ಕ್ರಿಯಾಶಕ್ತಿಯೊಡನೆ ಸಂಬಂಧಗೊಂಡಿದೆ. ಹೀಗಾಗಿ ಕಾಶೀವಿಲಾಸ ಕ್ರಿಯಾಶಕ್ತಿಯೆ ಕಾಶಿವಿಶ್ವೇಶ್ವರ ಲಿಂಗವನ್ನು ಸ್ಥಾಪಿಸಿ, ಅದರ ಮುಂದೆ ಶಿವ-ಶ್ರೀಚಕ್ರವನ್ನು ಪ್ರತಿಷ್ಠಾಪಿಸಿದಂತೆ ಕಾಣುತ್ತದೆ. ವಿಶಾಲವಾದ ಧರ್ಮಾಂಬುಧಿ ಕೆರೆಯನ್ನು ಕಟ್ಟಿಸಿ ಅದಕ್ಕೆ ೭ ಜಲವಿಸರ್ಜನ ಭಾಗಗಳನ್ನು (ಏಳು ಕೋಡಿ= ಏಳುಮರವೆಗಳು) ಹೊಂದಿಸಿದೆ. ಸುತ್ತ ಈ ಕೆರೆಗೆ ನಾಲ್ಕು ಜಲಾನಯನ ಪ್ರದೇಶಗಳಿದ್ದು ಅನೇಕ ಬೆಟ್ಟಗುಡ್ಡಗಳಿಂದ ಕೂಡಿದೆ. ಈ ಏಳು ನೋಡಿ ಜಲಮಾತೃಕಾ ಸಂಕೇತವೆಂದರೆ ಸಪ್ತಮಾತೃಕೆಯರ ಸಂಬಂಧ ಸಂಗಮವಾಗುವಂತಿದೆ. ರುದ್ರಕನ್ನಿಕೆಯರಾಗಿ ಶಿವ ಶ್ರೀ ಚಕ್ರನಿಷ್ಠಾ ಮಾತೃಮರ್ಯಾದೆ ಇಲ್ಲಿ ಕಾಣುವಂತಾಗುತ್ತದೆ.

ನಿಡುಮಾಮಿಡಿ ಮಠ, ಕೊತ್ತಚೆರುವು (ಹೊರಮಠ):

ಪೀಠಾಧ್ಯಕ್ಷರುಗಳಾದ ಮರಿಕರಿಬಸವರಾಜ ದೇಶಿಕೇಂದ್ರರ (ಕ್ರಿ.ಶ.೧೮೧೫-೧೮೩೫) ಮತ್ತು ಇಮ್ಮಡಿ ಕರಿಬಸವೇಂದ್ರರ (ಕ್ರಿ.ಸ.೧೮೩೫-೯೯) ಜೀವನ ಚರಿತ್ರೆಯನ್ನು ಬರೆದಿರುವ ೧೯ನೇ (ಕ್ರಿ.ಶ.೧೯೦೦) ಶತಮಾನದ ಅಪ್ಪಪ್ಪ ಕವಿಯು ಕೊತ್ತಚೆರುವು ಸ್ಥಳದವನು. ತೆಲುಗು ಚಂಪೂ ಛಂದಸ್ಸಿನಲ್ಲಿ, ಪಂಡಿತಾರಾಧ್ಯ ಚರಿತ್ರೆಯನ್ನು ಹಿಂದೆ ಬರೆದಂಥ ಕೃತಿಗಳ ಆಧಾರದ ಮೇಲೆ ಬರೆದಿದ್ದಾನೆ. ಅವನು ಕೆಲವು ನಾಟಕಗಳನ್ನು ಬರೆದಿದ್ದಾನೆ. ಅವನು ಪರಾಕು ಹೇಳುವ ಭಟರಾಜು ಸಂಪ್ರದಾಯಕ್ಕೆ (ವಂಶಕ್ಕೆ) ಸೇರಿದವನೆನ್ನಲಾಗಿದೆ. ಅವನ ಕಾಲಮಾನವನ್ನು ಪರಿಗಣಿಸಿದರೆ ಇಮ್ಮಡಿ ಕರಿಬಸವೇಂದ್ರ ಜಗದ್ಗುರುಗಳ ಶಿಷ್ಯವರ್ಗದಲ್ಲಿದ್ದವನೆಂದು ವಿದಿತವಾಗುತ್ತದೆ. ಬಹುಶಃ ಇಮ್ಮಡಿ ಕರಿಬಸವೇಂದ್ರರ ಆದೇಶಕ್ಕನುಗುಣವಾಗಿ ಪುಲ್ಲಕವಿಯ ಕೃತಿಯನ್ನು ಪರಿಷ್ಕರಿಸಿ ಅದನ್ನು ಪುಲ್ಲಕವಿ ಪ್ರನಿತಂಚೈನ ಪಂಡಿತಾರಾಧ್ಯ

ಚರಿತ್ರಮು ಎಂದು ಹೆಸರಿಸಿದನೆನ್ನಾಲಾಗಿದೆ. ಆದರೆ ಮಲ್ಲಕವಿಯು ಕಾವ್ಯಶಕ್ತಿ ಮೇಲ್ಮಟ್ಟದ್ದು ಎಂಬುದು ಅವನ ಮೂಲ ಕೃತಿಯಿಂದ ವಿದಿತವಾಗುತ್ತದೆ. ಸಾಹಿತ್ಯಿಕ ಆಶ್ರಯದಾತವಾದ ಕೊತ್ತಚೆರುವು ಮಠವು ಹಂಡೆ ಪಾಳೆಯಗಾರರ ಕಾಲದಲ್ಲಿ ಐತಿಹಾಸಿಕ ಪ್ರಾಮುಖ್ಯದ ನೆಲೆಯಾಗಿದ್ದುದು ಕಾಣಬರುತ್ತದೆ. ರಾಜಗುರು ಶ್ರೀ ಕರಿಬಸವೇಂದ್ರ ಜಗದ್ಗುರುಗಳು (ಕ್ರಿ.ಶ.೧೭೩೧-೫೦) ಹಂಡೆವಂಶದ ಪಾಳೆಗಾರರಿಗೆ ಸಂದಿಗ್ಧ ಸಂದರ್ಭದಲ್ಲಿ ನೆರವಾದುದೇ ಅದಕ್ಕೆ ಕಾರಣವಾಗಿದೆ. ವಿಶೇಷತಃ ಹಂಡೆಪ್ರಸನ್ನ ನಾಯಕ (ಕ್ರಿ.ಶ.೧೬೯೦-೧೭೨೦) ಸೋದರ ಇಮ್ಮಡಿ ಪವಾಡಪ್ಪ ನಾಯಕನು ಕಡಪಾದ ನವಾಬನಿಂದ ಸೆರೆಯಿಡಿಯಲ್ಪಟ್ಟಾಗ ಪೀಠದ ಕರಿಬಸವೇಂದ್ರ ಸ್ವಾಮಿಗಳು ಶ್ರೀ ನಿಡುಮಾಮಿಡಿ ಪೀಠದ ಅಧ್ಯಕ್ಷರಾಗಿದ್ದರು, (ಕ್ರಿ.ಶ. ೧೭೩೧-೫೦) ಅವನನ್ನು ಸೆರೆಯಿಂದ ಬಿಡಿಸಲು ನೆರವಾದರು. ಪವಾಡಪ್ಪನಾಯಕನು ಕ್ರಿ.ಶ.೧೭೩೭ರಲ್ಲಿ ತೀರಿಕೊಳ್ಳಲಾಗಿ ಅವನ ಇಚ್ಚೆಯಂತೆ ಕೊತ್ತಚೆರುವಿನ ಮಠದಲ್ಲಿ ಅವನ ಗದ್ದುಗೆ ಮಾಡಲಾಯಿತು. ಇಂದು ಅವಶೇಷಗಳು ಮಾತ್ರ ಉಳಿದಿವೆ. ಈ ಪವಾಡಪ್ಪನಾಯಕನಿಗೆ ಪೀಠವು ಕೊಟ್ಟ ನೆರವು ಹಾಗು ಸ್ಥಾಪಿಸಿದ ಅವನ ಅಸ್ತಿತ್ವ ಕುರಿತ ಕೈಫಿಯತ್ತು, ಬುಕ್ಕರಾಯನ ಚರಿತ್ರೆಯ ವಿವರವನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು. ಡಾ.ಎಸ್.ಸಿ.ಪಾಟೀಲರು ಸಂಪಾದಿಸಿದ ಕೃತಿಯಿಂದ ಹೆಕ್ಕಿದ ಕೆಲವು ಸಾಲುಗಳಿವು;

ಪವಾಡಪ್ಪನಾಯಕ ಕ್ರಿ.ಶ. ೧೭೨೦ ರಿಂದ ರಾಜ್ಯ ಪರಿಪಾಲನೆ ಮಾಡತೊಡಗಿದ ಕಡಪ ನವಾಬನ ಫೌಜುದಾರರಾದ ಸರದಾರಖಾನ್, ಅಲ್ಲಿಖಾನ್, ಮಹಮದ್ ಖಾನ್ ಅವರುಗಳು ಖಂಡಿಹಣವನ್ನು ನವಾಬರ ಪರವಾಗಿ ಕೇಳಲು ಬಂದಿರುವಂತೆ ನಟಿಸಿ ಅನಂತಪುರಕ್ಕೆ ಅರ್ಧಕೋಸು ದೂರದ ಜೂಟೂರು ಹಳ್ಳದ ದಿಬ್ಬೆಯಲ್ಲಿ ಡೇರಾ ಹಾಕಿ ನಿಂತರು. ಪವಾಡಪ್ಪ ವಿಷಯ ತಿಳಿದು ತನ್ನ ಬಳಿಯಲ್ಲಿದ್ದಾ ಕಡಪೆ ಮಾಯಣಾವರ ವಕೀಲ ರಾಮಾಜಿಯ ಮೂಲಕ ಕಾಣಿಕೆ ಕಳುಹಿಸಿದ. ರಾಮಾಜಿಯು ಕುತಂತ್ರ ರಾಯಭಾರ ಮಾಡಿ; ಪವಾಡಪ್ಪನಾಯಕನಲ್ಲಿ ರಕ್ಷಣಾ ಬಲವಿಲ್ಲ. ಹಣಕ್ಕೆ ತಗಾದೆ ಮಾಡಿ; ಕೊಡದಿದ್ದರೆ ರಾಜ್ಯ ಸ್ವಾಧೀನವಾಗುತ್ತದೆ. ನಾಯಕನ ದರುಶನ ಪಡೆದು ಹೀಗೆಲ್ಲಾ ಮಾಡಿ ಎಂದು ಹೇಳಿದ. ಪವಾಡಪ್ಪ ನಾಯಕನಲ್ಲಿ ಬಂದು ಸರದಾರರನ್ನು ಮರ್ಯಾದಿಕೊಟ್ಟು ಕರೆಕಳುಹಿಸಲು ಹೇಳಿದ. ಅದರಂತೆ ವ್ಯವಸ್ಥೆ ಆಗಿ ಪವಾಡಪ್ಪನಾಯಕ ಬಳಿ ಖಂಡಿ ಹಣ ಕೇಳಿದರು. ಕೊದಡಿದ್ದರೆ ಕಡಪೆ ನವಾಬರ ಸನ್ನಿಧಾನಕ್ಕೆ ಬರಬೇಕು ಎಂದರು. ಪವಾಡಪ್ಪನಾಯಕ ಖಂಡಿ ಹಣ ಕೊಡುವುದಕ್ಕೆ ಯಿಲ್ಲಾ ನವಾಬು ಸಾಹೇಬರವರ ಸನದ್ದು ಇದ್ದರೆ ಸಿರಸಾವಹಿಸಿ ನಿಮ್ಮ ಸಂಗಡ ಬರುತ್ತೇನೆ ಎಂದೆ. ಆಗ ಸರದಾರರು ನಾವು ಬಂದದ್ದು ಸಾಲದೆ? ಸನದು ಬೇಕೆ? ನಮ್ಮ ಸಂಗಡ ಬರಲೇಬೇಡ ನಮ್ಮ ನಾಲ್ಕು ಸಂವತ್ಸರಗಳಲ್ಲಿ

ವುಂಟಾದ ಖಂಡಿಣಿ ಕೊಡಾಬೇಕಾದ ಹಣ ಕೊಟ್ಟು ಯಿಲ್ಲಿಂದ ಯೇಳಬೇಕೆ? ಹೊರ್ತು ಬಗರು ಯೇಳಕೂಡದು ಯಂತ ಮೊಸಲೆ ಮಾಡಿ ಹಾಕಿ ಬಹಳ ಸಂಕಟ ಪಡಿಸಿ. ಅಂನಕ್ಕೆ ನೀರಿಗೆ ಸಹಾವಳಗೆ ಕಳುಹಿಸಲಿಲ್ಲ.

ಯಿಷ್ಟು ತೊಂದರೆ ಕೊಟ್ಟ ವರತಮಾನವನ್ನು ಹೊಸಕೆರೆ ಮಠದಲ್ಲಿಯಿರುವ ನಿಡುಮಾಮಿಡಿ ಸ್ವಾಮಿಯವರು ಕೇಳಿ ಅಲ್ಲಿಯಿಂದ ಬುಕ್ಕಪಟ್ಟಣಕ್ಕೆ ಸಮೀಪ ಹೊಸಕೆರೆಯೊಳಗೆ ಯಿದ್ದ ಮೂವತ್ತು ಜನರನ್ನು ತೆಗೆದುಕೊಂಡು ಅನಂತಪುರಕ್ಕೆ ಬಂದು ದೊರೆಯವರ ಗೃಹಕ್ಕೆ ಪಶ್ಚಿಮ ಭಾಗದಲ್ಲಿರುವ ತಂಮ ಮಠದೊಳಗೆ ಯಿಳಿದು ಯೀ ದೊರೆಯವರ ಭಾವಮೈದುನ ಚನ್ನಬಸಪ್ಪನನ್ನು ಕರೆಶಿಕೊಂಡು ಯೀ ಎರಡು ಸಂಸ್ಥಾನವು ಮುಳುಗಿಸುವುದಕ್ಕೆ ರಾಮಾಜಿ ಮಾಡಿದ ಕೃತ್ಯವೆಂದು ಯಾವುದೇ ವರ್ತಮಾನವು ತಿಳಿಯಮಾಡಿ ದೊರೆಯವರನ್ನು ತೆಗೆದುಕೊಂಡು ಹೋಗುವುದಕ್ಕೆ ಪ್ರಯತ್ನಪಟ್ಟು ಯಿರುತ್ತಾರೆ. ನಾವು ಯಿದನ್ನು ತಪ್ಪಿಸಲಿಕ್ಕೆ ವುಪಾಯ ಮಾಡಬೇಕೆಂದು ಯೋಚಿಸಿ ಚಂನಬಸಪ್ಪನನ್ನು ದಿಡ್ಡಿಬಾಗಿಲ ಹೊರಗೆಯಿರುವ ಹುವ್ವಿನ ತೋಟದೊಳಗೆ ಶಿವಪೂಜೆಗೆ ಹೂವುಗಳ ನಿಮಿತ್ಯವೆಂದು ಸಂಗಡ ಕರಕೊಂಡು ಹೋಗಿ ಗ್ರಾಮದೊಳಗೆ ಯಿದ್ದ ಸೇರಿದ್ದ ಜನಗಳು ಶಿಂಗರಾಯನ ತಿಮ್ಮಂಯ್ಯ ಗುಂಡಪ್ಪ ಚಿಕ್ಕ ಚನಂಯ್ಯ ಕಂಚೇಟಿ ಪಾಪಂಯ್ಯ ಯೀ ಬುಕ್ಕರಾಯಸಮುದ್ರದೊಳಗೆ ಇದ್ದ ಯಿದ್ದಲ ನಂದಯ್ಯ ಕಲ್ ಕರಣಿಶೆಟ್ಟಿಪೇರೆಯ್ಯ ಯಿವರು ಮುಂತಾದ ಬಲಾಢ್ಯರನ್ನು ಕರೆತರಿಸಿ ಸಂಸ್ಥಾನ ಮುಳುಗುವ ಯೋಗ ಬಂದಿರುತ್ತದೆ ದೊರೆಯವರನ್ನು ಅನ್ನಕ್ಕೆ ನೀರಿಗೆ ಬಿಡದೆ ಯಿಕ್ಕಟ್ಟು ಪಡಿಸಿದ್ದಾರೆ.

ನಾವು ಯಿಷ್ಟು ಇದ್ದು ಯೀ ಪ್ರಕಾರ ದೊರೆಯವರು ಶ್ರಮ ಪಡುವುದು ಕಣಿಂದ ನೋಡುತ್ತಾ ಯಿರುವುದು ಧರ್ಮವಲ್ಲವೆಂದು ಹೇಳಲಾಗಿ ಅವರು ನಾವು ಮನುಷ್ಯ ಮಾತ್ರದವರು ನಮ್ಮಿಂದಾ ಆಗಬೇಕಾದ್ದು ಯೇನು ಯಿದೆ ಕೋಟೆ ಬಾಗಲುಗಳು ಯರಡು ಅವರ ಸ್ವಾಧೀನವಾಗಿ ಯಿದೆ. ನಾವು ಹಳಬರೆಂದು ಕೋಟೆಯ ವೊಳಯಕ್ಕೆ ಹೋಗಬಿಡರು ಸರದಾರರು ಕೋಟೆಯೊಳಗೆ ಬರುವ ವೇಳೆ ಹತ್ತುಮಂದಿ ಸಂಗಡ ಬಂದರು ಅಮೇಲೆ ಪೌಜು ಹತ್ತಿರ ಬಂದು ಗೇರಾಯಿಸಿತು. ನಾವು ಯೇನಾದರು ಬಲತ್ಕಾರ ಮಾಡಿದ್ದರೆ ಅವರು ಪಟಾಣರು ಅವರುಗಳ ಕೈಗೆ ನಮ್ಮ ಧಣಿ ಸಿಕ್ಕಿರುವಾಗ ಅವರನ್ನು ಯೇನು ಬಂಧನ ಪಡಿಸುತ್ತಾರೆ. ಆದ್ದರಿಂದ ಸಂಶಯಿ ಸುತ್ತಾಟ ಯಿದ್ದೇವೆ ಯೆಂದು ಹೇಳಿದರು. ನೀವು ಯಾವ ಯೋಚನೆಯಾದರೂ ಮಾಡಿ ಧಣಿಯವರನ್ನು ರಾಜಗೃಹಕ್ಕೆ ಕರೆದುಕೊಂಡರೆ ಮುಂದೆ ನಮ್ಮ ಕೈಯಲ್ಲಿ ಆದಷ್ಟು ಸಾಹಸ ನಾವುಗಳು ಶಿರಸಾವಹಿಸಿ ನಡೆಸೇವು ಎಂದು ಹೇಳಿ ಮಾತು ಕೊಟ್ಟಿದ್ದರಿಂದಾ. ಯೀ ಸ್ವಾಮಿಗಳವರು ಚಂನಬಸಪ್ಪ (ಇಬ್ಬರು) ಅವರ ಸಂಗಡ ಹೇಳಿದ ಯೋಚನೆ ಯೇನೆಂದರೆ ದಿಡ್ಡಿಬಾಗಿಲುವರೆಗೆ

ಅವರ ಸ್ವತಂತ್ರ ವಿಲ್ಲ ನಮ್ಮ ಸ್ವಂತ ಜೀತಗಾರು ಹುಲ್ಲ ಕೊಯ್ದು ದನಗಳಿಗೆ ರಾಜಗೃಹಗಳಿಗೆ ಕಟ್ಟಿಕೊಂಡು ಹೋಗುವವರಂತೆ ಅದರಲ್ಲಿ ಹತ್ಯಾರುಗಳ ತರುತ್ತಾಯಿರುತ್ತಾರೆ. ನೀವು ಸಾಗಿ ಹೋಗಿ ಆಯುಧಗಳಿಂದಾ ನಮ್ಮ ಹೊಳದ ಕಣದಿಂದ ಬಂದ ಹಾಗೆ ನಿಮ್ಮ ಆಯುಧಗಳ ಹುಲ್ಲಿನ ಹೊರೆಗಳಲ್ಲಿ ಕಟ್ಟಿಕೊಂಡು ನಂಮ ವಕ್ಕಲುಗಾರರ ಸಂಗಡಕೂಡಿ ನಿತ್ಯ ಹತ್ತು ಯಿಪ್ಪತ್ತು ಜನಗಳು ಆಯುಧಗಳಿಂದ ನಂಬ ಯೆಮೆಹಟ್ಟಿ ಹಳೆರಾಜರು ಗೃಹಕ್ಕೆ ಬಂದು ಕೂಡಿದರೆ ನಿಮಗೆ ಅಂನ್ನೋದಕಗಳು ಅರಮನೆಯಿಂದಲೇ ಕೊಡಲಾದೀತು ಎಂದು ಹೇಳಿ ಪೇಟೆಯೊಳಗೆ ಇರುವ ಕುಮಾರನಿಗೆ ಹೇಳಿ ಕಳುಹಿಸಿ ಅರವು ತರಿಸಿಕೊಂಡು ಚದರ ಪಡಸಾಲೆಯಿಂದ ಅಚ್ಚು ಪಡಸಾಲೆಯೊಳಗೆ ಸುರಂಗದಿಡ್ಡಿ ಚಿಲುಕಗಳು ಅಗಣಿಗಳು ಕೊರೆದು ಕಂನ್ನ ಕೊರೆದು ಒಳಗೆ ಮಾರ್ಗ ಮಾಡಿದರು.

...........ಯಿನ್ನೂರು ಜನರ ಮ್ಯಲೆ ಆಯುಧಗಳಿಂದ ಬಂದು ರಾಜಗೃಹದಲ್ಲಿ ಕೂಡಿದರು. ...ನಾವು ಸನ್ನೆ ಮಾಡಿದ ಕೂಡಲೆ ರಾತ್ರೆ ವೊರ ಬಾಗಿಲ ಬಳಿಯಲ್ಲಿ ನಿಂಮ ಆಯುಧಗಳಿಂದ ಸಿದ್ದವಾಗಿರಿ ಎಂದು ಹೇಳಿದ್ದರಿಂದ ಅದೇ ಪ್ರಕಾರ ಕೋಟೆಯೊಳಗೆ ಇದ್ದು ಜನರು ಯಾವತ್ತು ತಮ್ಮ ತಮ್ಮ ಹತ್ಯಾರುಗಳಿಂದ ಸಿದ್ದವಾಗಿ ಯಿದ್ದರು. ಆ ರಾತ್ರೆ ನಾಲ್ಕು ಗಳಿಗೆ ಮೇಲೆ ಪೌಜುದಾರರು ಅವರ ಜಾತಿ ಆಹಾರ ಪ್ರಕಾರ ತಂಮ ಠಾಣೆಯಿದ್ದ ಸ್ಥಳಕ್ಕೆ ಊಟಕ್ಕೆ ಹೋಗಬೇಕಾದರೆ ಅರಶಿನ ಮೇಲೆ ಮುವ್ವರು ಶಿಪಾಯಿಗಳನ್ನು ಪಹರೆಯಿಟ್ಟು ತಾವು ಯೆದ್ದು ಹೋದರು ಈ ಸಮಯದಲ್ಲಿ ನಗರದೊಳಗೆ ಇದ್ದ ಚನ್ನಬಸಪ್ಪನವರು ನಿಡುಮಾಮಿಡಿ ಕರಿಬಸಪ್ಪ ಸ್ವಾಮಿಗಳವರು ಸದರು ಪಡಸಾಲೆಯೊಳಗೆ ಕೂತುಕೊಂಡು ವಳಗೆ ಕರೆಕಳುಹಿಸಲಾಗಿ ಜನರು ಶಿವಪೂಜೆ ಮನೆ ಬಯಲಲ್ಲಿ ನಿಂತರು. ಧಣಿಗೆ ಅಂನ ಕೊಡು ಹೋಗುವುದಕ್ಕೋಸ್ಕರ ಹೆಂಗಸರು ನಾಲ್ವರು ಬುದ್ವಮತರನ್ನು ಕರೆಕಳುಹಿಸಿ ಅವರಿಗೆ ದಿಡ್ಡಿಯ ವುಪಾಯವು ಹೇಳಿಕಳುಹಿಸಲಾಗಿ ಅವರು ಅನ್ನೋದಕಗಳು ತೆಗೆದುಕೊಂಡು ಹೋದರು. ಅಲ್ಲಿದ್ದ ಶಿಪಾಯಿಗಳಿಗೆ ಗೋಷದ ಹೆಂಗಸರು ವುಟಕ್ಕೆ ತಂದಿರುತ್ತಾರೆ. ... ಕೊಂಚ ಕಿನಾರೆಯಾಗಿ ಎಂದು ತಾಕೀತು ಮಾಡಿದ್ದರಿಂದ ಆ ಸಿಪಾಯಿಗಳು... ಅಲ್ಲಿಯೇ ಹೊರಚ್ಚಾಗಿ ಕಾದು ಇದ್ದರು. ತರುವಾಯ ದೊರೆಯವರ ಸಂಗಡ ಮೆಲ್ಲಗೆ ಮಾರ್ಗದ ಸುರಂಗಸೂತ್ರದ ಮಾಡಿಯಿದೆ ಬಹಳ ಜನರು ಕೂಡಿಯಿದೆ ಯಂದು ಕದ ಚಿಲುಕ ತೆಗೆದು ದೊರೆಯವರನ್ನು ವಶಕ್ಕೆ ಕರಕೊಂಡು ಒಳಗೆ ಹೋಗಿ ಬಾಗಿಲು ಭದ್ರಪಡಿಸಿಕೊಂಡರು.

ಯಿಷ್ಟರೊಳಗೆ ಪಾಹರೆಯಿದ್ದ ಸಿಪಾಯಿಗಳು ಮೋಸವಾಯಿತು ಎಂದು ಗಲಭೆ ಮಾಡಿದ್ದು ಕೇಳಿ.... ಮೂರು ಜನ ಪೌಜುದಾರರು ಸರದಾರರು ಕೇಳಿ ತಂಮ ಜನಗಳ ಸಂಗಡ ಆಯುಧಪಾಣಿಗಳಾಗಿ... ದೊರೆಯನ್ನು ಹೊಡೆಯಬೇಕೆಂದ

ಯಿರುವಾಗ ಯಿಷ್ಟರೊಳಗೆ ಚನ್ನಬಸಪ್ಪ..........ಜನರನ್ನು ಹೊರಡಿಸಿ ಹೊರಗಿನ ಮಾಳಿಗೆ ಮುಂದಕ್ಕೆ ಬಂದು ನಿಂತದ್ದರಿಂದ ಅವರಿಗೆ ಯಿವರಿಗೆ ಯುದ್ಧವಾಗಿ...... ಬಿಲ್ಲು ಬಾಣಗಳಿಂದ ಯುದ್ಧ ಮಾಡುತ್ತ ಯಿರುವಾಗ್ಗೆ...... ಪ್ಯಾಟಿಯೊಳಗೆಯಿದ್ದ ಸರ್ವಕಾರರು ವಗ್ಗಟ್ಟಾಗಿ ಒಂದೇ ಕಾಲದಲ್ಲಿ ಅಯುಧಪಾಣಿಗಳಾಗಿ, ತಮ್ಮ ಮಂದಿಗಳನ್ನು ಸೇರಿಸಿಕೊಂಡು ದೊಡ್ಡಾಪೀರುಗಳ ಕಟ್ಟಿ... ಜಮಾಯಿಸುತ್ತಿದ್ದರು......... ಚನ್ನಬಸಪ್ಪ ತಂನ ಬಳಿಯಲ್ಲಿ ಜಮಾಯಿಸಿದ್ದ ಮನುಷ್ಯರೊಳಗೆ ಬಾಹುಬಲವುಂಟಾದ ಜನರನ್ನು ಕಲ್ಲು ಬಾಗಿಲು ಮೇಲೆ ಹತ್ತಿಸಿ ಮಾಳಿಗೆ ಕಲ್ಲುಕೀಳಿಸಿ ಕೊಟಾರದೊಳಗಿಂದ ಆ ಮದ್ದಿನ ಚೀಲಗಳ ತರಿಸಿ ತುಬಾಕಿಗಳಿಂದ ಸುಡಿಸಲಾಗಿ...... ಒಬ್ಬ ಪೌಜುದಾರನು ಅಲ್ಲೆ ಬಿದ್ದು ಸತ್ತನು. ಸರದಾರರು ಜನಗಳು ಸಹ ಹೊರಗೆ ಹೊರಟುವೊಡಿ ಬಂದರು. ಯೀ ಚನ್ನಬಸಪ್ಪನವರ ಮಂದಿ ಸಂಗಡಲೆ ಬೆಂನತ್ತಿಕೊಂಡು ಹೋಗಿ...... ಸರದಾರರ ಕಡೆಯವರಿಗೂ ಕೈ ಕಲಸಿ ಯುದ್ಧವು ಭಯಸ್ತರಗು ನಡೆಯುತ್ತಾ ಪೇಟೆಯೋಳಗೆರುವ ವಿರುಪಾಕ್ಷೇಶ್ವರನ ದೇವಾಲಯದ ಒಳಗೆ ಬರುವಾಗ್ಗೆ ಸರದಾರನಿಗೆ ಕಂಣುಪೆಟ್ಟಿಗೆ ಗುಂಡು ತಾಕಿ ಸತ್ತನು...... ಸಂತೆಪ್ಯಾಟಿ ಬಸವೇಶ್ವರ ದೇವಾಲಯದ ಒಳಗೆ ಬರುವವರಿವಿಗೆ ಉಳಿದ ಸರದಾರನು ಇವನ ಕಡೆ ಜನರು ಸತ್ತರು..... ಪವಾಡಪ್ಪ ನಾಯ್ಕರವರು ದಿವಾಣದೊಳಗಿಂದ ಹೊರಗೆ ಹೊರಟು ಬಂದು ಬಿದ್ದ ಸರದಾರರನ್ನು ಹೂಳಿಸಿ ಅವರ ಸಾಮಾನು ಅವರ ಹತಾರುಗಳು ಕುದುರೆಗಳು ಮುಂತಾದ್ದು ತಂಮ ಸ್ವಾಧೀನವ ಮಾಡಿಕೊಂಡರು.

..... ಕಡಪ ನವಾಬರ ಕಡೆ ವಕೀಲ ರಾಮಾಜಿ.... ಆತನ ಕರೆ ಕಳುಹಿಸಿ ನೀನು ಮಾಡಿದ ಕುಹಯುಕ್ತಿಯಿಂದ ನಮ್ಮ ಸಂಸ್ಥಾನ ತೆಗೆವ ಪ್ರಯತ್ನ ಮಾಡಿಯಿದ್ದೆ ಯಂದು...... ಆತನನ್ನು ಹಿಡಿದು ಶೆರೆಮನೆಯಲ್ಲಿ ಕೂರಿಸಿ...... ಯೀ ಪವಾಡಪ್ಪ ನಾಯ್ಕರವರು ಬುಕ್ಕರಾಯ ಸಮುದ್ರದ ವೀರಭದ್ರಸ್ವಾಮಿಯವರ ದರ್ಶನಕ್ಕೆ ಹೋಗುತ್ತಾ ಯೀ ರಾಮಾಜಿಯನ್ನು ಸಂಗಡಲೇ ಮೊಸಲೆಯಿಂದ ಕರೆದುಕೊಂಡು ಹೋಗಿ .... ಬುರಜನೊಳಗೆ ಭದ್ರ ಮಾಡಿ ಕಿಲ್ಲೇದಾರನಾದ ರಾಹುತರಾಯ ಬಸಪ್ಪನಿಗೆ ಬಂದೋಬಸ್ತು ಪಾರೆಯಿರಿಸಬೇಕೆಂದು... ಅವನ ತಾಬೆಗೆ ಕೊಟ್ಟು.... ಈ ಭಂಡ ಜೀವವ್ಯಾಕೆಂದು ಆ ರಾಮಾಜಿ ನಾಲಿಗೆ ಬುಡದಿಂದ ಕಿತ್ತುಕೊಂಡು ಸತ್ತನು...... ಪವಾಡಪ್ಪನಾಯ್ಕನು ಗೋಕರ್ಣಕ್ಕೆ ಹೋಗುವಲ್ಲಿ...... ಸಾಯುತ್ತಲೇ..... ಜಮಾದಾರ ಖಾನ್ ಮಲ್ಲಪ್ಪ...... ವಾರಸುದಾರ ಪುತ್ರರ ಸಂಗಡ..... ಚಂನಾಗಿ ತಿಳಿಯ ಹೇಳಿ ಸ್ವರೆಯಾಗಿ ಹೊರಟು ಬಂದು ಅನಂತಸಾಗರಕ್ಕೆ ಹತ್ತಿರವಾದ ಹೊಸಕೆರೆ ಕಟ್ಟಿಗೆ ಪಡುವಲಾಚೆ ಇದ್ದ ನಿಡುಮಾಮಿಡಿ ಸ್ವಾಮಿಗಳವರ ಮಠದೊಳಗೆ ಈ ಪವಾಡಪ್ಪನಾಯ್ಕನ ಶಾಲಿವಾಹನ ಶಕೆ ವರುಷ ೧೬೫೯ (ಕ್ರಿ.ಶ.೧೭೩೭)ನೆಯ ಪೈಂಗಳನಾಮ ಸಂವತ್ಸರದಲ್ಲಿ ಸಮಾಧಿ ಮಾಡಿಸಿದರು.

ಇಂದು ಈ ಪವಾಡಪ್ಪ ನಾಯಕನ ಗದ್ದುಗೆ ಶಿಥಿಲಗೊಂಡು ಅವಶೇಷವಾಗಿರುವ ಅಚ್ಚುಕಟ್ಟು ಕೆರೆಯ ಪಕ್ಕದಲ್ಲಿರುವ ಭತ್ತದ ಗದ್ದೆಯ ನಡುವೆ ಇರುವ ಮಠದಲ್ಲಿದೆ. ೧೯೫೪ರವರೆಗೂ ಈ ಮಠ ಸುಸ್ಥಿತಿಯಲ್ಲಿತ್ತು. ಆಂದ್ರ ಸರ್ಕಾರ ಈ ಮಠವನ್ನು ಆ ನಂತರ ತನ್ನ ಸುಪರ್ದಿಗೆ ತೆಗೆದುಕೊಂಡರೂ ಅದರ ನಿರ್ವಹಣೆಯಾಗದೆ ಶಿಥಿಲಗೊಂಡು ಬಿದ್ದಿದೆ. ಜೀರ್ಣೋದ್ಧಾರವಾಗಬೇಕಾಗಿದೆ. ಈ ಮಠದ ಆವರಣ ಕೇಂದ್ರದಲ್ಲಿ ವೀರಭದ್ರ ಗುಡಿಯೂ ಇತ್ತು. ಇಂದು ವೀರಭದ್ರಮೂರ್ತಿ ನಿರ್ಲಕ್ಷಿತವಾಗಿ ಬಿದ್ದಿದೆ. ಮಠದ ಒಂದು ಮಂಟಪವು ಇಂಡೋ ಇಸ್ಲಾಮಿಕ್ ಶೈಲಿಯ ವಾಸ್ತುವನ್ನು ಹೊಂದಿದೆ. ಈ ಮಠದಲ್ಲಿ, ಪೀಠದ ಪರಂಪರೆಯಲ್ಲಿ ಬಂದಿರುವಂತೆ ಪೂರ್ವಾಭಿಮುಖ ಚಂದ್ರಮೌಳೀಶ್ವರ ಲಿಂಗವಿದ್ದ ಗುಡಿಯೂ ಇದ್ದುದು ಅವಶೇಷಗಳಿಂದ ಸೂಚಿತವಾಗುತ್ತದೆ. ಶಿವಲಿಂಗದ ಜಲಹರಿ ಪಾಣಿಪೀಠ ಮಾತ್ರ ಉಳಿದುಕೊಂಡಿದ್ದು ಲಿಂಗ ಭಾಗ (ಬಾಣ) ಕಾಣೆಯಾಗಿದೆ. ಈ ದೇಗುಲ ವಾಸ್ತುವಿನಲ್ಲಿ ಗರ್ಭಗೃಹ, ಅಂತರಾಳ, ಬಾಗಿಲುವಾಡ (ದ್ವಾರ ಬಾಗಿಲು); ಬಾಗಿಲವಾಡದ ಮೇಲಂಚಿನಲ್ಲಿ (ಲಲಾಟ) ಕಲಾತ್ಮಕ ಪದ್ಮ ಪುಷ್ಪ ಗೊಂಚಲು, ಪಾಸ್ರ್ವ ಪಾರ್ಶ್ವಗಳಲ್ಲಿ ಬಳ್ಳಿ ತೋರಣ ಹಾಗು ನಕ್ಷತ್ರ ರೂಪದ ಕೆತ್ತನೆಗಳು ಕಂಡುಬರುತ್ತವೆ. ಮುಖಮಂಟಪದಲ್ಲಿ ಎಂಟು ಬ್ರಹ್ಮಕಾಂತ ಶೈಲಿಯ (ನಾಲ್ಕು ಮುಖಗಳು ಶಿಲಾಸ್ತಂಭಗಳಿವೆ. ವಿಮಾನಗೋಪುರವು ದ್ರಾವಿಡ ಶೈಲಿಯ ಹಂತ ಹಂತ ಗೋಪುರವಾಗಿ ಗ್ರೀವ (ಕಂಠ) ಭಾಗದವರೆಗೆ ಕಾಣಿಸಿಕೊಳ್ಳುತ್ತದೆ. ವೃತ್ತಾಕಾರದ ಪಟ್ಟಿಗಳೊಡನೆ. ಗ್ರೀವದ ಮೇಲ್ಭಾಗದಲ್ಲಿ ಗೋಲಾಕಾರದ ಗುಮ್ಮಟವಿದೆ. ಇದು ಅದಿಲ್‌ಶಾಹಿ ವಾಸ್ತುವನ್ನು ಹೊಂದಿದೆ ಎನ್ನಬೇಕು. ಬಹುಶಃ ಪಾರ್ಶ್ವಕೋಣೆಯ ದೇಗುಲಕ್ಕಂಟಿದಂತಿದ್ದು ಅದು ಸ್ವಾಮೀಜಿಯವರ ಪೂಜಾಗೃಹವಾಗಿತ್ತೆಂದು ತೋರುತ್ತದೆ. ಈ ದೇಗುಲದ ಎಡಪಕ್ಕದಲ್ಲಿ ವೀರಭದ್ರನ ಗುಡಿ ಇದ್ದು ಏಕಗರ್ಭಗೃಹ ಚತುರಸ್ತ ಗುಡಿಯಾಗಿ ಬಾಗಿಲುವಾಡದ ಲಲಾಟದಲ್ಲಿ ಶಿವಲಿಂಗದ ಉಬ್ಬುಗೆತ್ತನೆಯನ್ನು ಹೊಂದಿದೆ.

ವೀರಭದ್ರ ವಿಗ್ರಹವು ಕಪ್ಪು ಗ್ರಾನೈಟ್ ಶಿಲೆಯದಾಗಿದ್ದು ಕಲಾತ್ಮಕವಾಗಿ ಕೆತ್ತಿದ ವಿಗ್ರಹವಾಗಿದೆ. ಸ್ಥಾನಕ ಸಮಬಂಗದಲ್ಲಿ ಚತುರ್ಭುಜಸ್ಥನಾದ ವೀರಭದ್ರನ ಹಿಂಗೈಗಳಲ್ಲಿ ಬಿಲ್ಲು ಬಾಣಗಳಿವೆ. ಮುಂಬಲಗೈಗಳಲ್ಲಿ ಖಡ್ಗ, ಮುಂಎಡಗೈಯಲ್ಲಿ ಢಾಲುವಿದ್ದು ಅದರ ಬುಡದಲ್ಲಿ ದಕ್ಷನ ಶಿರವಿದೆ. ಅರ್ಥಾತ್ ದಕ್ಷನ ಶಿರದ ಮೇಲೆಢಾಲುವನ್ನಿಡಲಾಗಿದೆ. ವೀರಭದ್ರ ಕಿರೀಟಾವು ಹಂತಗಳ ಅಲಂಕೃತ ಕೆತ್ತನೆ ಹೊಂದಿದೆ. ಎಡಭುಜದಿಂದ ಇಳಿದುಬಿಡ್ಡು ತೊಡೆಯ ಮೂಲಕ ಬಲ ಸೊಂಟದವರೆಗೆ ಸಾಗಿರುವ ರುಂಡಮಾಲಾ ಧಾರಣೆಯೂ ಅವನಿಗಿದೆ. ವೀರಭದ್ರನ ಬಲಕ್ಕೆ ಟಗರುದಲೆಯ ದಕ್ಷ ಸ್ಥಾನಕ ಪ್ರಣಾಮ ಭಂಗಿಯಲ್ಲಿ ಪ್ರಭಾವಳಿ ಶಿಲ್ಪವಾಗಿ

ಜೊತೆಗಿದ್ದಾನೆ. ವಿಜಯನಗರ ಶೈಲಿಯ ಈ ವೀರಭದ್ರ ಶಿಲ್ಪ ಭಗ್ನಗೊಂಡಿದೆ. ಈ ವೀರಭದ್ರ ಗುಡಿಯ ಎಡಕ್ಕೆ ಇರುವ ಚೌಕಾಕಾರದ ಮಂಟಪದಲ್ಲಿನ ಗದ್ದುಗೆ, ಬಹುಶಃ ಜ॥ ಶ್ರೀ ಕರಿಬಸವೇಂದ್ರರ ಗದ್ದುಗೆಯಾಗಿರಬೇಕು. ದೇವರ ಸಾಲಿನಲ್ಲಿ ತಾನೆ ಶ್ರೀ ಗುರುವಿನ ಸ್ಥಾನ! ಅದು ಪಾರಂಪರಿಕ ಪದ್ಧತಿ ಗುರು ಗದ್ದುಗೆಯ ಎದುರಿಗೆ ತೆರೆದ ಮಂಟಪದಲ್ಲಿರುವ ಗದ್ದುಗೆ ಇಮ್ಮಡಿ ಪವಾಡಪ್ಪನಾಯಕನದಾಗಿರಬೇಕು. ಗುರುವಿನ ಎದುರಿಗೆ ಭಕ್ತನ ಶರಣು ಇರುವುದು ಗುರು, ಶಿಷ್ಯ ಪರಂಪರೆ.

ಗುರುಗದ್ದಿಗೆಯಿರುವ ನಿರಂಧಾರ (ಮುಚ್ಚಿದ) ಶೈಲಿಯ ಮಂಟಪದ ಪ್ರಸ್ತರದ ಮೇಲ್ಭಾಗದ ನಾಲ್ಕೂ ಮೂಲೆಗಳಲ್ಲಿ ಅಸೀನ ವೃಷಭಗಳು ಏಕಮುಖ ದ್ವಯದೇಹಿ ಗಾರೆಯಚ್ಚಿನ ಶಿಲ್ಪಗಳಾಗಿ ಇವೆ. ಈ ಗದ್ದುಗೆ ಮಂಟಪದ ಬಾಗಿಲು ಇಂಡೋ–ಆದಿಲ್ ಶಾಹಿಶೈಲಿಯ ಧೀರ್ಘವೃತ್ತಾಕಾರದ ಮೇಲುಭಾಗವನ್ನು (ಕಮಾನು) ಹೊಂದಿರುವ ಬಾಗಿಲು ವಾಸ್ತುವನ್ನು ಹೊಂದಿದೆ. ಈ ಮಂಟಪದ ಮುಂಭಿತ್ತಿಗಳಲ್ಲಿ ದೀಪದ ಗೂಡುಗಳಿವೆ. ಈ ಇಡೀ ದೇಗುಲ; ಗದ್ದುಗೆ ಆವರಣವು ಸಮತಟ್ಟಾದ ನೆಲದ ಮೇಲೆ ಇದ್ದು ಸುತ್ತ ಎತ್ತರದ ಗೋಡೆಗಳ ಪ್ರಾಕಾರವನ್ನು ಹೊಂದಿದೆ; ಪ್ರವೇಹ್ಸದ್ವಾರದಲ್ಲಿ ಮುಖಗೋಪುರವೂ ಸೇರಿದಂತೆ ೧೯೫೦ರವರೆಗೂ ಇವೆಲ್ಲ ಸುಸ್ಥಿತಿಯಲ್ಲಿಯೇ ಇದ್ದುವು. ಎಂದು ಪ್ರಾಕಾರದ ಗೋಡೆಗಳು, ಗದ್ದುಗೆಗಳು ದೇಗುಲ ಭಾಗಗಳು, ವೀರಭದ್ರ ವಿಗ್ರಹ ಎಲ್ಲವೂ ಶಿಥಿಲಾವಶೇಷವಾಗಿ ಬಿದ್ದಿವೆ. ಮಠದ ಬಲ ಪಾರ್ಶ್ವಕ್ಕಿರುವ ಕೆರೆಯು ಜ॥ ಶ್ರೀ ಕರಿಬಸವೇಂದ್ರರ ಆದೇಶಕ್ಕನುಗುಣವಾಗಿ ನಿರ್ಮಾಣಗೊಂಡಿದ್ದು ಇಂದು, ಈ ನೆರೆಯ ಜನತೆಗೆ ಉಪಯೋಗಕರ ಜಲಮೂಲವಾಗಿದೆ. ಇದೊಂದು ಜಲಾನಯನ ಪ್ರದೇಶವೂ ಆಗಿದೆ.

ನಿಡುಮಾಮಿಡಿ ಮಠ, ಕೊತ್ತಚೆರುವು (ಊರು ಒಳಗಿನ ಮಠ):

ಕೊತ್ತಚೆರುವು ಊರಿನೊಳಗೆ ಪೀಠದ ಇನ್ನೊಂದು ಶಾಖಾಮಠವಿದೆ. ಈಗ ಈ ಮಠದ ಆವರಣದಲ್ಲಿ ಊರಿನ ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲಿಸಲು ಪಾಠಶಾಲೆಯೊಂದನ್ನು ನಡೆಸಲು ಪೀಠದಿಂದ ಅನುಮತಿ ನೀಡಲಾಗಿದೆ. ಈ ಮಠದ ವಾಸ್ತು ಧೀರ್ಘ ಆಯುತಾಕಾರದಲ್ಲಿದ್ದು ಬ್ರಹ್ಮಕಾಂತ (ನಾಲ್ಮೊಗದ) ಮಾದರಿಯ ಆರು ಸ್ತಂಭಗಳನ್ನು ಹೊಂದಿದೆ. ಅವುಗಳ ಶರೀರದಲ್ಲಿ ಉಬ್ಬುಶಿಲ್ಪಗಳಿದ್ದು ಸಾಶ್ರಯ ಸ್ತಂಭಗಳೆನಿಸಿವೆ. ಈ ಉಬ್ಬುಶಿಲ್ಪಗಳಲ್ಲಿ ಪೀಠದ ಆದಿ ಜಗದ್ಗುರು ಶ್ರೀ ಚಂದ್ರಗುಂಡ ದೇಶಿಕೇಂದ್ರ ಶಿವಾಚಾರ್ಯರು ತೆಂಗಿನ ಮರದ ಕೆಳಗ ಕಮಂಡಲು ಹಿಡಿದು ನಿಂತು ಮಾಡಿದ ನಾರಿಕೇಳ ಪವಾಡದ ಕಥಾಸೂಚಕ ಶಿಲ್ಪವಿದೆ. ಪೀಠದ ೧೧ನೇ ಶತಮಾನದ ಈ ನಾರಿಕೇಳ ಪವಾಡದ ಕತೆಯು ಆ ಶತಮಾನದಿಂದ ಈ ವರೆಗೆ ಚಾಲ್ತಿಯಲ್ಲಿರುವುದಕ್ಕೆ ೧೬–೧೭ನೇ ಶತಮಾನದ ಈ ಶಿಲ್ಪ ಸಂಕೇತಗೊಂಡಿದೆ. ಇದರ ಜೊತೆಗೆ ಅಂಬಾರಿ ಆನೆಯ ಶಿಲ್ಪವೂ ಇದ್ದು ಖಡ್ಗ ಅಥವಾ ದಂಡದಂಥ

ವಸ್ತುವೊಂದನ್ನು ಇಳಿಮುಖವಾಗಿ ಎಡಗೈಯಲ್ಲಿ ಹಿಡಿದಿದ್ದು, ವೀರಭಂಗಿಯಲ್ಲಿ ನಿಂತಿರುವ ವ್ಯಕ್ತಿ ಹಾಗು ಬಂದೂಕು ಅಥವಾ ನೀಳ ಮರದ ದಂಡವನ್ನು ಹಿಡಿದ ಇನ್ನೊಂದು ವ್ಯಕ್ತಿಯ ಉಬ್ಬು ಶಿಲ್ಪಗಳನ್ನು ಸ್ತಂಭಗಳ ಮೇಲೆ ಬಿಡಿಸಲಾಗಿದೆ. ಈ ಶಿಲ್ಪಗಳು, ಪೀಠಾಧಿಪತಿಗಳು ರಾಜಗುರುಗಳಾಗಿದ್ದುದರ ಸಂಕೇತವಾಗಿ ರಾಜ ಪಡೆದ ಆದರ, ಭಕ್ತಿ ಗೌರವ ಪಡೆದ ಸೂಚಿ ಶಿಲ್ಪಗಳಂತೆ ಕಾಣುತ್ತದೆ. ಇದಕ್ಕೆ ಪೋಷಕವಾಗಿ ಶ್ರೀ ಕರಿಬಸವ ದೇಶಿಕೇಂದ್ರರು ಆದಿಲ್‌ಶಾಹಿ ದೊರೆಗಳಿಂದ 'ಹಿಂದೂ ಫಕೀರ್' ಎಂಬ ಬಿರುದು ಪಡೆದಿದ್ದ ಸಂಗತಿಯು ಚಾರಿತ್ರಿಕವಾಗಿ ನಮೂದಾಗಿದೆ.

ಈ ಮಠದಲ್ಲಿ ಗೋವು, ಆನೆ, ಗಣಪತಿ, ನಾಗಬಂಧ ನಾಗಶರೀರಗಳ ಗೊಂಚಲು ಶಿವಲಿಂಗ, ಹಂಸ ಇತ್ಯಾದಿಗಳ ಉಬ್ಬು ಶಿಲ್ಪಗಳಿದ್ದು ಸಾಂಕೇತಿಕ ಅರ್ಥಸೂಚಿಯಾಗಿವೆ. ಇವೆಲ್ಲವೂ ಸ್ಥಳೀಯ ಗ್ರಾಮೀಣ ಶೈಲಿಯಲ್ಲಿ ಕೆತ್ತಲ್ಪಟ್ಟಿವೆ. ಪ್ರವೇಶದ್ವಾರದ ಮೇಲ್ಭಾಗವು ಗುಂಗುರು ಆಕಾರದ ಕೋನಮುಖಗಳನ್ನು ಹೊಂದಿದೆ. ಪ್ರವೇಶ ಸೋಪಾನವು ವಿಜಯನಗರ ಶೈಲಿಯ ವ್ಯಾಳಿ ಸೋಪಾನವನ್ನು ಹೊಂದಿದೆ.

ನಿಡುಮಾಮಿಡಿ ಮಠ, ವಾಪಸಂದ್ರ, (ವಾಬಸಂದ್ರ) ಚಿಕ್ಕಬಳ್ಳಾಪುರ

ಚಿಕ್ಕಬಳ್ಳಾಪುರ ಜಿಲ್ಲೆ, ವಾಪಸಂದ್ರದಲ್ಲಿ ನಿಡುಮಾಮಿಡಿ ಮಠವಿದೆ. ಇದನ್ನು ನಿಡಮಾಮಡಯ್ಯನ ಮಠ, ಜಂಗಮಮಠ, ಗಾರೆ ಮಠ, ವಾಪಸಂದ್ರ ಮಠ ಎಂದೂ ಕರೆಯಲಾಗುತ್ತದೆ. ಪೀಠದ ಸಂಸ್ಥಾಪಕರಾದ ಜ. ಶ್ರೀ. ಚಂದ್ರಗುಂಡ ದೇಶಿಕೇಂದ್ರರು ತಪಸ್ಸು ಮಾಡಿದ ಸ್ಥಳವಿದು. ನಂತರದ ಪೀಠಾಧಿಪತಿಗಳು ಆ ಸ್ಥಳದಲ್ಲಿ ಶಾಖಾಮಠವನ್ನು ನಿರ್ಮಿಸಿದರೆಂದು ಪೂಜ್ಯ ಶ್ರೀ ಜಚನಿ ಮಹಾಸನ್ನಿಧಿಯವರು ತಿಳಿಸಿದ್ದರು. ಈ ಮಠವು ಸ.ನಂ. ೨೧೯ರ ಜಮೀನಿನಲ್ಲಿ ನಿರ್ಮಾಣವಾಗಿದ್ದು, ಇದಕ್ಕೆ ಹೊಂದಿಕೊಂಡಿರುವ ಸ.ನಂ. ೭ ರ ಜಮೀನು ಈ ಪೀಠಕ್ಕೆ ಸಂಬಂಧಿಸಿರುತ್ತದೆ. ಈ ಎರಡು ಜಮೀನುಗಳು ದೇವಾದಾಯ ಇನಾಂ ಜಮೀನುಗಳಾಗಿದ್ದು ಮಠದ ಸಂರಕ್ಷಣೆಗೆ ನೀಡಲಾಗಿದೆ.

ಪಂಡಿತಾರಾಧ್ಯ ಚರಿತ್ರೆಯಲ್ಲಿ ಉಕ್ತವಿರುವಂತೆ ವಾಪಸಂದ್ರದಲ್ಲಿನ ನಿಡುಮಾಮಿಡಿ ಮಠವು, ಶ್ರೀ ನಿಡುಮಾಮಿಡಿ ಪೀಠಾಧ್ಯಕ್ಷರ ಖಾಸಾ ಶಾಖಾಮಠವಾಗಿದೆ. ಇಲ್ಲಿರುವ ಮೂರು ಗದ್ದುಗೆಗಳು ಚನ್ನಬಸವಸ್ವಾಮಿ, ರುದ್ರಸ್ವಾಮಿ, ಹಾಗು ವೀರಪ್ಪಸ್ವಾಮಿಗಳ ಹೆಸರಿನಲ್ಲಿವೆ. ಮಠದ ಮುಂಭಾಗದಲ್ಲಿದ್ದ ಬಾವಿ ಹೂಳುತುಂಬಿ ಮುಚ್ಚಿಹೋಗಿದ್ದು, ಅದರ ಅವಶೇಷಗಳು ಇಂದೂ ಉಳಿದಿವೆ. ಮಠದ ಆವರಣವು ಹಲವು ದೊಡ್ಡ ವೃಕ್ಷಗಳ ಸಹಿತವಾಗಿದೆ. ಮಠವು ಕೆಲವು ವಿಭಾಗಗಳ ಕೋಣೆಗಳ ಸಮೂಹದಂತಿದ್ದು ಯಾವ ಶಿಲ್ಪಾಲಂಕರಣವನ್ನೂ ಹೊಂದಿರದ ಸಾಮಾನ್ಯ ವಾಸ್ತುವಿನಂತೆ ಕಂಡುಬರುತ್ತದೆ. ಈ ಮಠದ ವಾಸ್ತುವು ಆಗಾಗ್ಗೆ ಬದಲಾವಣೆಗೊಂಡಂತೆ ತೋರುತ್ತದೆ.

ಬಹುಶಃ ವಿಜಯನಗರ ಕಾಲದಲ್ಲಿದ್ದ ಗುರುಗಳ ಗದ್ದುಗೆಯು ಇಲ್ಲಿದ್ದು, ಅದು ಇಂದು ಕಾಣಬರುತ್ತಿಲ್ಲ. ವಾಪಸಂದ್ರದಲ್ಲಿನ ಕೊಂಡ್ಲಿಮಠಕ್ಕಿಂತ ಈ ನಿಡುಮಾಮಿಡಿ ಮಠವು ಪ್ರಾಚೀನವಿದ್ದು, ವಿಜಯನಗರ ಕಾಲದ ಮಠವಾಗಿಯೇ ಕುರುಹುಗಳನ್ನು ತೋರುವಂತಿದೆ. ವಾಪಸಂದ್ರದ ನಿಡುಮಾಮಿಡಿ ಮಠದಲ್ಲಿ ಪೂರ್ವಾಭಿಮುಖವಾಗಿರುವ ವೀರಭದ್ರಸ್ವಾಮಿ ದೇವಾಲಯವಿದ್ದು, ಅಲ್ಲಿ ಈಗ ಮೂರ್ತಿ ಕಾಣಬರುತ್ತಿಲ್ಲ. ದೇವಾಲಯದ ಪ್ರವೇಶ ಭಾಗದಲ್ಲಿ ಸುರುಳಿ ಸೊಂಡಲಿನಹಸ್ತಿ ಸೋಪಾನವಿದೆ. ನಾಲ್ಕು ಮುಖದ ನಿರಾಶ್ರಯ ಬ್ರಹ್ಮಕಾಂತ ಮಾದರಿಯ ಸ್ತಂಭಗಳನ್ನು ಹೊಂದಿದೆ. ದೇವಾಲಯದ ಪ್ರಸ್ತರ ಭಾಗದ ಮೇಲೆ ಎರಡು ದಿಕ್ಕಿನ ಕೋನ ಅಂಚುಗಳಲ್ಲಿ ಏಕಮುಖ ಬಸವನ ಗಾರೆಯಚ್ಚಿನ ಶಿಲ್ಪಗಳಿದ್ದು, ಈಗ ಶಿಥಿಲವಾಗಿರುವುದು ಕಂಡುಬರುತ್ತದೆ. ಲಿಂ. ಶ್ರೀ ಜಚನಿ ಮಹಾಸನ್ನಿಧಿಯವರು ಈ ಮಠದ ಬಗ್ಗೆ ಮಾಹಿತಿಯನ್ನು ನೀಡುವಾಗ, ಇಲ್ಲಿನ ದೇವಾಲಯದಲ್ಲಿದ್ದ ವೀರಭದ್ರಸ್ವಾಮಿ ಮೂರ್ತಿಯು, ಚಿಕ್ಕಬಳ್ಳಾಪುರದ ಉಪವಿಭಾಗಾಧಿಕಾರಿಗಳ ಸರ್ಕಾರಿ ವಾಸಗೃಹದ ಆವರಣದಲ್ಲಿದೆ ಎಂದು ತಿಳಿಸಿದ್ದರು. ಈ ಮೂರ್ತಿಯು ನಿಡುಮಾಮಿಡಿ ಮಠಕ್ಕೆ ಸೇರಿದ್ದೆಂದು, ಈಗಿನ ಪೀಠಾಧ್ಯಕ್ಷರು ಪೀಠಕ್ಕೆ ಬಂದ ಹೊಸತರಲ್ಲಿ ಅವರನ್ನು ಸ್ವತಃ ಕರೆದೊಯ್ದು, ಶ್ರೀ ಜಚನಿ ಅವರು ಮೂರ್ತಿಯನ್ನು ತೋರಿಸಿದ್ದಾಗಿ ಪೀಠಾಧಿಪತಿಗಳು ತಿಳಿಸಿರುತ್ತಾರೆ. ಜ. ಚಂದ್ರಗುಂಡರು ನಂದಿಯಿಂದ ಕಂದವಾರ, ಮಂಚನಬೆಲೆ ವೀರಭದ್ರ ಪ್ರತಿಷ್ಠೆಗೆ ಪಾರಂಪರಿಕ ಪ್ರೇರಕರಾಗಿರುವಲ್ಲಿ ವಾಪಸಂದ್ರದ ನಿಡುಮಾಮಿಡಿ ಮಠದಲ್ಲಿನ ವೀರಭದ್ರಸ್ವಾಮಿ ಪ್ರತಿಷ್ಠೆಗೂ ಪೂಜ್ಯರೆ ಪ್ರೇರಕರಾಗಿರುವಂತಿದೆ.

ಚಿಕ್ಕಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಹಾರೋಬಂಡೆ ಗ್ರಾಮದಲ್ಲಿನ ಸ. ನಂ. ೭೮ ಹಾಗು ಸ.ನಂ. ೮೫ರ ಜಮೀನುಗಳು ವಾಪಸಂದ್ರದಲ್ಲಿರುವ ನಿಡುಮಾಮಿಡಿ ಮಠಕ್ಕೆ ಪ್ರಾಚೀನ ಕಾಲದಿಂದಲೂ ಬಂದಿರುವ ದೇವಾದಾಯ ಇನಾಂ ಜಮೀನುಗಳಾಗಿದ್ದು, ಈ ಜಮೀನುಗಳು ವಾಪಸಂದ್ರ ಮಠದ ಯನಾಂತಿ ಎಂದೆ ದಾಖಲೆಗೊಂಡಿವೆ. ಮಠದ ಸಂರಕ್ಷಣೆಗೆ ಈ ಜಮೀನುಗಳನ್ನು ನೀಡಲಾಗಿರುತ್ತದೆ.

ಕೊಂಡ್ಲಿಮಠ, ವಾಪಸಂದ್ರ, (ವಾಬಸಂದ್ರ) ಚಿಕ್ಕಬಳ್ಳಾಪುರ:

ನಿಡುಮಾಮಿಡಿ ಮಠದ ಅನತಿ ದೂರದಲ್ಲಿ ಕೊಂಡ್ಲಿ ಮಠವಿದೆ. ಈ ಎರಡು ಮಠಗಳೂ ಪೂರ್ವದಿಂದಲೂ ಸಂಬಂಧ ಹೊಂದಿರುವುದರ ಬಗ್ಗೆ ಶ್ರೀ ಜಚನಿ ಅವರು ಗಮನ ಸೆಳೆದಿದ್ದರು. ಈ ಮಠವು ವಾಪಸಂದ್ರ ಸ. ನಂ. ೧೭೪ ರಲ್ಲಿ ನಿರ್ಮಾಣವಾಗಿದ್ದು, ಈ ಮಠವು ಸ. ನಂ. ೨೧೩ ರ ಇನಾಂ ಜಮೀನನ್ನು ಹೊಂದಿರುತ್ತದೆ. ಈ ಎರಡೂ ದೇವಾದಾಯ ಇನಾಂ ಜಮೀನುಗಳನ್ನು ಕೊಂಡ್ಲಿಮಠದ ಸಂರಕ್ಷಣೆಗೆ ನೀಡಲಾಗಿದೆ.

ಈ ಮಠದ ಎದುರು ಪಾರ್ಶ್ವದಲ್ಲಿ ಬಾವಿಯೂ ಇದೆ. ಇಲ್ಲಿ ಒಂದು ವಿಶಾಲವಾದ ಕೆರೆಯ ಪ್ರದೇಶವಿದ್ದ ಕುರುಹೂ ಇದೆ. ಬಹುಶಃ ಬಾವಿ ಹಾಗು ಕರೆಯ ಪರಿಸರದಲ್ಲಿದ್ದುದು ಕೊಂಡಲು (ಕೊಂಡ್ಲಿ) ಎಂದರೆ ನೀರಿನ ಕೆರೆ ಎಂಬ ಅರ್ಥವು ಇರುವಲ್ಲಿ ವಾಪಸಂದ್ರ ಎಂಬ ಸ್ಥಳನಾಮವು ಪೀಠ ಶಾಖಾಮಠಕ್ಕೆ ಅಂಟಿತು; ಆದರೆ ಪ್ರತ್ಯೇಕವಾಗಿ ಈ ಕೆರೆ, ಬಾವಿ ಪರಿಸರದಲ್ಲಿದ್ದ ಕೊಂಡ್ಲಿಮಠದ ಉಸ್ತುವಾರಿಯು ಕಾಲಾಂತರದಲ್ಲಿ ಶ್ರೀ ನಿಡುಮಾಮಿಡಿ ಮಠಕ್ಕೆ ಬಂತು. ಕಾರಣ ಬಹಳ ಕಾಲ ಈ ಮಠಕ್ಕೆ ಉಸ್ತುವಾರಿ ಇಲ್ಲದ್ದರಿಂದ ನಿಷ್ಕ್ರಿಯವಾಗಿತ್ತು. ೧೯೨೦ರಿಂದ ನಿಡುಮಾಮಿಡಿ ಮಠದ ವೀರಪ್ಪ ಸ್ವಾಮಿಗಳು ಈ ಮಠ ಹಾಗು ಇದಕ್ಕೆ ಸಂಬಂಧಿಸಿದ ಇನಾಂ ಭೂಮಿಗಳ ಜವಾಬ್ದಾರಿಯನ್ನು ನಿರ್ವಹಿಸತೊಡಗಿದರು. ಇದನ್ನು ಮನಗಂಡು ಕೋಲಾರ ಜಿಲ್ಲಾಧಿಕಾರಿಗಳು ೨-೨-೧೯೪೧ ರಲ್ಲಿ ಅಂದಿನ ಮೈಸೂರು ಮಹಾರಾಜ ಸರಕಾರದ ಮುಜರಾಯಿ ಇಲಾಖೆಯ ಆಯುಕ್ತರಿಗೆ ವರದಿ ಸಲ್ಲಿಸಿ, ಕೊಂಡ್ಲಿಮಠದ ಇನಾಂ ಭೂಮಿಗಳನ್ನು ನಿಡುಮಾಮಡಯ್ಯನ ಮಠಕ್ಕೆ ವರ್ಗಾಯಿಸುವಂತೆ ಕೋರಿದ್ದರು. ಮುಜರಾಯಿ ಆಯುಕ್ತರು ೨೪-೫-೧೯೪೪ ರಲ್ಲಿ ಸರಕಾರಕ್ಕೆ ಶಿಫಾರಸು ಮಾಡಿದ್ದರು. ಕಾನೂನು ಇಲಾಖೆಯ ಕಾರ್ಯದರ್ಶಿಗಳು ತಮ್ಮ ಆದೇಶ ಸಂ.ಆ. ೧೬೨೨-೫/ಮುಜರಾಯಿ ೨೭೨-೪೮-೨, ಬೆಂಗಳೂರು ದಿನಾಂಕ ೨-೯-೧೯೪೯ರಲ್ಲಿ ಕೊಂಡ್ಲಿಮಠಕ್ಕೆ ಸೇರಿದ ಸ.ನಂ. ೧೭೪ ಹಾಗು ೨೧೩ ರ ಇನಾಂ ಭೂಮಿಗಳನ್ನು ನಿಡುಮಾಮಯ್ಯನ ಮಠಕ್ಕೆ ವರ್ಗಾಯಿಸಿರುತ್ತಾರೆ. ಹೀಗಾಗಿ ಕೊಂಡ್ಲಿ ಮಠದ ಆಸ್ತಿಪಾಸಿಗಳ ನಿರ್ವಹಣೆ ನಿಡುಮಾಮಿಡಿ ಮಠದ ನೇರ ನಿರ್ವಹಣೆಗೆ ಬಂದಿತು.

ಈ ಮಠದ ಹಾದಿ, ಚಿಕ್ಕಬಳ್ಳಾಪುರ ತಾಲ್ಲೂಕು ಶಿಲಾಗಾಣದ ದಾನ ಹೊಂದಿರುವ ಮಂಚನಬೆಲೆ ರುದ್ರದೇವರ ಗುಡಿಗೂ ಹಾಗು ಚಿತ್ರಾವತಿ ಕೆರೆ ಕೋಡಿಯು ಸುದೂರದಲ್ಲಿದ್ದು (ತೀರ್ಥೋದ್ಭವ ಬಾವಿಯನ್ನು ಒಳಗೊಂಡಿದೆ) ಕೆರೆ ದಂಡೆಯ ಮೂಲಕ ಸಾಗುವ ಹಾದಿಯೂ ಆಗಿದೆ. ಇದಕ್ಕೆ ವಿಶೇಷ ಸಂಬಂಧವಿದೆ. ಮಂಚನಬೆಲೆ ರುದ್ರದೇವರ ಗುಡಿಯ ವೀರಭದ್ರ ಜ॥ ಚಂದ್ರಗುಂಡರಿಂದ ಸ್ಥಾಪಿತವೆನ್ನಲಾಗಿದೆ. (ಈಗಿನ ಶಿಲ್ಪ ಜೀರ್ಣೋದ್ಧಾರಗೊಂಡ ವಿಜಯನಗರ ಶೈಲಿಯ ಶಿಲ್ಪವಾಗಿದೆ. ಹಿಂದಿನ ಶಿಲ್ಪ ಕಂದವಾರ ವೀರಭದ್ರ ಗುಡಿ ಬಳಿ ಇರುವ ಪ್ರಾಚೀನ ಭಿನ್ನ ಶಿಲ್ಪವೇ ಈ ರುದ್ರ ದೇವರ ಶಿಲ್ಪವಾಗಿದ್ದು ಅಲ್ಲಿಗೆ ಯಾವ ಕಾರಣದಿಂದಲೋ ಒಯ್ಯಿಟ್ಟರೆ? ಅಥವಾ ಅಲ್ಲಿಯದೆ ಮೂಲಶಿಲ್ಪವೇ ಎಂಬುದು ನಿಗದಿ ಇಲ್ಲ. ಚಿಕ್ಕಬಳ್ಳಾಪುರ ತಾಲ್ಲೂಕಿನ ೮೩ನೇ ಶಾಸನ (ಕಂದವಾರ)ದಲ್ಲಿ ಬಜ್ಜ ರಾಮಣ್ಣ ಗಾರಿದೀದೇವಸ್ಥಾನಮು ಶಿಲಾಗುಣಮು ಎಂದು ಪ್ರಸ್ತಾಪವಿರುವಲ್ಲಿ ಮಂಚನ ಬೆಲೆ ರುದ್ರದೇವರಿಗೆ ಶ್ರೀ ನಿಡುಮಾಮಿಡಿ ಸಂಪ್ರದಾಯದ ಭಕ್ತರಾದ ಸಜ್ಜನ ವೀರಶೈವರು ನಡೆದುಕೊಂಡು ಬಜ್ಜಣ್ಣಾ ಎಂಬ ಹೆಸರಿನವರೂ ಆ ವರ್ಗದಲ್ಲಿರುವುದೂ

ಗಮನಾರ್ಹವಾಗಿದೆ. ಕೆ.ಕೆ. ನಿಘಂಟಿನಲ್ಲಿ 'ಬಜ್ಜ' ಎಂದರೆ ಹರದರು 'ಬಜ್ಜಾ' ಎಂದರೆ ವಜ್ರದ ವ್ಯಾಪಾರ ಎಂದೂ ಅರ್ಥವಿರುವುದು ಇಲ್ಲಿ ಗಮನಾರ್ಹ. ಈ ರುದ್ರದೇವರ ಗುಡಿಯಲ್ಲಿ ೩೬ ದೀಪದ ತ್ರಿಭುಜಾಕಾರದ ಗೂಡುಗಳನ್ನು ತ್ರಿಭುಜಾಕಾರದಲ್ಲಿಯೇ ರೂಪಿಸಿರುವುದು ಶ್ರೀ ಜ॥ ಚಂದ್ರಗುಂಡರಲ್ಲಿ ಪ್ರಸ್ತುತವಾದ ೩೬ ತತ್ವಗಳ ಸಂಕೇತವಾಗಿರುವ ಸೂಚನೂ ಅಲ್ಲಿದೆ. ಡಾ.ಶ್ರೀ ಜಚನಿ ಅವರು ಈ ರುದ್ರದೇವರ ಗುಡಿಯ ಸ್ತಂಭದಲ್ಲಿ ತೆಂಗಿನ ಫಲ ಭಿಕ್ಷೆ ನೀಡಿ ಪಡೆದ (ನಾರಿಕೇಳ ಪವಾಡ) ಜ॥ ಚಂದ್ರಗುಂಡರ ಸಾಂಕೇತಿಕ ಶಿಲ್ಪವಿರುವುದನ್ನು ೧೯೬೪ ರಲ್ಲಿಯೇ ಗುರುತಿಸಿ ತಮ್ಮ ಕೃತಿಯಲ್ಲಿ ದಾಖಲಿಸಿರುವುದೂ ಗಮನಾರ್ಹ. ಇದರಿಂದ ವಾಪಸಂದ್ರದ 'ಬಾವಿ ಮತ್ತು ಕೆರೆ' ಪರಿಸರದಂತೆ ಮಂಚನಬೆಲೆ ಚಿತ್ರಾವತಿ ನದಿ ಪರಿಸರವೂ ಇರುವಲ್ಲಿ ವಿಶೇಷ ಸಂದರ್ಭವನ್ನೂ ನಿಡುಮಾಮಿಡಿ ಪೀಠದೊಡನೆ ಸೂಚಿಸುತ್ತದೆ. ಹೀಗಾಗಿ ಕೊಂಡಿಮಠವೂ, ಪೀಠದ ಉಸ್ತುವಾರಿಗೆ ಬಂದದ್ದು, ಪೂರ್ವದ ಪಾರಂಪರಿಕ ಸಂಬಂಧದ ಸೂಚಿಯೂ ಆಗಿರಬಹುದು.

ಕೊಂಡ್ಲಿಮಠವು ಮೊದಲಿಗೆ ನಾಲ್ಕು ತೆರೆದ ಮುಖಮಂಟಪ ಸ್ತಂಭಗಳ ರಚನೆ ಹೊಂದಿದ್ದು, ಒಳಗೆ ಗದ್ದುಗೆ ಕೋಣೆಯನ್ನು ಹೊಂದಿದ್ದ ವಾಸ್ತುವನ್ನು ತೋರುತ್ತದೆ. ಈಗ ತೆರೆದ ಮುಖಮಂಟಪ ಎರಡು ಪಾರ್ಶ್ವಕೋಣೆಗಳ ಮಧ್ಯಪ್ರವೇಶವಿರುವ ಮಂಟಪದ ವಾಸ್ತುವಾಗಿ ಪರಿವರ್ತನೆಗೊಂಡಿದೆ. ಈ ನಾಲ್ಕು ಮುಂಬದಿ ಸ್ತಂಭಗಳು ಬ್ರಹ್ಮಕಾಂತ ಹಾಗು ವಿಷ್ಣುಕಾಂತದ (ನಾಲ್ಮೊಗ, ಎಂಟು ಮೊಗ) ಮಿಶ್ರ ಸ್ತಂಭ ಶೈಲಿಯ ಸಾಶ್ರಯ ಸ್ತಂಭಗಳಾಗಿವೆ. ಅಂದರೆ ಪ್ರಣಾಮ ಸ್ಥಾನಕ ಭಂಗಿಯ ಊರಿನ ನಾಯಕ, ಭಕ್ತಿ ನೃತ್ಯ ಶೈಲಿಯ ನೆತ್ತಿಗೆ ತುರುಬು ಎತ್ತಿಕಟ್ಟಿದ ಶಿರದ ವ್ಯಕ್ತಿ; ಎರಡು ತೋಳುಗಳನ್ನು ಕಲಾತ್ಮಕವಾಗಿ ವೃತ್ತಾಕಾರವಾಗಿ ಭಕ್ತಿಯಿಂದ ಎತ್ತಿರುವ ಸ್ತ್ರೀ ಶಿಲ್ಪ. ಎಡಗೈಯನ್ನ ಕಲಾತ್ಮಕವಾಗಿ ಇಳಿಬಿಟ್ಟು, ಬಲಗೈ ಮುಂಚಾಚಿ ನಿಂತಿರುವ ಸ್ತ್ರೀ ಶಿಲ್ಪವೂ ಇಲ್ಲಿದೆ. ಮಠದ ಒಳಗಿನ ಶಿಲ್ಪಗಳಲ್ಲಿ ಇಷ್ಟಲಿಂಗ ಪೂಜಾಸೀನ ಜಟಾಧಾರಿ ಯತಿ ಹಾಗು ಗಣಪತಿ ವಿಜಯನಗರ ಶೈಲಿಯ ಅಸೀನ ಸಿಂಹಾವಾಳೀ (!) ಶಿಲ್ಪಗಳಿವೆ. ಹೀಗಾಗಿ ಈ ಮಠದ ಶಿಲ್ಪಗಳ ಇತಿಹಾಸ ವಿಜಯನಗರದ ಕಾಲದ್ದೆನ್ನಬಹುದು ಹಾಗು ಉಭಯ ಮಠಗಳು ವಿಜಯನಗರ ಕಾಲದಲ್ಲಿಯೂ ಹೆಸರು ಪಡೆದಿದ್ದಂತೆ ಸೂಚನೆಗಳನ್ನು ನೀಡುವಂತಿವೆ. ಅಲ್ಲದೆ ಈ ಮಠಗಳ ನಡುವಣ ಹಾದಿಯ ಕಟ್ಟೆಯ ಮೇಲೆ ಸ್ಥಾನಕ ಪ್ರಣಾಮ ಸಮಭಂಗಭಂಗಿಯಲ್ಲಿರುವ ನಾಯಕ (ನಾಯಕಿ!) ನ ಶಿಲಾ ಉಬ್ಬುಶಿಲ್ಪ ಹೊಂದಿದ್ದು ಫಲಕದ ಮೇಲ್ಭಾಗದಲ್ಲಿ ಶಿವಲಿಂಗ ಚಂದ್ರ, ಸೂರ್ಯ, ನಂದಿಯ ಉಬ್ಬುಶಿಲ್ಪಗಳನ್ನೂ ಹೊಂದಿದೆ. ನಾಗ ಶಿಲ್ಪಗಳ ನಡುವೆ ಇದನ್ನು ನಿಲ್ಲಿಸಲಾಗಿದೆ. ಇದು ಈ ಪರಿಸರದಲ್ಲಿ ಶಿವನಿಷ್ಠೆ ಹಾಗು ಶಿವಸಂಸ್ಕೃತಿಯ ಸಂಕೇತವಾಗಿ, ಉಭಯ ಮಠಗಳ ಪ್ರಭಾವದ ಜನಪದ ಸಾಕ್ಷಿಯಾಗಿ ಕಾಣಬರುತ್ತದೆ.

ಕಾಳಿಂಗಯ್ಯನ ಮಠ, ಶಿರಾ (ತುಮಕೂರು ಜಿಲ್ಲೆ)

ಕಾಳಿಂಗಯ್ಯನಮಠ ಎಂದು ಹೆಸರಾದ ಶಿರಾದ ಮಠವು, ಶ್ರೀ ನಿಡುಮಾಮಿಡಿ ಪೀಠದ ಶಾಖಾ ಮಠವಾಗಿದೆ. ಕಾಳಿಂಗಯ್ಯ ಪೀಠದಿಂದ ಪ್ರಸಾದಿತನಾದವ, ಶಾಖಾ ಮಠಗಳ ನಿರ್ವಹಣೆಗೆ ನಿಂತವನೆಂಬ ಕಾರಣ ಅವನ ಹೆಸರು ಅಲ್ಲಿನ ಮಠಕ್ಕೆ ಪ್ರಚಲಿತಗೊಂಡಿರುವಂತಿದೆ. ಈ ಮಠವು ವಿಜಯನಗರ ಶೈಲಿಯ ಕೆಲವಾರು ಚಹರೆಗಳನ್ನು ಹೊಂದಿ ತನ್ನ ಪ್ರಾಚೀನತೆಯನ್ನು ಸಾರುವಂತಿದೆ. ಮಧ್ಯೆ ಪ್ರವೇಶ ದ್ವಾರವಿದ್ದು ಒಳಗೆ ಸಾಗಿದರೆ ಆಯುತ ದೀರ್ಘವೇದಿಕೆಯ ಮುಖಮಂಟಪವಿದ್ದು ಶಿಲಾಸ್ತಂಭಗಳನ್ನು ಹೊಂದಿದೆ. ಈ ಸ್ತಂಭಗಳು ಬುಡಭಾಗದಲ್ಲಿ ನಾಲ್ಮೊಗಗಳ ಬ್ರಹ್ಮಕಾಂತಭಾಗ, ಮಧ್ಯೆ ಎಂಟು ಮುಖಪಟ್ಟಿಯಾದ ಕೆತ್ತನೆಯ ವಿಷ್ಣುಕಾಂತ ಮಾದರಿಯ ಸ್ತಂಭಗಳಾಗಿದ್ದು, ನಿರಾಶ್ರಯವಾಗಿ ಯಾವ ಶಿಲ್ಪಗಳೂ ಕಾಣಬರುವುದಿಲ್ಲ. ಈ ವೇದಿಕೆಯ ಮುಂದೆ ಪುಷ್ಪವ್ಯಾಳಿಯ ಸೋಪಾನದ ಮೆಟ್ಟಿಲುಗಳಿವೆ. ಈ ವೇದಿಕಾ ಮಂಟಪದ ಕೇಂದ್ರದಲ್ಲಿ ಗರುಗದ್ದಿಗೆ ಇದೆ. ಗದ್ದುಗೆ ಮಂಟಪದ ಬಾಗಿಲುವಾಡವು ಪದ್ಮತೋರಣಗಳ ಅಲಂಕೃತ ಉಬ್ಬು ಶಿಲ್ಪವನ್ನು ಹೊಂದಿದೆ. ಬಾಗಿಲುವಾಡದ ನೆತ್ತಿಯಲ್ಲಿ ಶಿವಲಿಂಗ, ಭುವನೇಶ್ವರಿಯಲ್ಲಿ (ಛತ್ತಿನಲ್ಲಿ) ಗಿಳಿ–ಕಮಲ ಶಿಲ್ಪಗಳಿಂದ ಅಲಂಕರಣವಿದೆ. ಗದ್ದುಗೆ ಮಂಟಪದ ಒಳಭಾಗದಲ್ಲಿ ಇಂಡೋ–ಇಸ್ಲಾಮಿಕ್ ಶೈಲಿಯ ದೀಪದ ಗೂಡುಗಳ ರಚನೆಗಳು ಕಾಣಬರುತ್ತವೆ. ಈ ಮಠದ ಮೇಲ್ಛಾವಣಿಯು ಇಂಡೋ–ಇಸ್ಲಾಮಿಕ್ ಶೈಲಿಯ ಗಾರೆಯಚ್ಚಿನ ತೆನೆಗಳ ಸಾಲನ್ನು ಹೊಂದಿದೆ. ನಾಲ್ಕು ದಿಷೆಯ ಮಧ್ಯಭಾಗದಲ್ಲಿ ಅರಳು ಪದ್ಮಗಳ ಸುಂದರ ಶಿಲ್ಪಗಳನ್ನು ಹೊಂದಿ ಕಲಾತ್ಮಕತೆಯನ್ನು ಪ್ರದರ್ಶಿಸಿದೆ.

ಈ ಮಠದ ಬಲ ಅಂಕಣಕ್ಕೆ ಪ್ರತ್ಯೇಕ ಪ್ರವೇಶದ್ವಾರವಿದ್ದು, ಒಳಗೆ ಇರುವ ಶಿಲಾಸ್ತಂಭಗಳು ಸಾಶ್ರಯ ಸ್ತಂಭಗಳಾಗಿ ಆಕರ್ಷಕವಾಗಿವೆ. ಈ ಸ್ತಂಭ ಶರೀರದ ಮೇಲೆ ನಂದಿ, ಮಿಥುನನಾಗ–ನಾಗಿಣಿ, ವಿಜಯನಗರ ಶೈಲಿಯ ಅಸೀನ ಸಿಂಹ, ನೇಹ ಸರಸದಲ್ಲಿರುವ ಕೋತಿ ಮತ್ತು ಹಾವು, ಗಣಪತಿ ಇತ್ಯಾದಿ ಶಿಲ್ಪಗಳು ಗಮನಾರ್ಹವಾಗಿವೆ. ಶಿವಾಲಿಂಗರಾಧನೆಯ ಭಂಗಿಯಲ್ಲಿ (ಏಕ ಪೀಠದ ಮೇಲೆ ನಂದಿ ಅದರ ಮುಂದೆ ಕಿರು ಶಿವಲಿಂಗ ಶಿಲ್ಪ) ಬಿಲ್ವ ವೃಕ್ಷದ ಕೆಳಗೆ ಮಠದ ಎಡ ಮುಂಬದಿಯಲ್ಲಿ ಇರುವ ಶಿಲ್ಪ ೧೭–೧೮ನೇ ಶತಮಾನದ ಶಿಲ್ಪದ ಮಾದರಿಯನ್ನು ಹೋಲುತ್ತದೆ. ಮಠದ ಹೊರ ಆವರಣದಲ್ಲಿ ಪೂರ್ವಕ್ಕೆ ಸುಮಾರು ನೂರು ಅಡಿ ದೂರದಲ್ಲಿರುವ ಅರಳಿ–ಬೇವು ವೃಕ್ಷಗಳ ಕಟ್ಟೆಯಲ್ಲಿ ವೀರಭದ್ರನ ಗ್ರಾಮೀನ ಕೆತ್ತನೆ ಮಾದರಿಯ ಚತುರ್ಭುಜ, ಸ್ಥಾನಕ ವೀರಭದ್ರನ ಉಬ್ಬು ಶಿಲ್ಪದ ಶಿಲಾ ಫಲಕವಿದೆ. ಹಿಂಗೈನಲ್ಲಿ ತ್ರಿಶೂಲ, ಡಮರು, ಮುಂಬಲಗೈಯಲ್ಲಿ ಖಡ್ಗ, ಎಡಗೈಯಲ್ಲಿ ಬಹುಶಃ ಸೊಂಟಮಟ್ಟದಲ್ಲಿ ಎತ್ತಿಹಿಡಿದ ಢಾಲು (ಭಿನ್ನಗೊಂಡಿದೆ), ಎಡಸೊಂಟದಿಂದ

ಬಲಸೊಂಟದವರೆಗೆ ಸಾಗಿರುವ ರುಂಡಮಾಲೆ ಇರುವ ಶಿಲ್ಪವಿದಾಗಿದೆ. ದಕ್ಷನ ಶಿಲ್ಪ, ವೀರಭದ್ರನ ಬಲ ಬುಡಭಾಗದಲ್ಲಿ ಅಸ್ಪಷ್ಟ ಚಹರೆಯಾಗಿದೆ. ಈ ಶಿಲ್ಪ ವಿಜಯನಗರೋತ್ತರ ಶಿಲ್ಪವಾಗಿದೆ. ಮಠದ ಗಡಿಸೂಚಿತ ಲಿಂಗಮುದ್ರೆ ಕಲ್ಲೂಗಳೂ ಈಶಾನ್ಯದಲ್ಲಿದ್ದು ಮಠದ ವಿಸ್ತಾರ ಸೂಚಿಯಾಗಿದೆ. ಇದರಿಂದ ಮಠಕ್ಕೆ ವಿಜಯನಗರೋತ್ತರದಲ್ಲಿ, ಸ್ಥಳೀಯ ಆಡಳಿತಗಾರರು, ಸಿರಾನವಾಬರು ಸೇರಿದಂತೆ ತೋರಿದ ಗೌರವ ಹಾಗು ಅದು ಬೀರಿದ ಪ್ರಭಾವಗಳು ತಿಳಿದು ಬರುತ್ತದೆ. ಈ ಮಠದಲ್ಲಿ ಶೈವ ಮತ್ತು ವೈಷ್ಣವ ಸಾಹಿತ್ಯಗಳ ಓಲೆಗರಿಗಳ ಸಂಗ್ರಹವಿದ್ದು ಮಠದ ಧರ್ಮ ಸಮನ್ವಯ- ಹರಿಹರ ಸಮನ್ವಯ ದ್ಯೋತಕತೆಯು ಕಾಣಬರುತ್ತದೆ.

ನಿಡುಮಾಮಿಡಿ ಮಠ, ಕಾಂಚೀಪುರಂ (ತಮಿಳುನಾಡು)

ಈ ಮಠವನ್ನು ಜ॥ ಶ್ರೀ ಕರಿಬಸವ ಸ್ವಾಮಿಗಳಿಗೆ, (ಕ್ರಿ.ಶ.೧೫೭೫-೧೬೦೦) ಅವರು ಮಾಡಿದ ಮಣಿಹಕ್ಕಾಗಿ ಕಂಚಿಯ ದೊರೆಯು ಕಟ್ಟಿಸಿಕೊಟ್ಟಿದ್ದಾಗಿದೆ. ಈ ಮಠದ ಸಂಸ್ಥಾಪಕರು 'ಕಂಚಿ ಕರಿಬಸವಸ್ವಾಮಿಗಳು' ಎಂದೇ ಪ್ರಸಿದ್ಧರಾಗಿದ್ದು ಇದು ಪೀಠದ ಶಾಖಾ ಮಠವಾಗಿದೆ. ಇದರ ಹಿಂದಿರುವ ಐತಿಹ್ಯವು ಕುತೂಹಲಕಾರಿಯಾಗಿದೆ. ಶಿವಕಂಚಿಯಲ್ಲಿ ಏಕಾಮ್ರೇಶ್ವರ ಲಿಂಗದ ದರ್ಶನ ಮಾಡಿಕೊಂಡು ವರದರಾಜಸ್ವಾಮಿ ದೇಗುಲಕ್ಕೆ ಶ್ರೀ ಕರಿಬಸವಸ್ವಾಮಿಗಳು ದರ್ಶನಾರ್ಥವಾಗಿ ಹೋದರಂತೆ. ಮುಚ್ಚಿದ್ದ ದೇಗುಲದ ಬಾಗಿಲು ಸ್ವಾಮಿಗಳು ಬಂದ ತಕ್ಷಣ ತಾವಾಗೆ ತೆರೆದುಕೊಂಡವಂತೆ; ದೇವರೆ ಸ್ವಾಮಿಗಳನ್ನು ಎದುರುಗೊಂಡು ಸ್ವಾಗತಿಸಿದನಂತೆ. ದೇವನು ತನ್ನಲ್ಲಿರುವ ಕೆಲವು ಆಭರಣಗಳನ್ನು ಸ್ವಾಮೀಜಿಯವರಿಗೆ ಕೊಟ್ಟನಂತೆ. ಆದರೆ ಜನರು ಮಾತ್ರ ಅವರಲ್ಲಿದ್ದ ದೇವಾಭರಣಗಳನ್ನು ಕಂಡು ಅವರೇ ಅಪಹರಿಸಿದ್ದಾರೆಂದು ಆರೋಪಿಸಿದರು, ಎಂದೆಲ್ಲ ಇದೆ. ಆದರೆ ವಾಸ್ತವ ವಿವೇಚನೆಯನ್ನು ಹೀಗೆ ಮಾಡಬಹುದು- ವರದರಾಜ ಸ್ವಾಮಿಯ ದರ್ಶನಕ್ಕೆಂದು ಸ್ವಾಮಿಗಳು ಹೋದಾಗ ಗರ್ಭಗೃಹವು ತೆರೆಯಲ್ಪಟ್ಟಿದ್ದು ಕಳ್ಳರು ಆಭರಣಗಳನ್ನು ದೋಚಿ ಓಡಿ ಹೋಗಲೆತ್ನಿಸಿದಾಗ ಸ್ವಾಮಿಗಳೆ ಅವರನ್ನು ತಡೆದು ಗುರು ಹಿತ ನುಡಿಗಳನ್ನು ಹೇಳಿ ಆಭರಣಗಳನ್ನು ಪಡೆದು ದೇಗುಲದ ಸ್ಥಾನಿಕರಿಗೆ ಒಪ್ಪಿಸಿದರು. ಕಳ್ಳರು ತಮ್ಮ ತಪ್ಪನ್ನು ಒಪ್ಪಿಕೊಂಡು ಕೃಪೆ ಬೇಡಿದರು. ದೇಗುಲ ಸ್ಥಾನಿಕನು, ದೇವರ ಆಭರಣಗಳನ್ನು ರಕ್ಷಿಸಿ, ಕಳ್ಳರ ಮನಪರಿವರ್ತನೆ ಮಾಡಿದ ಸ್ವಾಮೀಜಿಯವರನ್ನು ಆಹ್ವಾನಿಸಿ ಸಮಸ್ತರ ಸಮ್ಮುಖದಲ್ಲಿ ಭಕ್ತಿಗೌರವದಿಂದ ಸನ್ಮಾನಿಸಿದ. ಈ ವಿಷಯವನ್ನು ಕಂಚಿಯ ಅರಸನು ತಿಳಿದು ಶ್ರೀ ನಿಡುಮಾಮಿಡಿ ಪೀಠದ ಶಿಷ್ಯನಾದ, ಸ್ವಾಮೀಜಿಯವರ ಅಪೇಕ್ಷೆಯ ಮೇರೆಗೆ ಶಿವಕಂಚಿಯಲ್ಲಿ ಶಾಖಾಮಠವನ್ನು ಕಟ್ಟಿಸಿಕೊಟ್ಟ. ಪಂಡಿತಾರಾಧ್ಯ ಚರಿತ್ರಮು ಕೃತಿಯಲ್ಲಿ ಇದು ದಾಖಲಾಗಿರುವ ಬಗೆ.

ವೆಂಬಡಿ ದ್ವಾರಮುನ ಕವಾ
ಟಂಬುಲು ತನುದಾನೇವೀಡುಟಿಯುಗಾಂಚಿ ಪ್ರಮೋ
ದಂಬುನನು ವರದರಾಜುರ
ಯೆಂಬುನನೆ ದುರುಗನೆ ವಚ್ಚಿಯಧಿಕ ಪ್ರೀತಿನ್

ಈ ಪದ್ಯದಿಂದ ಮುಂದೆ ಎಂದಿನ ಕಥೆಯು ಮುಂದುವರೆಯುತ್ತದೆ. ಶಿವಕಂಚಿಯ ಏಕಾಮ್ರೇಶ್ವರ ದೇಗುಲದಲ್ಲಿರುವ ಮಾಮರವು, ಕಂಚಿ ಕರಿಬಸವ ಸ್ವಾಮಿಗಳು ಮಾಮಿಡಿ ನೆಟ್ಟ ನೆಲೆಯಲ್ಲಿ ಬೆಳೆಸುವ ಮರದ ಪ್ರತೀಕವಾಗಿದೆ. ಶ್ರೀ ನಿಡುಮಾಮಿಡಿ ಪೀಠಾಧ್ಯಕ್ಷರು ತಮಿಳುನಾಡಿನ ಸಂಚಾರದಲ್ಲಿ ಭಕ್ತರಿಗೆ ದರ್ಶನ ನೀಡುವ ಸಮಯದಲ್ಲಿ ಉಳಿಯುತ್ತಿದ್ದರು. ಈ ಮಠವು ಜ॥ ಖಾಸಾ ಮಠವಾಗಿದ್ದು, ಅವರ ನೇರ ನಿರ್ವಹಣೆಗೆ ಸೇರಿತ್ತು. ಪೀಠಾಧ್ಯಕ್ಷರಿಂದ ನಿಯುಕ್ತರಾದ ಜಂಗಮರು ಇಲ್ಲಿ ವಾಸ್ತವ್ಯವಿರುತ್ತಿದ್ದರು. ಬಿನ್ನಹ-ವಿಡುಗಡೆಯ ಕಾಯಕವನ್ನು ನಿರ್ವಹಿಸಿ ಮಠದ ಉಸ್ತುವಾರಿಯನ್ನು ನೋಡಿಕೊಳ್ಳುತ್ತಿದ್ದರು.

ಈ ಮಠವು ಒಂದು ಕಾಲಕ್ಕೆ ಭಾರಶಿವರ ಸಂಪ್ರದಾಯವು (ಶಿಬಿರದ ಮೇಲೆ ಶಿವಲಿಂಗವನ್ನು ಹೊತ್ತುಕೊಂಡು ಸಂಚರಿಸುತ್ತಿದ್ದವರ ಸಂಪ್ರದಾಯ; ಮಸ್ತಕೇ ಲಿಂಗಧಾರಣೇ) ಪ್ರಚಲಿತವಿದ್ದ ಪ್ರದೇಶದಲ್ಲಿ ಸ್ಥಾಪಿತವಾದ ಕಾರಣ, ಮಾರ್ಪಾಡಾದ ರೂಪದಲ್ಲಿ ಆ ಸಂಪ್ರದಾಯ ಸೂಚಿ ಶಿಲ್ಪಗಳು, ಈ ಮಠದಲ್ಲಿ ಸಾಂಕೇತಿಕವಾಗಿ ಕೆತ್ತಲ್ಪಟ್ಟಿವೆ. ಏಕಾಮ್ರೇಶ್ವರ ದೇಗುಲದ ಹೊರ ಪ್ರಕಾರದ ಸ್ತಂಭಶಿಲ್ಪಗಳಲ್ಲಿ ತಲೆಯ ಮೇಲೆ ಶಿವಲಿಂಗ ಹೊತ್ತಿರುವ ಹನುಮಂತನ ಶಿಲ್ಪವಿರುವುದು ಈ ಹಿನ್ನಲೆಯಲ್ಲಿ ಗಮನಾರ್ಹ ಅಂದರೆ ಸುಮಾರು ೨ ಸಾವಿರ ವರ್ಷಗಳ ಪ್ರಾಚೀನ ಶಿವ ಸಂಪ್ರದಾಯದ ಕ್ಷೇತ್ರದಲ್ಲಿ ಈ ಮಠವು ೧೬ನೇ ಶತಮಾನದಲ್ಲಿ ಸ್ಥಾಪನೆಗೊಂಡಿದೆ.

ಈ ಮಠವು ಪೂರ್ವಾಭಿಮುಖವಾಗಿದ್ದು, ದ್ವಾರಗೋಪುರದ ನಂದಿಯ ವಿಗ್ರಹಗಳು ಎರಡೂ ಬದಿಯಲ್ಲಿವೆ. ಅನುಕೂಲಕ್ಕಾಗಿ ಪಶ್ಚಿಮ ದಿಕ್ಕಿನಲ್ಲಿ ಪ್ರವೇಶ ದ್ವಾರವನ್ನು ನಿರ್ಮಿಸಲಾಗಿದೆ. ಪ್ರಸ್ತರ ಭಾಗದ ಮೇಲುಗಡೆ ಕೈಪಿಡಿಯಂತ ರಚನೆಯಿದ್ದು ತ್ರಿಭುಜಾಕಾರದ ಗೂಡುಗಳ ಸಾಲು ಇದ್ದು ಮುಖಗೋಪುರವು ಅಲಂಕೃತಗೊಂಡಿವೆ. ಗೋಪುರವು ವಿಜಯನಗರ ಶೈಲಿಯ ಸಿಂಹ ಮುಖ ಹೊಂದಿದೆ. ಮಠದೊಳಗೆ ಗದ್ದುಗೆ ಇದೆ. ಗದ್ದುಗೆಯ ಮಂಟಪದ ಮುಂಬದಿಯ ಮಂಟಪಗಳು ಚತುರ್ಮುಖ ಸಾಶ್ರಯಗಳು ಉಬ್ಬುಶಿಲ್ಪ ಸಹಿತ ಸ್ತಂಭಗಳಾಗಿವೆ. ಈ ಭಾಗದಲ್ಲಿರುವ ಛತ್ತನ ಮೇಲ್ಭಾಗದ ಉಬ್ಬು ಶಿಲ್ಪಗಳು ಆಕರ್ಷಕವಾಗಿವೆ. ವ್ಯಕ್ತಿಯ ಮೇಲೆ ವ್ಯಕ್ತಿಯು ಇದ್ದು ಶಿರದ ಮೇಲೆ ಎತ್ತಿದ ತೋಳುಗಳಿಂದ ಎತ್ತಿಹಿಡಿದ ಪೀಠರಹಿತ, ನಾಗ ಹೆಡೆ ಆವೃತ ಶಿವಲಿಂಗದ ಪ್ರತಿಷ್ಠೆಯಿದೆ. ಒಂದು ರೀತಿಯಲ್ಲಿ ಭಾರಶಿವರ ತಪೋನಿಲುವು ಎನ್ನುವಂತಿದೆ. ಆಮೆಯ ಶಿಲ್ಪವನ್ನು ವಿಮುಖವಾಗಿ

ಅಳವಡಿಸಲಾಗಿದೆ. ದ್ವಯ ನೀಳ ನಾಗಗಳೂ ಹೆಡೆಯ ಮೇಲೆ ಹೊತ್ತ ಶಿವಲಿಂಗ ಶಿಲ್ಪವೂ ಗಮನಾರ್ಹ ಸಂಕೇತವಾಗಿದೆ. ಪಾರ್ಶ್ವದಲ್ಲಿ ಹಲ್ಲಿಯ ಉಬ್ಬು ಶಿಲ್ಪಗಳು ವಿಮುಖ ದೆಸೆಯಲ್ಲಿದೆ. ಮರಿನಾಗರ ಹಾವಿನಬಾಲ ಹಿಡಿದಿರುವ ನೀಳ ಮತ್ಸ್ಯದ ಶಿಲ್ಪವೂ ಕುತೂಹಲಕಾರಿ ಆಗಿದೆ.

ಈ ಶ್ರೀಮಠದ ಸ್ತಂಭ ಶಿಲ್ಪಗಳಲ್ಲಿ, ಅಸೀನ ಪ್ರಣಾಮ ಭಂಗಿಯ ಧ್ಯಾನಸ್ಥ ಜಟಾಬಿತ್ತರದ ಮುನಿ, ಬೇಡರ ಕಣ್ಣಪ್ಪ, ಭಕ್ತ ಮಾರ್ಕಂಡೇಯ ಸ್ಥಾನಕ ಪ್ರಣಾಮ ಭಂಗಿಯ ಊರ ನಾಯಕ (ಕಂಚಿಯ ಅರಸ! ಶಿರೋವೇಷದ ಲಕ್ಷಣಗಳು ಹಾಗೆ ಸೂಚಿಸುವಂತಿವೆ), ಇಷ್ಟಲಿಂಗಪೂಜಾನುಷ್ಠಾನ ಜಟಾವಿಸ್ತರದ ಮುನಿ (ಶಿವಶರಣೆ!) ಹಾಗು ಈ ಶಿಲ್ಪದ ಮೇಲೆ ತಮಿಳುನಾಡು ಶಿವಭಕ್ತರ ಶೈಲಿಯಲ್ಲಿ ತುದಿಗಂಟುಸಹಿತವಾದ ವೃತ್ತಾಕಾರದ ಜಟೆಯ ಸುತ್ತುವರಿಯನ್ನು ಹೊಂದಿದ ಶಿರಶಿಲ್ಪ ಮಾತ್ರ ಇರುವುದೂ ಗಮನಾರ್ಹವಾಗಿದೆ. ಈ ಶಿಲ್ಪ ಸಂಕೇತಗಳು ಅಂಗದ ಮೇಲೆ ಲಿಂಗದ ಪರಿಕಲ್ಪನೆಯ ಭಾರಶಿವ ಸಂಪ್ರದಾಯದ ಪರಿಸರ, ಕಂಚಿಯಲ್ಲಿ ಕರಿಬಸವ ಸ್ವಾಮಿಗಳ ಕುರಿತ ಐತಿಹ್ಯ, ಪ್ರಾಣಿ ಬದುಕಿನ ನೈಜ ಸಂಗತಿಗಳ ಮಾನವಾನ್ವಯಗಳು, ಶಿರ ಪವಾಡ ಐತಿಹ್ಯ ಪರಂಪರೆಯ ಶಿವಶರಣರ ಕಥೆ (ಏಕಾಂತ ರಾಮಯ್ಯ!) ಇತ್ಯಾದಿಗಳನ್ನು ಸೂಚಿಸುವಂತಿವೆ. ಶಿವ–ಶಕ್ತಿ ಪರಂಪರೆಯ ಸಂಕೇತಗಳಾಗಿ ಕಾಣುತ್ತವೆ. ಮಠದ ಪೂರ್ವ ಭಿತ್ತಿಯಲ್ಲಿನ ಜಾಲಂಧ್ರ ರಚನೆಯೂ ಆಕರ್ಷಕವಾಗಿದೆ.

ಇದಲ್ಲದೆ ಕಂಚಿಯ ಏಕಾಮ್ರೇಶ್ವರ ಲಿಂಗವೂ ವಿಶಿಷ್ಟವಾಗಿದ್ದು ಆರ ಬಾಣ ಭಾಗದ ಮೇಲೆ (ನೆತ್ತಿ) ತುಸು ಉಬ್ಬಿದ ಲಿಂಗಾಕಾರದ ರಚನೆಯಿದೆ. ಅರ್ಚಕರು ಅದನ್ನು ಇಷ್ಟಲಿಂಗವೆಂದು ಹೇಳುವುದೂ ಉಂಟು. ಎಲ್ಲೋರದ ಕೈಲಾಸನಾಥ ದೇವಾಲಯದಲ್ಲಿ ಗರ್ಭಗೃಹದ ಉತ್ತರ ದಿಸೆಯ ಹೊರಗೋಡೆಯ ದೇವಕೋಷ್ಠದಲ್ಲಿ ಶಿವನು ತನ್ನ ಎಡಭುಜದಲ್ಲಿ ಲಿಂಗವನ್ನು ಹೊತ್ತುಕೊಂಡಂತೆ ಶಿಲ್ಪ ರಚನೆಯಿದೆ. ಅಷ್ಟೇ ಅಲ್ಲ ಶಿವಪಾರ್ವತಿಯರ ನಡುವೆ ಜಲಹರಿ ಪೀಠವಿಲ್ಲದ ಲಿಂಗವಿದ್ದು ಅವರು ಪೂಜಿಸುತ್ತಿರುವಂಥ ಶಿಲ್ಪವಿದೆ. (ಇಂಥದೇ ಶಿಲ್ಪ ಗೌರಿಬಿದನೂರು ತಾ. ಶ್ರೀ ನಿಡುಮಾಮಿಡಿ ಪೀಠದ ಶಾಖಾ ಮಠವಾಗಿದ್ದ ಹೊಸೂರು ಮಠ; ಅದರ ಬಳಿಯ ಅಲಕೂರು ಚನ್ನ ಸೋಮೇಶ್ವರ ಗುಡಿಯ ಪ್ರಾಕಾರದಲ್ಲಿನ ಶಿಲ್ಪವಾಗಿ ಕಂಡುಬಂದಿದೆ ಕಲ್ಹಣನ ರಾಜತರಂಗಿಣಿಯಲ್ಲಿ ಶಿವನು ಮದುವೆಯ ಸಂದರ್ಭದಲ್ಲಿ ಅವನೇ ಲಿಂಗವೊಂದನ್ನು ಮಾಡಿ ಪೂಜಿಸಿದ ಉಲ್ಲೇಖವಿದೆ. ಮಸ್ತಕೇ ಲಿಂಗಧಾರಣೇ' ಎಂಬ ಸಂಪ್ರದಾಯವೇ ಇದೆ. ಏಕಾಮ್ರೇಶ್ವರ' ಲಿಂಗದ ಹಿಂಬದಿಗೆ ಶಿವ ಪಾರ್ವತಿಯರ ಉಬ್ಬುಶಿಲ್ಪವನ್ನು ರೂಪಿಸಿ ಹಿತ್ತಾಳೆ ಮುಖ ಹೊದಿಸಿದಂತಿದೆ. ಇನ್ನೂ, ಆಮ್ರ ಎಂದರೆ ಮಾವಿನ ಮರ ಎಂಬ ಅರ್ಥವಿರುವಲ್ಲಿ ದೇಗುಲ

ಆವರಣದಲ್ಲಿ ವ್ಯಾಳಿ ಸೋಪಾನದ ಮಂಟಪಗೋಪುರದ ವೇದಿಕೆಯಲ್ಲಿ ಒಂದೇ ಮಾಮರ ವಿದ್ದು ಏಕಾಮ್ರನಾಥೇಶ್ವರ ಎಂಬ ಹೆಸರೂ ರೂಢಿಗೆ ಬಂದಂತಿದೆ. ಈ ಮಾಮರಕ್ಕೆ (ಮಾಮಿಡಿ) ಶ್ರೀ ನಿಡುಮಾಮಿಡಿ ಪೀಠದ ಕಂಚಿ ಕರಿಬಸವ ಸ್ವಾಮಿಗಳ ಸಂದರ್ಭವೂ ಹೊಂದಾಣಿಕೆಯಾದಂತಿದೆ. ಶ್ರೀ ಮಠದಲ್ಲಿ ಹಲ್ಲಿಯ ಶಿಲ್ಪವು ವಿಷ್ಣುಕಂಚಿಯ ವರದರಾಜ ದೇಗುಲದಲ್ಲಿರುವ ಹಲ್ಲಿಯ ಶಿಲ್ಪವು ಸಂವಾದಿ ಸ್ವರೂಪವೇ? ಎಂಬುದು ಅವರಿಗೂ ವರದರಾಜಸ್ವಾಮಿ ದೇಗುಲದ ಬಾಗಿಲು ಪವಾಡ (ಹಾಗು ಶಿರಸ್ಸು ದೃಢ ನಿಲ್ಲಿಸಿದ ಐತಿಹ್ಯ!) ಸಂಬಂಧದ ಸಂಕೇತವಾಗಿ ಇದ್ದಿರಬಹುದೆ? ಎನಿಸುತ್ತದೆ. ಅಂತು ಭಾರಶಿವರ- ವಾಕಾಟಕರ ಸಂಪ್ರದಾಯದ ಶಿವ ಸಂಸ್ಕೃತಿಯ ಪ್ರದೇಶದಲ್ಲಿ ಈ ಮಠವಿರುವುದು ಗಮನಕ್ಕೆ ಬರುತ್ತದೆ. ಹಾಗು ವೀರಶೈವ ಸಂಪ್ರದಾಯದ ಸಂಕೇತವನ್ನು ಈ ಮಠ ಯಶಸ್ವಿಯಾಗಿ ರೂಪಿಸಲು ಕಾರಣವಾಗಿರುವುದೂ ಕಾಣದಂತಿದೆ.

ಏಕಾಮೇಶ್ವರ ದೇಗುಲಗಳ ಪ್ರಕಾರಗಳಲ್ಲಿ ಮುಖ್ಯಗೋಪುರ ದಾಟಿ ಬಂದ ಮೇಲೆ ಒಳ ದೇಗುಲ ಪ್ರವೇಶದ್ವಾರದ ಮಂಟಪದ ಭಿತ್ತಿಯಲ್ಲಿ ದಶಭುಜ ಪಂಚಮುಖಿ ಸ್ಥಾನಕ ಮೂರ್ತಿಯೊಂದು ಭಕ್ತಿಯಿಂದ ಇಷ್ಟಲಿಂಗ ಪೂಜೆಗೈಯುತ್ತ ನರ್ತನ ಶೈಲಿಯಲ್ಲಿರುವುದು ಕಾಣಬರುತ್ತದೆ; ಹೀಗೆ ಮಹಾದ್ವಾರದ ಹೊರಮಂಟಪದ ಸ್ತಂಭದಲ್ಲಿಯೂ ಇದೇ ಬಗೆಯ ಶಿಲ್ಪವಿದ್ದು, ಉಭಯ ಕರಗಳಲ್ಲಿ ತಾಳ ಹಿಡಿದಂತೆ ತೋರಿ, ಪಾದಗಳಲ್ಲಿ ನೃತ್ಯ ಭಂಗಿ ತೋರುವಂತೆ ಭಾಸವಾದರೂ ಇಷ್ಟಲಿಂಗ ಹಿಡಿದು ಪೂಜಿಸುವ ಭಂಗಿಯಲ್ಲಿರುವಂತೆಯೇ ಕಾಣುವುದು ಗಮನಾರ್ಹ. ಈ ಶಿಲ್ಪಗಳು ವಿಶ್ವಕರ್ಮ ಮೂರ್ತಿಯ ಕರದಿಷ್ಟಲಿಂಗ ಪೂಜಾ ಸನ್ನಿವೇಶದ ಸಂಕೇತವಾಗಿ ಕಾಣುವಂತಿವೆ.

ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಹೊಸೂರು ಪಟ್ಟಣದಲ್ಲಿ ವೀರಶೈವಾಚಾರ ವಿಶ್ವಕರ್ಮ ಜನಾಂಗವು ಇದೆ. ಗುರುವರ್ಗವೂ ಇದೆ. ಈ ಹಿನ್ನೆಲೆಗಳನ್ನೆಲ್ಲ ಗಮನಿಸುವಲ್ಲಿ ಏಕಾಮ್ರನಾಥ ಹಾಗು ಕಂಚಿ ಕರಿಬಸವೇಂದ್ರರ ಸಂಬಂಧಗಳನ್ನು ಅನುಲಕ್ಷಿಸಿದರೆ ಶಿಲ್ಪಗಳಲ್ಲಿಯೂ ಶ್ರೀ ನಿಡುಮಾಮಿಡಿ ಪೀಠದ ಗುರುಗಳ ಪ್ರಭಾವ ಕಾಣುತ್ತದೆ. ತಮಿಳುನಾಡಿನ ವೀರಶೈವರಲ್ಲಿ ಜಂಗಮ, ಪಂಡಾರಂ, ತಂಬಿರಾನ್ ಹಾಗು ವೀರಶೈವ ಐಯ್ಯರ್‌ಗಳಿದ್ದು, ಇವರೆಲ್ಲ ಕಂಚಿಯ ಶಾಖಾ ಮಠಕ್ಕೆ ಭಕ್ತಿ ಗೌರವಾದರಗಳನ್ನು ತೋರಿದವರಾಗಿದ್ದಾರೆ.

ಮಗದೊಂದು ಗಮನಾರ್ಹ ಸಂಗತಿ ಎಂದರೆ ಬಸ್ಟ್ಯಾಂಡ್ ಬಳಿ ಇರುವ ವೀರಭದ್ರ ಗುಡಿಯ (ಏಕಾಮ್ರನಾಥ ದೇಗುಲದ ಹಾದಿ) ವೀರಭದ್ರ ಶಿಲ್ಪದ ಲಕ್ಷಣಗಳಾಗಿವೆ. ಗರ್ಭಗೃಹದಲ್ಲಿ ಬಲಗೈಯಲ್ಲಿ ನೀಳ ಖಡ್ಗ. ಎಡಗೈಯಲ್ಲಿ ಸೊಂಟಮಟ್ಟ ಎತ್ತಿಹಿಡಿದಿರುವ ಪಾರ್ಶ್ವಮುಖ ಡಾಲು ಇರುವ ದ್ವಿಭುಜ ವೀರಭದ್ರ

ವಿಗ್ರಹವಿದೆ. ಇದು ಕುಮಾರ ವೀರಭದ್ರನ ಶಿಲ್ಪ ಲಕ್ಷಣವಾಗಿದೆ. ನಿಡುಮಾಮಿಡಿ ಪೀಠ ಸಂಪ್ರದಾಯದಲ್ಲಿ ಕುಮಾರ ವೀರಭದ್ರ ಸ್ಥಾಪನೆಯು ಕಂಡುಬರುವಲ್ಲಿ ಪೀಠದಲ್ಲಿರುವ ಗವಿಯ ಗುಂಡಿ ವೀರಭದ್ರನೂ ದ್ವಿಭುಜ ವೀರಭದ್ರನಾಗಿದ್ದು ಅವನಿಗೆ ಅನ್ವಯವಾದ ಕುಮಾರ ವೀರಭದ್ರ ಹೆಸರು ಪೀಠದ ಒಳ ಅವರಣದಲ್ಲಿರುವ ವೀರಭದ್ರನಿಗೂ ಚತುರ್ಭುಜನಾದರೂ ಅನ್ವಯ ಹೆಸರು ಒದಗಿದೆ. ಹೀಗಾಗಿ ಕಂಚಿಯಲ್ಲಿ ಕಂಚಿ ಕರಿಬಸವಸ್ವಾಮಿಗಳ ಕಾಲದಲ್ಲಿ ಈ ವೀರಭದ್ರ ಪ್ರತಿಷ್ಠೆ ನಡೆದಿರುವಂತಿದೆ. ಇದಲ್ಲದೆ, ದ್ವಾರಭದ್ರರು ಬಾಗಿಲುವಾಡದಲ್ಲಿ ದ್ವಿಭುಜ ಸ್ಥಾನಕ ಉಬ್ಬುಶಿಲ್ಪವಾಗಿ ಕಡೆಯಲ್ಪಟ್ಟಿರುವುದು ವಿಶೇಷ. ಒಬ್ಬ ದ್ವಾರಭದ್ರನಿಗೆ ಶಿರದಲ್ಲಿ ಶಿವಲಿಂಗ ಬಲಗೈಯಲ್ಲಿ ಖಡ್ಗ. ಎಡಗೈಯಲ್ಲಿ ಊರಿದ ತಳ ಢಾಲುವಿದ್ದರೆ, ಇನ್ನೊಬ್ಬ ದ್ವಾರಭದ್ರನಿಗೂ, ಖಡ್ಗ ಸೊಂಟಮಟ್ಟ ಡಾಲುವಿದೆ ಹಾಗು ಇದು ಸ್ತ್ರೀ ಶಿಲ್ಪದಂತಿದೆ (!) ಇದರ ಜೊತೆಗೆ ಮುಖ ಮಂಟಪದಲ್ಲಿ ಚತುರ್ಭುಜ ವೀರಭದ್ರನು ಹಿಂಗೈಗಳಲ್ಲಿ ತ್ರಿಶೂಲ ಡಮರು, ಮುಂಗೈಗಳಲ್ಲಿ ನೀಳ ಖಡ್ಗ ಢಾಲುಗಳು ಹೊಂದಿ ದಕ್ಷನ ಶಿಲ್ಪ ಸಹಿತವಾಗಿ ರುಂಡಮಾಲೆಯಿರುವ ವೀರಭದ್ರನ ಶಿಲ್ಪವಿದೆ. ಅದು ಭಿನ್ನಗೊಂಡಿರುವ ಶಿಲ್ಪವಾಗಿದೆ. ಬಾಗಿಲವಾಡದಲ್ಲಿ ಹಸ್ತಿ ಜಲಾಭಿಷೇಕದ ಶಿವಲಿಂಗವಿದೆ. ಇದಲ್ಲದೆ ಶಿವಕಂಚಿಯಲ್ಲಿ ಇನ್ನು ಮೂರು ವೀರಭದ್ರ ಮೂರ್ತಿಗಳಿವೆ ಎನ್ನಲಾಗಿದೆ. ಹೀಗೆ ಕಂಚಿಮಠವು ಶ್ರೀಕಂಚಿಕರಿಬಸವ ಮಹಾಸ್ವಾಮಿಗಳ ಮೂಲಕ ವೀರಶೈವ ಪ್ರಭಾವವನ್ನು, ಸಮಾಜ ಮುಖಿಯಾಗಿ, ಸಾಂಸ್ಕೃತಿಕವಾಗಿ ಬೆಳೆಸಿದ ಕುರುಹಾಗಿ ತನ್ನ ಅಸ್ತಿತ್ವವನ್ನು ಪಾರಂಪರಿಕವಾಗಿ ಪಡೆದುಕೊಂಡು ಬಂದಿದೆ.

ಈ ಶಾಖಾ ಮಠಗಳ ವಿವರಗಳು ೧೯೩೬ರಲ್ಲಿ ಶಿಡ್ಲಘಟ್ಟದ ಶ್ರೀ ಎಸ್. ಹಂಪಯ್ಯನವರು ಬರೆದ ನಿಡುಮಾಮಿಡಿಸ್ವಾಮಿಗಳ ಸಂಕ್ಷಿಪ್ತ ಚರಿತ್ರೆಯಲ್ಲಿ ಕಾಣಬರದಿದ್ದರೂ, ಪೀಠಕ್ಕೆ ೧೨೮ ಶಾಖಾ ಮಠಗಳಿದ್ದ ಬಗ್ಗೆ ತಿಳಿಸಿದ್ದಾರೆ (ಪು.೨೫೦ ಅವುಗಳಲ್ಲಿ ೮೦ ಶಾಖಾಮಠಗಳ ಹೆಸರುಗಳನ್ನು ನಮೂದಿಸಿದ್ದಾರೆ. ಈ ಶಾಖಾಮಠಗಳಲ್ಲಿ ಕೆಲವು ಸ್ವತಂತ್ರಗೊಂಡಿವೆ. ಕೆಲವು ಅನ್ಯರಿಂದ ಅಕ್ರಮಣಗೊಂಡಿವೆ ಎಂದಿದ್ದಾರೆ. ಆಕ್ರಮಿತವಾದ ಅಥವಾ ಸ್ವತಂತ್ರವಾದ ಮಠ ಆಕ್ರಮಿಸಿದವರ ಸಂಪ್ರದಾಯಕ್ಕೆ ಸೇರಿಹೋಗಿರುವುದೂ ಉಂಟು.

ಇಂದಿಗೂ ಶ್ರೀ ನಿಡುಮಾಮಿಡಿ ಪೀಠದ ನೇರ ನಿರ್ವಹಣೆಗಿರುವ ಕೆಲವಾರು ಖಾಸಾ ಮಠಗಳು ಇವೆ; ಅನೇಕ ಕಡೆ ಶಾಖಾ ಮಠಗಳು ಇವೆ. ಪೀಠಾಧಿಪತಿಗಳಿಂದ ಪಟ್ಟಾಧಿಕಾರ ಹೊಂದಿದ ಗುರುಗಳು, ದೀಕ್ಷಿತ ನಾಮಸ್ತರಾದ ಜಂಗಮರು ಆಯಾ ಮಠಗಳ ವಾಸ್ತವ್ಯದಲ್ಲಿರುವಲ್ಲಿ ಅವುಗಳು ಪೀಠದ ಶಾಖಾ ಮಠಗಳಾಗಿ ಉಳಿದುಕೊಂಡು ಬಂದಿವೆ. ತುಮಕೂರು ಜಿಲ್ಲೆಯ ಶಿರಾದ ಕಾಳಿಂಗಯ್ಯನ ಮಠ ಇದಕ್ಕೊಂದು ಉದಾಹರಣೆ. ಕೋಲಾರದ ಕಂಬಳಿಮಠದ ಮೂಲಗುರುಗಳಾದ

ಶ್ರೀ ಕಂಬಳಿ ದೇಶಿಕೇಂದ್ರರು ಶ್ರೀ ನಿಡುಮಾಮಿಡಿ ಪೀಠಾಧ್ಯಕ್ಷರಿಂದ ದೀಕ್ಷಿತರಾದವರೆಂದು ೧೯೩೬ರ 'ನಿಡುಮಾಮಿಡಿ ಸ್ವಾಮಿಗಳವರ ಸಂಕ್ಷಿಪ್ತ ಚರಿತ್ರೆ'ಯಲ್ಲಿ ಉಲ್ಲೇಖಿತವಾಗಿದೆ.

ಬಾಗೇಪಲ್ಲಿ ತಾಲ್ಲೂಕು ಗೂಳೂರಿನಲ್ಲಿರುವ ಶ್ರೀ ನಿಡುಮಾಮಿಡಿ ಮಹಾಸಂಸ್ಥಾನ ಪೀಠವನ್ನು ಗೂಳೂರು ಜಂಗಮ ಮಠ, ನಿಡುಮಾಮಿಡಿ ಜಂಗಮಮಠ, ಗೂಳೂರು ಬೃಹನ್ಮಠ, ಗೂಳೂರು ಮಹಾಸಂಸ್ಥಾನ ಇತ್ಯಾದಿ ಹೆಸರುಗಳಿಂದಲೂ ಸಂಬೋಧಿಸಲಾಗಿದೆ. ಹೀಗಾಗಿ ಬಂಗಾರುಪೇಟೆ ತಾಲ್ಲೂಕು ಐತಾಂಡಹಳ್ಳಿ ಮಠ, ಚಿಕ್ಕಬಳ್ಳಾಪುರದ ವಾಪಸಂದ್ರ ಮಠಗಳು ಈ ಮಹಾಸಂಸ್ಥಾನದ ಶಾಖಾಮಠಗಳೆನಿಸಿವೆ. ಶಿಡ್ಲಘಟ್ಟ ಹಾಗು ವಾಪಸಂದ್ರ ಮಠಗಳನ್ನು ಗಾರೆಯಲ್ಲಿ ಕಟ್ಟಿರುವ ಕಾರಣ ಗಾರೆಮಠ ಎಂದು ಕರೆಯಲ್ಪಟ್ಟಿದ್ದೂ ಉಂಟು. ಸ್ಥಳನಾಮದ ಆಧಾರಿತ ಹೆಸರೂ ಮಠಗಳಿಗೆ ಒದಗಿರುವುದುಂಟು.

ಆಂಧ್ರದ ಶ್ರೀಶೈಲದಲ್ಲಿರುವ ಚಂದ್ರಗುಂಡ ಪುಷ್ಕರಣಿ ಹಾಗು ಗವಿ ಮತ್ತು ಅನಂತಪುರದ ಮಠಗಳು ಅನ್ಯಾಕ್ರಮಿತವಾಗಿವೆ. ಕೂಡಲ ಸಂಗಮದಲ್ಲಿದ್ದ ಪೀಠದ ಪ್ರಾಚೀನ ಶಾಖಾ ಮಠವು ಶಿಥಿಲಗೊಂಡು ನೆಲಕಚ್ಚಿದೆ. ಡಾ. ಶ್ರೀ ಜಚನಿಯವರು ತಮ್ಮ ಜೀವಿತ ಕಾಲದಲ್ಲಿ ನರೇಂದ್ರ ಹಾಗು ಐತಾಂಡಹಳ್ಳಿ ಮಠಗಳನ್ನು ಜೀರ್ಣೋದ್ಧಾರ ಮಾಡಿದ್ದರು. ಹಾಗಾಗಿ ಅವು ಸುಸ್ಥಿತಿಯಲ್ಲಿವೆ. ತಮಿಳುನಾಡಿನ ಚನ್ನೈನ ಹೂ ಮಾರುಕಟ್ಟೆಯ ಬಳಿ ಇದ್ದ ಶಾಖಾ ಮಠವು ೧೯೯೨-೯೩ ರಲ್ಲಿ ಅನ್ಯಾಕ್ರಮಣಗೊಂಡಿದೆ. ಕುಂಭಕೋಣ, ಮಧುರೆ, ರಾಮೇಶ್ವರ ಮೊದಲಾದ ಸ್ಥಳಗಳಲ್ಲಿದ್ದ ಶಾಖಾ ಮಠಗಳು ಸ್ವತಂತ್ರಗೊಂಡಿವೆ. ಹಾಲಿ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಮಹಾಸ್ವಾಮಿಗಳು ಕಾಂಚಿಪುರಂ ಪಂಜುಪೇಟೆಯಲ್ಲಿರುವ ಶಾಖಾಮಠವನ್ನು ಜೀರ್ಣೋದ್ಧಾರ ಮಾಡಿದ್ದಾರೆ. ಆ ಮಠದ ಸಾಂಸ್ಕೃತಿಕ ವಿವರಗಳನ್ನು ಈ ಹಿಂದೆಯೇ ನೀಡಿದೆ. ○

ಉಪಸಂಹಾರ:

ಒಟ್ಟಾರೆ ಈ ಪೀಠದ ಮಹಾಮಣಿಹವನ್ನು ಧರ್ಮಗುರು ಪೀಠವಾಗಿ ಸಾಧಿಸಿದುದರ ಸಂಕ್ಷಿಪ್ತ ಚಿತ್ರಣ ಸದ್ಯ ಇಲ್ಲಿದೆ. ಈ ಪೀಠದ ಅಧಿಪತಿಗಳಾಗಿ ಬಂದ ಗುರು ಪರಂಪರೆಯು ಸಾಧಿಸಿದ ಕಾರ್ಯ, ಸಲ್ಲಿಸಿದ ಸೇವೆಯನ್ನು ಅನುಕ್ರಮವಾಗಿ ಸಾಧ್ಯವಾದಷ್ಟು ಇಲ್ಲಿ ನೀಡಿದೆ. ಪೀಠದ ಇತಿಹಾಸವನ್ನು ಗಮನಿಸಿದರೆ ಪ್ರಗತಿಪರ ನಿಲುವು, ಮಾಟಮಂತ್ರಗಳ ವಿರೋಧ, ವೈದ್ಯಕೀಯ ಸೇವೆ, ರಾಜಗುರುಗಳಾಗಿ ದೊರೆಗಳಿಗೆ ಮಾರ್ಗದರ್ಶನ, ಸಾಹಿತ್ಯ ಸೃಜನೆ, ಶೈಕ್ಷಣಿಕ ಸೇವೆ, ವಿದ್ಯಾಲಯಗಳ ಸ್ಥಾಪನೆ, ಪರಿಸರ ನಿರ್ವಹಣೆ, ವಾಸ್ತುವಿದ್ಯೆಗೆ ಪ್ರೋತ್ಸಾಹ, ಅನಾಥರಿಗೆ, ವೃದ್ಧರಿಗೆ, ದಲಿತರಿಗೆ ಆಶ್ರಯ, ಇತ್ಯಾದಿ ಸೇವಾ ಕಾರ್ಯಗಳು ನಡೆಯುತ್ತ ಬಂದಿರುವುದು ಕಾಣುತ್ತದೆ. ತತ್ಪರಿಣಾಮವಾಗಿ, ರಾಜರುಗಳಿಂದ ಹಾಗು ಜನಸಾಮಾನ್ಯರಿಂದ ಪೀಠಕ್ಕೆ ದಾನಾದಿಗಳು ಶಾಸನೋಕ್ತವಾಗಿ ಒದಗಿವೆ. ಭದ್ರಕಾಳಿ ಹಾಗು ದುರ್ಗೆ ಇತ್ಯಾದಿ ಸ್ತ್ರೀ ದೇವಿಯವರ ಉತ್ಸವಗಳು, ವೀರಭದ್ರ ಮೂರ್ತಿ ಪ್ರತಿಷ್ಠೆಗಳು ನಡೆದು ಬಂದಿವೆ. ವಾರದ ಸಂತೆಯು ಪೀಠದ ಮುಂದಿನ ಹೊರ ಆವರಣದಲ್ಲಿ ನಡೆಯುತ್ತಿದ್ದು. ಇದು ಭಕ್ತಾದಿಗಳು ವಿಪುಲ ಸಂಖ್ಯೆಯಲ್ಲಿ ಬಂದು ಹೋಗುತ್ತಿದ್ದ ಸಂಕೇತವೂ ಆಗಿದೆ.

ಪೀಠಾಧ್ಯಕ್ಷರಿಗೆ ಶಿಷ್ಯವೃಂದವು ಪ್ರತ್ಯಕ್ಷ ದರ್ಶನಕ್ಕೆ ಬಂದೋ, ಪತ್ರ ಬರೆದೋ ತಮ್ಮ ಅಹವಾಲುಗಳನ್ನು ಹೇಳಿಕೊಂಡು ಪರಿಹಾರ ಪಡೆಯುವ ಪರಂಪರೆಯೂ ಇಲ್ಲಿದೆ. ಶಿಷ್ಯವೃಂದವು ಪೀಠದವತಿಯಿಂದ ಪ್ರಕಟವಾದ ಸಾಹಿತ್ಯ ಕೃತಿಗಳ ಪ್ರಕಟಣ ವೆಚ್ಚವನ್ನು ಭರಿಸಿರುವುದು ಕೃತಿಗಳಲ್ಲಿರುವ ನಮೂದುಗಳಿಂದಲೇ ತಿಳಿಯುತ್ತದೆ. ಪೀಠವು ಅನೇಕ ಸೂಳ್ನುಡಿಕಾರರಿಗೆ (ವಚನಕಾರರಿಗೆ) ಉತ್ತೇಜನ ನೀಡಿ ಸೃಷ್ಟಿಸಿದೆ. ಪೀಠದ ಗುರುಗಳ ಮೇಲೆ ಜನಪದ ಗೀತೆಗಳು ಹುಟ್ಟಿವೆ. ಪೀಠದ ಗುರುಗಳ ಹೆಸರುಗಳನ್ನು ವಚನಾಂಕಿತ ಮಾಡಿಕೊಂಡಿರುವುದೂ ಉಂಟು.

ಹೀಗೆ ಪೀಠದ ಸಾಂಸ್ಕೃತಿಕ ಪರಂಪರೆಯು ಸಾಹಿತ್ಯಿಕ, ಆಧ್ಯಾತ್ಮಿಕ, ಸಾಮಾಜಿಕ, ಸೇವಾಧಾರೆಯಲ್ಲಿ ಸುಲಗ್ನವಾಗಿ, ತನ್ನ ವಿಶಿಷ್ಟ ಆಸ್ತಿತ್ವದ ಜೀವಧ್ವನಿಯನ್ನು ಜೀವನ ಧ್ವನಿಯಾಗಿ ರೂಪಿಸಿಕೊಂಡು ಬಾಳುತ್ತಾ ಸಮಾಜವನ್ನು ಬೆಳಗುತ್ತಾ ಬಂದಿದೆ.

ಅಡಿಟಿಪ್ಪಣಿಗಳು

೧. ಕನ್ನಡ ಕವಿಚರಿತೆ, ಭಾಗ III, ಪು ೨೨೨(ಮಹಾಂತ ದೇಶಿಕೇಂದ್ರನ ಶಿವಶರಣ ವಿಲಾಸ, ೧೬ನೆಯ ಸಂಧಿ).

೨. ಶ್ರೀಮತ್ಪುಲ್ಲಕವಿ ಪ್ರಣಿತಂಚೈನ ಶ್ರೀಶೈಲ ಪಂಡಿತಾರಾಧ್ಯ ಚರಿತ್ರಮು, ೧೯೫೪, ಬೆಂಗಳೂರು., ಪೀಠಿಕೆ, ಪು. ೨೯.

೨ಅ. ಎ.ಕ.೮ (ಹೊಸತು)..೧೯೮೪ ಹಾಸನ ಜಿಲ್ಲೆ, ಹೊಳೆನರಸೀಪುರ ೬೪ (ಅಂಕನಾಥಪುರ, ೧೧ನೇ ಶತಮಾನ !)

೩. ಬೆಟಗೇರಿ ಕೃಷ್ಣಶರ್ಮ..೧೯೬೯, ನಮ್ಮ ಸಂಸ್ಕೃತಿ ಪರಂಪರೆ, ಧಾರವಾಡ, ಪು ೧೧೧

೩ಅ. ಪುಲ್ಲಕವಿಯ ಪಂಡಿತಾರಾಧ್ಯ ಚರಿತ್ರಮು... ಅದೇ, ದ್ವಿತೀಯಾಶ್ವಾಸದ ಪದ್ಯಗಳು, ಪು. ೯೧

೪. ಪುಲ್ಲಕವಿ.., ಅದೇ, ಉಪೋದ್ವಾತ, ಪುಟ ೧೭

೫. ಪುಲ್ಲಕವಿ., ಅದೇ, ಪ್ರಥಮಾಶ್ವಾಸ, ವಚನ ೨೪೦, ಪುತ ೭೩.

೬. ಆಡಿ. K.Lalithamba, veerashaivism in Andhra, ICHR supported publication Brodiepet, Guntur-2, Andhra

೭. ಎಂ.ಜಿ. ನಾಗರಾಜ್: "ಶ್ರೀಶೈಲ ನಿಡುಮಾಮಿಡಿ ಮಹಾಸಂಸ್ಥಾನ ಪೀಠದ ಕೊಡುಗೆ", ದಾಸೋಹ ಸಿರಿ (ಪ್ರಸಂ.) ಪಂ. ಚೆನ್ನಪ್ಪ ಎರೇಸೀಮೆ – ೧೯೯೭, ಸಿದ್ದಗಂಗಾ ಕ್ಷೇತ್ರ, ಪುಟ ೪೧೨.

೭ಅ. ಪುಲ್ಲಕವಿ., ಅದೇ, ಉಪೋದ್ಬಾತ, ಪು. ೩೬

೮. ಎಂ.ಜಿ. ನಾಗರಾಜ್., ೧೯೯೯, ಸಾಂಸ್ಕೃತಿಕ ಶ್ರೀ ವೀರಭದ್ರಸ್ವಾಮಿ, ಶ್ರೀಮದ್ರಂಭಾಪುರಿಪೀಠ, ಬಾಳೆಹೊನ್ನೂರು, ಪು.೪೭,೪೯.

೮ಅ. ಪುಲ್ಲಕವಿ., ಅದೇ, ಉಪೋದ್ಬಾತ, ಪು. ೨೩.

೯. ಡಾ॥ ಶ್ರೀ ಜ.ಚ.ನಿ.: 'ಸನ್ನುತ ಶ್ರೀ ದಂಚ್ರಗುಂಡ ಶಿವಾಚಾರ್ಯ ಸನ್ನಿಧಿಯವರು' (ಚಂದ್ರಗುಂಡ ಶಿವಾಚಾರ್ಯಾಂಕ, ಮಾಮಿಡಿ ವಿಶೇಷಾಂಕ–೧೪, ಬೆಂಗಳೂರು ಸಂ. ೯, ಸಂ. ೩೫–೩೭, ಪುಟ–೧೨.)

೧೦. ಆಂಧ್ರದ ಪೋಲೇಪಲ್ಲಿಯ ಶ್ರೀ ಪಿ.ಎಂ. ಬಂಡಯ್ಯ ಸ್ವಾಮಿಗಳು ತಿಳಿಸಿದ ವಿಷಯ.

೧೧. ಡಾ॥ ಶ್ರೀ ಜ.ಚ.ನಿ, ೧೯೬೪ ಚಿತ್ಕಳಾಮೂರ್ತಿ ಚಂದ್ರಗುಂಡ ಶಿವಾಚಾರ್ಯ, ಶ್ರೀ ಜಚನಿ ಪುಸ್ತಕ ಬಂಢಾರ, ಬೆಂಗಳೂರು-೪, ಪು.೨೬

೧೨. ಎಂ.ಜಿ.ನಾಗರಾಜ್, 'ಪ್ರಾಚೀನ ವೀರಭದ್ರ ಕ್ಷೇತ್ರ ಅಬ್ಲೂಡು-ಚಾಗೆಯ ಇತಿಹಾಸ ಮತ್ತು ತತ್ಸಂಬಂಧೀ ವೀರಭದ್ರ ಕ್ಷೇತ್ರಗಳು', ದೈವಸಂಪದ (ರಜತ ಸ್ಮರಣ ಸಂಚಿಕೆ), ಅಬ್ಲೂಡು, ಶಿಡ್ಲಘಟ್ಟ ತಾಲ್ಲೂಕು, ಪು. ೩೩

೧೩. ಶ್ರೀಶೈಲ ಪೀಠದರ್ಶನ., ೧೯೯೭, (ಸಂ) ಶ್ರೀ ಜಚನಿ, ಬೆಂಗಳೂರು-೪, ಪು. ೧೮೧

೧೪. ಆಂಧ್ರಪ್ರದೇಶ ಡಿಸ್ಟ್ರಿಕ್ಟ್ ಗೆಜೆಟಿಯರ್ (ಅನಂತಪುರ ಡಿಸ್ಟ್ರಿಕ್ಟ್)

Andhra Pradesh District Gazetteer – Ananthapur District, Revised Edition (ED) Shivashankara Narayana, Hyderabad, 1970, P-88.

೧೫. ಎಂ.ಜಿ. ನಂಜುಂಡಾರಾಧ್ಯ: 'ನಿಡುಮಾಮಿಡಿ ಶ್ರೀಶೈಲ ಪೀಠಾಧಿಪತಿಗಳನ್ನು ಆರಾಧಿಸಿದ ರಾಜರು' ಶ್ರೀಶೈಲ ಪೀಠದರ್ಶನ, ಬೆಂಗಳೂರು, ಪುಟ ೨೦೮.

೧೬. ಹಂಪೆಯ ೧೧೮೯ರ ನಿಡುಗಲ್ಲು ಚೋಳರ ಶಾಸನವನ್ನು ಅನ್ವಯಿಸಿಕೊಂಡರೆ ಹೊಯ್ಸಳ ಚೋಳ ರಕ್ತಸಂಬಂಧದ (ಸೋಮಲಾದೇವಿ ಮುಮ್ಮಡಿ ಕಲೋತ್ತುಂಗನ ರಾಣಿಯಾಗಿದ್ದಳು) ಪ್ರತಿನಿಧಿಯಂತೆ ತೋರುವ ಇರುಂಗೋಳ ಚೋಳನ ಕಾಲದಲ್ಲಿಯೇ, ಈ ಘಟನೆ ನಡೆದಿರಬೇಕೆನ್ನುವಂತಾಗುತ್ತದೆ.

೧೭. ಡಾ॥ ಶ್ರೀ ಜ.ಚ.ನಿ., ೧೯೮೧, ನೋಡಿ ನಿಡುಮಾಮಿಡಿ.

೧೮. I ಪುಲ್ಲಕವಿ: ಪಂಡಿತಾರಾಧ್ಯ ಚರಿತ್ರಮು, ಉಪೋದ್ಘಾತ, ಪುಟ.೬೭

II ಡಾ॥ ಶ್ರೀ ಜ.ಚ.ನಿ.,೧೯೭೪, ಕರಿನಾಡ ಕರಿಬಸವೇಂದ್ರರು, ಪುಟ. ೬೫

೧೯. ಶ್ರೀಶೈಲ ಪೀಠದರ್ಶನ, ಪು. ೧೮೨ರಿಂದ ಮುಂದಿನ ೩ ಪುಟಗಳು.

೨೦. I. ಪುಲ್ಲಕವಿ, ಅದೇ, ಉಪೋದ್ಘಾತ, ಪು. ೬೪ ಮತ್ತು ಶ್ರೀ ನಿಡುಮಾಮಿಡಿ ಸ್ವಾಮಿಗಳವರ ಸಂಕ್ಷಿಪ್ತ ಚರಿತ್ರೆ, ೧೯೩೯, ಲೇ. ಎಸ್. ಹಂಪಯ್ಯ ಮುನ್ನುಡಿ ಪು.೯

೨೧. ಎಂ.ಜಿ. ನಾಗರಾಜ್ "ಶ್ರೀಶೈಲ ನಿಡುಮಾಮಿಡಿ ಮಹಾಸಂಸ್ಥಾನ ಪೀಠದ ಕೊಡುಗೆ", ದಾಸೋಹ ಸಿರಿ ೧೯೯೭ (ಪ್ರ.ಸಂ.)ಪಂ. ಚೆನ್ನಪ್ಪ ಎರೆಸೀಮೆ. ಶ್ರೀ ಸಿದ್ಧಗಂಗಾ ಕ್ಷೇತ್ರ, ಪು. ೪೧೬.

೨೨. ಶ್ರೀಶೈಲ ಪೀಠದರ್ಶನ, (ಸಂ.) ಡಾ॥ ಶ್ರೀ ಜ.ಚ.ನಿ.,೧೯೬೭, ೨೮೨ನೆಯ ನಂತರದ ಪುಟಗಳು

೨೩. ಶ್ರೀ ಬುದ್ದಯ್ಯಸ್ವಾಮಿ ಪುರಾಣಿಕ ಲೇಖನದಿಂದ ಉದ್ಧೃತ (ಪಲ್ಲಕವಿ: ಅದೇ ಉಪೋದ್ಘಾತ, ಪುಟ ೬೫,೬೮) ಶಿವಾನುಭವ ಅಕ್ಟೋಬರ್ ೧೯೩೫.

೨೪. ತಮಿಳುನಾಡಿನ ಪೆರಿಯಮಠದ ಜ॥ ಶಾಂತದೇವ ಸಾರಂಗದೇವ ದೇಶಿಕೇಂದ್ರ ಅವರು ತಿಳಿಸಿದ ವಿಷಯ.

೨೫. I ಎಂ.ಜಿ.ನಂಜುಂಡಾರಾಧ್ಯ., 'ನಿಡುಮಾಮಿಡಿ ಶ್ರೀಶೈಲ ಪೀಠವನ್ನು ಆರಾಧಿಸಿದ ರಾಜರು', ಶ್ರೀಶೈಲ ಪೀಠದರ್ಶನ, ಅದೇ ಪು. ೨೩೭

II ವೀರಶೈವ (ತ್ರೈಮಾಸಿಕ); (ಸಂ)ಎಸ್.ಸಿ. ನಂದಿಮಠ iv ಪು. ೨೮,೪೫.

೨೬. I ನಿಡುಮಾಮಿಡಿ ಶಿಲಾ ಬಸವಸ್ತಂಭ ಶಾಸನ ಎಂ.ಜಿ.ನಾಗರಾಜ್, ೮ ಶತಮಾನಗಳ ರೋಚಕ ಇತಿಹಾಸದ ನಿಡುಮಾಮಿಡಿ ಮಠ ಮಾಮಿಡಿ (ಸಂ. ೧೨ ಸಂಗಮ ಸಂಚಿಕೆ, ೪೬-೪೭, ೧೯೯೧, ಪು ೬೪)

೨೭. ಹಂಪಿ ಶಾಸನಗಳು, ೨೦೦೦, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೩, ಹಂಪಿ ಶಾಸನ ಸಂಖ್ಯೆ ೮೪, ಪು ೮೪.

೨೭ಅ. ಶ್ರೀ ಸಿ.ಟಿ.ಎಂ. ಕೊಟ್ರಯ್ಯ ಅವರು ಹೊರತಂದಿರುವ 'ಸರ್ವಾಂಗಲಿಂಗ' ಎಂಬ ಕೈಹೊತ್ತಿಗೆಯಲ್ಲಿ ಈ ವಿಷಯವನ್ನು ತಿಳಿಸಿದ್ದಾರೆ.

೨೮. ವಿರೂಪಾಕ್ಷ ಪಂಡಿತಾರಾಧ್ಯ ಚನ್ನಬಸವ ಪುರಾಣ, ೧೯೩೪, (ಸಂ)ಶಿ.ಶು ಬಸವನಾಳ, ಧಾರವಾಡ, ಪ್ರಸ್ತಾವನೆ, ಪು.೧೨೫, ಸಂಧಿ ೧, ಪದ್ಯ ೨೦.

೨೯. ಪಲ್ಲಕವಿ, ಅದೇ ಉಪೋದ್ಘಾತ, ಪು.೭೪

೩೦. ಗೂಳೂರಿನ ಛಲವಾದಿ ಓಬಳೇಶಪ್ಪ(೪೮) ಅವರಿಂದ (೧-೬-೨೦೦೩ ರಂದು) ಸಂಗ್ರಹಿಸಿದ ಮಾಹಿತಿ; ಛಲವಾದಿ ಚೌಡಪ್ಪ ಛಲವಾದಿ ದಾಸಪ್ಪ - ಛಲವಾದಿ ಓಬಳೇಶಪ್ಪ ಹೀಗೆ ಮೂರು ತಲೆಮಾರು ಸದ್ಯಕ್ಕೆ ತಿಳಿದಿದ್ದು ಅವರ ಹಿಂದಿನ ತಲೆ ಮಾರುಗಳು ಎಷ್ಟೋ ಕಳೆದುಹೋಗಿದ್ದು, ನೆನಪಿಲ್ಲ ಎಂದಿದ್ದಾರೆ.

೩೧. ಎಂ.ಎಂ. ಕುಲಬುರ್ಗಿ, ಕರ್ನಾಟಕದ ಕೈಫಿಯತ್ತುಗಳು, ೧೯೯೪, ಹಂಪಿ ಕನ್ನಡ ವಿಶ್ವವಿದ್ಯಾಲಯ, ಪು. ೪೬೩, ೫೨೫

೩೨. ಕರ್ನಾಟಕದ ಕೈಫಿಯತ್ತುಗಳು, ಅದೇ, ಪು. ೪೬೩, ೫೨೫

೩೩. ಪುಲ್ಲಕವಿ, ಅದೇ. ಆಶ್ವಾಸ ೫, ಪದ್ಯ ೬೮

೩೪. ಬುಕ್ಕರಾಯ ಚರಿತ್ರೆ, ೨೦೦೨ (ಸಂ) ಡಾ॥ ಎಸ್.ಸಿ.ಪಾಟೀಲ, ವಿಜಾಪುರ, ಪು. ಅನುಬಂಧಗಳು

೩೫. ಎಂ.ಜಿ.ನಾಗರಾಜ್, ೧೯೯೦, ಶ್ರೀ ಗೌರೀಶಂಕರದರ್ಶನ, ಬೆಂಗಳೂರು, ಪು.೧೪-೧೭

೩೬. ಈ ಸಂಗತಿಗಳು ಸಿರಪಿ ಆಂಜನೇಯಲು ಅವರ ಕರಿಬಸವಸ್ವಾಮಿ ಎಂಬ ಕೃತಿ; ನಾಗಸಂದ್ರಮ್ ವಾಸುದೇವರಾವ್ ಅವರ ಆಂಧ್ರ ರಾಜ್ಯದ ಅನಂತಪುರಂ ಮಂಡಲ ಚರಿತ್ರ; ಪುಲ್ಲಕವಿಯ ಪಂಡಿತಾರಾಧ್ಯ ಚರಿತ್ರ ಮು; ಸಿ.ಪಿ. ಬ್ರೌನ್ ಅವರ ಅನಂತಪುರ ಗ್ಯಾಸೆಟಿಯರ್‌ನಲ್ಲಿಯ 'ಅನಂತಪುರ ಜಿಲ್ಲ ಕಥಲು' ಪು.೨೬ ಹಾಗು ಈಚಿನ ಕೃತಿ ಡಾ॥ ಎಸ್.ಸಿ.ಪಾಟೀಲ, ಸಂಪಾದಿತ ಬುಕ್ಕರಾಯ ಚರಿತೆ (೨೦೦೨) ಇತ್ಯಾದಿ ಕೃತಿಯಲ್ಲೂ ಕಾಣಬಂದು (ಪು. ೧೨-೧೭) ವಿಷಯದ ಅಧಿಕೃತತೆಗೆ ಅನುವಾಗಿವೆ.

೩೭. ಎಂ.ಜಿ. ನಾಗರಾಜ್, ೧೯೯೯ ಸಾಂಸ್ಕೃತಿಕ ಶ್ರೀ ವೀರಭದ್ರಸ್ವಾಮಿ, ಶ್ರೀಮದ್ರಂಭಾಪುರಿ ಪೀಠ, ಪು. ೧೧೧-೧೧೪.

೩೮. ಬುಕ್ಕರಾಯ ಚರಿತ್ರೆ, ೨೦೦೨, (ಸಂ) ಡಾ॥ ಎಸ್.ಸಿ.ಪಾಟೀಲ, ವಿಜಾಪುರ, ಪು. ೧,೪ ರೀತ್ಯಾ ಕ್ರಿ.ಶ. ೧೩೬೪ ಬುಕ್ಕನ ಪ್ರಧಾನಿಯಾಗಿದ್ದವ ಚಿಕ್ಕಪ್ಪ ಒಡೆಯ ಎಂದಿದೆ. ಸಂಗಮ ಅರಸರಾದ ಹಕ್ಕ ಬುಕ್ಕರಿಗೆ ಈ ಮೊದಲೇ ಕುಲಗುರುವಾಗಿದ್ದ ಕಾಶಿವಿಲಾಸ ಕ್ರಿಯಾಸಕ್ತಿದೇವ ಒಡೆಯನು ವಿಜಯನಗರ ಸ್ಥಾಪನೆಯ ಕಾಲಕ್ಕೆ ಧರ್ಮಾಂಬುಧಿ ಕೆರೆ ಹಾಗು ಚನ್ನಕೇಶವ ದೇಗುಲಗಳನ್ನು ಸ್ಥಾಪಿಸಿ ಧರ್ಮಾವರಂ ಅನ್ನು ರೂಪಿಸಿದ್ದ. ಹಕ್ಕ ಬುಕ್ಕರಿಗೆ ಅದು ಕುಲಗುರುವಿನ.... ಆಶೀರ್ವದಿತ ನೆಲೆಯಾಗಿದ್ದುದರಿಂದ ಸಹಜವಾಗಿ ಪ್ರಧಾನಿ ಚಿಕ್ಕಪ್ಪ ಒಡೆಯ (ಸ್ಥಳೀಯ ಹಿರಿಯರ ಬಾಯಲ್ಲಿ ಚಿಕ್ಕಣ್ಣ ಒಡೆಯ) ಅದನ್ನು ಅಭಿವೃದ್ಧಿಗೊಳಿಸಿ ಅಭಿವೃದ್ಧಿಗೊಳಿಸಿ ಅಳ್ವಿಕೆಯನ್ನು ನಡೆಸಿರಬಹುದಾದ ಕಾರಣ ಜನರ ಬಾಯಲ್ಲಿ ಅವನು ಸ್ಥಾಪಕ ನೆಂದು ರೂಢಿಗೆ ಬಂದಿರಬಹುದು. ಆದರೆ ವಿಜಯನಗರದ ಕೊನೆ ಕಾಲಕ್ಕೆ ಒಂದು ಗ್ರಾಮವಾಗಿ ಉಳಿದಿದ್ದುದು ಕಾಣುತ್ತದೆ. ಹೀಗಾಗಿ

ರಾಮರಾಯನು ಹಂಡೆ ಹನುಮಪ್ಪ ನಾಯಕನಿಗೆ ಕೊಟ್ಟ ಗ್ರಾಮಗಳು ನಂದೇಲ ಗ್ರಾಮ, ಬುಕ್ಕರಾಯನಸಮುದ್ರ, ಧರ್ಮಾವರಂ, ಕಣುಕಲ್ಲು, ಬಳ್ಳಾರಿ ಕುರುಗೋಡು ಆಗಿದ್ದವು.

೩೯. ಎಂ.ಎಂ. ಕುಲಬುರ್ಗಿ, ಕರ್ನಾಟಕ ಕೈಫಿಯತ್ತುಗಳು, ೧೯೯೪, ಹಂಪಿ ಕನ್ನಡ ವಿಶ್ವ ವಿದ್ಯಾಲಯ ಪು. ೪೬೩, ೫೨೫.

೪೦. ಬುಕ್ಕರಾಯ ಚರಿತ್ರೆ, ಅದೇ, ಪು. ೫ ಮತ್ತು ಅನುಬಂಧ ೧

೪೧. ಬುಕ್ಕರಾಯ ಚರಿತ್ರೆ, ಅದೇ, ಪು. ೧೧-೧೭.

೪೨. ಎಂ.ಜಿ. ನಾಗರಾಜ್, ಪ್ರಾಚೀನ ವೀರಭದ್ರ ಕ್ಷೇತ್ರ, ಅಬ್ಲೂಡು- ಚಾಗೆಯ ಇತಿಹಾಸ ಮತ್ತು ತತ್ಸಬಂಧೀ ವೀರಭದ್ರ ಕ್ಷೇತ್ರಗಳು, ದೈವಸಂಪದ, (ರಜತ ಸ್ಮರಣ ಸಂಚಿಕೆ), ೨೦೦೩, ಅಬ್ಲೂಡುಚಾಗೆ ಶ್ರೀ ವೀರಭದ್ರಸ್ವಾಮಿ ಭಕ್ತಮಂಡಳಿ, ಶಿಡ್ಲಘಟ್ಟ, ತಾ. ಕೋಲಾರ ಜಿಲ್ಲೆ, ಪು. ೩೦-೩೨.

೪೩. ಎಸ್.ಕೆ. ರಾಮಚಂದ್ರರಾವ್, ೧೯೭೫, ಮೂರ್ತಿಶಿಲ್ಪ ನೆಲೆ ಹಿನ್ನೆಲೆ, ಬೆಂಗಳೂರು ವಿಶ್ವವಿದ್ಯಾಲಯ, ಪು. ೧೧೧.

ಗುರುಪೀಠದ ಚರಿತ್ರೆ ಎಂದರೆ ಶ್ರದ್ಧೆಯ ಪಾರಂಪರಿಕ ರೂಢಿ ಎನ್ನುವುದುಂಟು. ಆದರೆ ಆಕರಗಳಿದ್ದಾಗ ಚರಿತ್ರೆಯ ಅಂಗಳದಿಂದ ಅದನ್ನು ಹೊರಗಿಡಲು ಬರುವುದಿಲ್ಲ. ಇತಿಹಾಸವೆಂದರೆ ರಾಜರ, ರಾಜ್ಯಾಡಳಿತದ ಚರಿತ್ರೆ ಎಂದು ಈವರೆಗೆ ಹೇಳಿಕೊಂಡು ಬಂದಿರುವ ರೂಢಿ ಇದೆ. ಆದರೆ ಜನಜೀವನದ ಮೇಲೆ ಪರಿಣಾಮ ಬೀರದಿದ್ದರೆ ಅದು ಗತ ಇತಿಹಾಸವಾಗುತ್ತದೆಯೇ ವಿನಾ ಜೀವಂತ ಇತಿಹಾಸವಾಗುವುದಿಲ್ಲ. ಸದ್ಯ ಪ್ರಾಚೀನ ಪರಂಪರೆಯುಳ್ಳ ಚಿಕ್ಕಬಳ್ಳಾಪುರ ಜಿಲ್ಲೆಯ ಶ್ರೀ ನಿಡುಮಾಮಿಡಿ ಪೀಠವನ್ನು ಕುರಿತು ಶ್ರೀ ಎಂ.ಜಿ. ನಾಗರಾಜ್ ಅವರು ಸಂಕ್ಷಿಪ್ತ ಇತಿಹಾಸವನ್ನು ಬರೆದಿದ್ದಾರೆ. ಇದರಲ್ಲಿ ಪೀಠದ ಗುರುಗಳ ಚರಿತ್ರೆಯನ್ನಷ್ಟೆ ಬರೆಯದೆ, ಕೇವಲ ಪೀಠದ ಶಿಷ್ಯರ ಮನೆತನದ ಚರಿತ್ರೆಯನ್ನೇ ಅಲ್ಲದೆ ಅವರ ಸೇವೆ, ಕೊಡುಗೆಗಳನ್ನು ಗಮನಾರ್ಹವಾಗಿ ನಿರೂಪಿಸಲಾಗಿದೆ. ಪುಸ್ತಕ ಪ್ರಕಟನೆಗೆ ನೆರವಾದವರ ಅಥವಾ ಪ್ರಾಯೋಜಕರಾದವರ ವಿವರಗಳನ್ನಷ್ಟೆ ಕೊಡುವುದಕ್ಕಿಂತ ಇಡೀ ಶಿಷ್ಯ ವೃಂದದ ಪ್ರಾತಿನಿಧಿಕ ಇತಿಹಾಸವನ್ನು ಕೊಡುವುದು, ಗುರುಪೀಠ ಹಾಗು ಶಿಷ್ಯ ಸಂಪತ್ತಿನ ನಿರಂತರತೆಯ ಪರಿಚಯ, ವಿವೇಚನೆಗೆ ಅವಕಾಶವಾಗುತ್ತದೆ. ಇದೊಂದು ರೀತಿಯ ಹೊಸ ಬಗೆಯ ಕೃತಿ ಎನಿಸುತ್ತದೆ. ಶ್ರೀ ನಾಗರಾಜ್ ಅವರಿಗಿರುವ ಸಾಹಿತ್ಯಕ, ಸಂಶೋಧನಾ ಪ್ರವೃತ್ತಿಯ ಪ್ರತೀಕವಾಗಿ ಈ ಕೃತಿ ಹೊರಬಂದಿದೆ. ಅವರ ಯಾವುದೇ ಬರಹದಲ್ಲಿ ಹೊಸತೊಂದನ್ನು ಓದುಗರ ಮುಂದಿಡುವ ಹವಣಿರುತ್ತದೆ. ಅದನ್ನು ಅವರು ಯಶಸ್ವಿಯಾಗಿ ಸಾಧಿಸಿದ್ದಾರೆ. ಶ್ರೀ ನಿಡುಮಾಮಿಡಿ ಮಹಾಸಂಸ್ಥಾನ ಪೀಠದ ಇತಿಹಾಸವನ್ನು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಆಕರಗಳ ಮೂಲಕ ವಿಶ್ಲೇಷಿಸಿ ಬರೆದಿದ್ದಾರೆ. ಈ ಗ್ರಂಥದಲ್ಲಿ ಪೀಠದ ಧಾರ್ಮಿಕ, ಸಾಮಾಜಿಕ ಇತಿಹಾಸವಲ್ಲದೆ, ಅಲ್ಲಿನ ವೀರಭದ್ರನ ಸಾಂಸ್ಕೃತಿಕ ಚರಿತ್ರೆಯನ್ನೂ ಮನಮುಟ್ಟುವಂತೆ ಹೇಳಿರುವುದು ಸ್ತುತ್ಯರ್ಹವಾಗಿದೆ. ಈ ಕೃತಿ ರಚನೆಯಲ್ಲಿ ಶ್ರೀಯುತರು ಉಪಲಬ್ಧ ಆಕರಗಳನ್ನು ಸಮಯೋಚಿತವಾಗಿ ಬಳಸಿಕೊಂಡಿದ್ದಾರೆ. ಪೀಠದ ಇತಿಹಾಸದ ಈ ಕೃತಿಗೆ ಅಧಿಕೃತತೆಯನ್ನು ತಂದುಕೊಟ್ಟಿದ್ದಾರೆ. ಶ್ರೀಯುತರು ಪೀಠದ ಪೂರ್ಣಪ್ರಮಾಣದ ಇತಿಹಾಸ ಗ್ರಂಥವನ್ನು ಶೀಘ್ರವಾಗಿ ಬರೆದು, ಸಾಹಿತ್ಯ-ಸಂಶೋಧನ ಕ್ಷೇತ್ರಕ್ಕೆ ಶ್ರೀಮಂತ ಕಾಣಿಕೆ ನೀಡಲೆಂದು ಹಾರೈಸುತ್ತೇನೆ. ಶ್ರೀಮಠದ ಇತಿಹಾಸ ಕುರಿತು ಅವರು ಮುಂದೆ ಬರೆಯಲಿರುವ ಸಮಗ್ರ ಕೃತಿಗೆ ಈ ಹೊತ್ತಗೆಯು ಅಸ್ತಿಭಾರವಾಗುತ್ತದೆ ಎಂದು ಭಾವಿಸಿ ಲೇಖಕರನ್ನು ಅಭಿನಂದಿಸುತ್ತೇನೆ.

ಬೆಂಗಳೂರು

ಎನ್. ಬಸವಾರಾಧ್ಯ
ಅಧ್ಯಕ್ಷರು (1998-2001)
ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

ಬೆಲೆ: ರೂ. 50